
ಐಕ್ಯರಂಗ

ದುಡಿವ ಜನರ ಪ್ರಾಣ ಮಿತ್ರ

ಸಂಪುಟ 25 ಸಂಚಿಕೆ 23
ಜೂನ್ 8, 2003 ಬೆಲೆ ರೂ. 3.00

ಗ್ರಾಮೀಣ ಕೃಪಾಂಕ: ಮುಂದೇನು ?





ಬಿಜೆಪಿಯಲ್ಲಿ ಬಂಡಾಯ ಸಂಕೇಶ್ವರ ವಿದಾಯ




ಕೇಂದ್ರ ಸಂಪುಟ ವಿಸ್ತರಣೆ ರಾಜಕೀಯ ಭ್ರಷ್ಟಾಚಾರ ಅಂಗೀಕಾರ



ಇರಾಕ್ ಮೇಲೆ ವಿಶ್ವಸಂಸ್ಥೆ ನಿರ್ಣಯ ದರೋಡೆಗಾರನಿಗೆ ಆಸ್ತಿ ಪಟ್ಟಾ

ವಿಮೋಚನಾ ಸಮರದಲ್ಲಿ....

ಮೇಜರ್ ಜಯಪಾಲ್ ಸಿಂಗ್



ಆತ್ಮಕಥನ 29

ಹಿಂದಿನ ಸಂಚಿಕೆಯಲ್ಲಿ ಮುಷ್ಕರ ವಾಪಸು ಪಡೆಯುವಂತೆ ವಲ್ಲಭಾಯಿ ಪಟೇಲ್ ಕರೆ, ಕ್ರಾಂತಿಕಾರಿ ಪದಪುಂಜಗಳನ್ನು ಬಳಸುವುದರಿಂದಲೇ ಯಾರೂ ಕ್ರಾಂತಿಕಾರಿಗಳಾಗಲು ಸಾಧ್ಯವಿಲ್ಲ ಎಂಬುದನ್ನು ಅರಿತ ಮೇ॥ ಜಯಪಾಲ್‌ಸಿಂಗ್. ಸೇನೆ ತೊರೆಯುವಿಕೆ ಮತ್ತು ಪ್ರವಾಸ ರದ್ದುಗೊಳಿಸಿದ ಮೇಜರ್, ರಾಷ್ಟ್ರೀಯ ಆಂದೋಲನಕ್ಕೆ ಸ್ವತಂತ್ರ ಅಭಿವೃದ್ಧಿ ಪಥ ರೂಪಿಸಲಾಗದ ಸಮಾಜವಾದಿಗಳು ಈ ಬಗ್ಗೆ ಓದಿರುವಿರಿ. ಮುಂದೆ...



ಕನ್ನಡಕ್ಕೆ: ವಿಶ್ವ ಕುಂದಾಪುರ

ಬ್ರಿಟಿಷ್ ಸಂಚು ಭಗ್ನಗೊಳಿಸಲು ಯೋಜನೆ

ಬ್ರಿಟಿಷರು ತಮ್ಮ ಆಕ್ರಮಣವನ್ನು ಲಂಗುಲಗಾಮಿಲ್ಲದೆ ಮುಂದುವರಿಸಿದರು. ಆಪರೇಷನ್ ಅಸ್ಸೆಲಮ್ ಹೆಸರಿನ ಕಾರ್ಯಾಚರಣೆಯನ್ನು ಯೋಜಿಸಲಾಯಿತು.

ಭಾರತೀಯರಿಗೆ 'ಆಪರೇಷನ್ ಅಸ್ಸೆಲಮ್' ಬಗ್ಗೆ ಗೊತ್ತು. ಈ ಕುಹಕ ಯೋಜನೆಯನ್ನು ಬಹಿರಂಗಗೊಳಿಸುವ ಮೂಲಕ ಕಮ್ಯುನಿಸ್ಟ್ ಪಕ್ಷ ಭಾರತದ ಜನರಿಗೆ ಅನುಪಮ ಸೇವೆ ಸಲ್ಲಿಸಿತು. ಅದು ಈ ಯೋಜನೆಯನ್ನು ಪುಸ್ತಿಕೆ ರೂಪದಲ್ಲಿ ಪ್ರಕಟಿಸಿತು. ಅದೇ ವೇಳೆ, ಭೂಗತವಾಗಿದ್ದ ಭಾರತೀಯ ಸಶಸ್ತ್ರ ಪಡೆಗಳ ಕ್ರಾಂತಿಕಾರಿ ಕ್ರಿಯಾಮಂಡಳಿಯೂ ಕೂಡ ಇದನ್ನು ಪ್ರಕಟಿಸಿತು. ಮಂಡಳಿಯು ಸೇನಾ ಪಡೆಗಳಿಂದ ಹೊರಗಡೆ ಕಾರ್ಯನಿರ್ವಹಿಸುತ್ತಿದೆ ಎಂಬುದನ್ನು ಅದು ಮೊದಲ ಬಾರಿಗೆ ಬಹಿರಂಗಪಡಿಸಿತು ಹಾಗೂ ಬ್ರಿಟಿಷರು ಮತ್ತೆ ಮೇಲುಗೈ ಸಾಧಿಸಲು ಯತ್ನಿಸಿದರೆ ಅವರ ವಿರುದ್ಧ ಹೋರಾಡಲು ಸಿದ್ಧವಿರುವಂತೆ ಅದು ಕರೆ ನೀಡಿತು. ಈ ಬಗ್ಗೆ ನಾನು ನಂತರ ಹೇಳುತ್ತೇನೆ. ಈಗ 'ಆಪರೇಷನ್ ಅಸ್ಸೆಲಮ್' ಎಂದರೇನೆಂದು ನೋಡೋಣ.

'ಆಪರೇಷನ್ ಅಸ್ಸೆಲಮ್' (ಆಶ್ರಯ ಕಾರ್ಯಾಚರಣೆ) ಒಂದು ರಾಜಕೀಯ ಹಾಗೂ ಮಿಲಿಟರಿ ಯೋಜನೆ. ನನಗೆ ಸಂಬಂಧಿಸಿರುವ ಸೇನೆಯೊಂದಿಗಿನ ಅದರ ವಿಚಾರವೇನೆಂಬುದಕ್ಕಷ್ಟೇ ನಾನು ಸೀಮಿತಗೊಳಿಸುತ್ತೇನೆ.

ಚಕ್ಲಲಾದಲ್ಲಿನ ನನ್ನ ಘಟಕವನ್ನು ಬರ್ಖಾಸ್ತುಗೊಳಿಸುವ ಕೆಲಸವನ್ನು ಮಾರ್ಚ್‌ನಲ್ಲಿ ಮುಗಿಸಿದೆ. ನನ್ನನ್ನು ಆವಡಿಯಲ್ಲಿರುವ ರಿಸರ್ವ್ ಬೇಸ್ ಸರಬರಾಜು ಡಿಪೋಗೆ ನಿಯೋಜಿಸಲಾಯಿತು. ನಾನು ಅಲ್ಲಿಗೆ ತೆರಳಲು ಸಿದ್ಧನಾಗುತ್ತಿದ್ದೆ. ಅಷ್ಟರಲ್ಲಿ ಅಲ್ಲಿನ ನನ್ನ ನಿಯೋಜನೆಯನ್ನು ರದ್ದುಪಡಿಸಿದ ಸೂಚನೆ ವಾಯುಪಡೆ ಜಿ.ಎಚ್.ಕ್ಯೂನಿಂದ ಬಂತು. ಬೇರೆ ಕಡೆ ತೆರಳುವಂತೆ ಸೂಚಿಸಲಾಯಿತು. ಧನಬಾದ್ ಸಮೀಪದ ಚಾಪುಸನಲ್ಲಿರುವ ವೈಮಾನಿಕ ಸರಬರಾಜು ಘಟಕದ ಉಸ್ತುವಾರಿಗೆ ನನ್ನನ್ನು ನೇಮಿಸಲಾಯಿತು ಇದರಿಂದ ನನಗೆ ಅನುಮಾನ ಉಂಟಾಯಿತು. ಯಾಕೆಂದರೆ ನನ್ನ ಸೇನೆಯ ಜೀವನದುದ್ದಕ್ಕೂ ವೈಮಾನಿಕ ಸರಬರಾಜಿನಲ್ಲಿ ಪರಿಣತನಾಗಿರುವಾಗ ನನ್ನನ್ನು ತೈಲ ಮತ್ತು ಪಡಿತರ ಉಸ್ತುವಾರಿಗೆ ಯಾಕೆ ನೇಮಿಸಿಕೊಳ್ಳಬೇಕೆಂದು ನಾನು ಪ್ರಶ್ನಿಸಿದ್ದೆ.

ಅವೆಲ್ಲವನ್ನು ಬರ್ಖಾಸ್ತುಗೊಳಿಸಲಾಗುತ್ತದೆಂದು ನನಗಾಗ ತಿಳಿಸಲಾಗಿತ್ತು.

ಆದರೆ ಈಗ ನನಗೆ ಭಾರತೀಯ ಸೇನೆಯ ಅತ್ಯಂತ ವೈಮಾನಿಕ ಸರಬರಾಜು ಘಟಕದ ಕಮಾಂಡ್ ವಹಿಸಿಕೊಡಲು ಸಿದ್ಧತೆ ನಡೆದಿತ್ತು. "ಬ್ರಿಟಿಷರು ಏನೋ ಆಟವಾಡುತ್ತಿದ್ದಾರೆ" ಎಂದು ನನಗೆ ಅನುಮಾನ ಬಂತು.

ನನ್ನನ್ನು ನೇಮಕಗೊಳಿಸಲಾದ ಘಟಕ ಚಾಸ್ ಅರಣ್ಯದಲ್ಲಿ ಶಿಬಿರ ಹೂಡಿತ್ತು, ಸೈನಿಕರು ಅಮಾನವೀಯ ಪರಿಸ್ಥಿತಿಗಳಲ್ಲಿ ಬದುಕುತ್ತಿದ್ದರು. ಈ ಘಟಕಕ್ಕೆ ಪೂರ್ವವಾಗಿ ಬ್ರಿಟಿಷ್ ಅಧಿಕಾರಿಗಳೇ ಅಧಿಪತಿಗಳಾಗಿದ್ದರು. ಅವರು ಯುದ್ಧದಿಂದ ಬೇಸತ್ತಿದ್ದರು. ಹೀಗಾಗಿ ಒಬ್ಬೊಬ್ಬರೇ ಇದರಿಂದ ಮುಕ್ತವಾಗಿ ಹೊರ ಹೋಗುತ್ತಿದ್ದರು. ಅವರ ಕರ್ತವ್ಯದ ನಿಗದಿತ ಅವಧಿಗಿಂತ ಒಂದು ದಿನವೂ ಹೆಚ್ಚಿಗೆ ಇರಲು ಬಯಸುತ್ತಿರಲಿಲ್ಲ. ಹೀಗಾಗಿ ಗತ್ಯಂತರವಿಲ್ಲದೆ, ಅನುಮಾನಾಸ್ಪದ ನಿಷ್ಠೆಯ ಭಾರತೀಯರೊಬ್ಬರನ್ನು ಅದರ ಮುಖ್ಯಸ್ಥರನ್ನಾಗಿ ಮಾಡಬೇಕಿತ್ತು. ತಾಂತ್ರಿಕ ಹುದ್ದೆಗೆ ಯಾವುದೇ ಬ್ರಿಟಿಷ್ ಅಧಿಕಾರಿ ದೊರಕಲಿಲ್ಲ. ನನಗೆ ಆಶ್ಚರ್ಯವಾಯಿತು. ಇನ್ನೊಂದು ಘಟಕವನ್ನು ಬರ್ಖಾಸ್ತುಗೊಳಿಸಲು ನನ್ನನ್ನು ಕಳಿಸಲಾಗುತ್ತಿದೆಯೇ?

> **"ನನ್ನ ಅಧಿಕಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡೆ ನನ್ನ ಬ್ರಿಟಿಷ್ ವಿರೋಧಿ ಭಾವನೆಗಳನ್ನು ಅವರಿಂದ ಮುಚ್ಚಿಡಲಿಲ್ಲ. ಆದರೆ ನನ್ನ ಅಧೀನವಿದ್ದ ಅಧಿಕಾರಿಗಳು ಬ್ರಿಟಿಷ್ ವಿರೋಧಿ ಭಾವನೆಗಳನ್ನು ವ್ಯಕ್ತಪಡಿಸುವಲ್ಲಿ ಶಿಸ್ತಿನ ಗೆರೆಯನ್ನು ದಾಟದಂತೆ ಜಾಗೃತಿವಹಿಸಿದೆ.**

ಕೆಲವು ದಿನಗಳ ನಂತರ ಕರ್ನಲ್ ಇಂಗ್ಲಿಸ್ ಚೌಸ್‌ಗೆ ಬಂದಿಳಿದರು. ಅವರು ಐ.ಆರ್.ಎ.ಎಂ.ಓ. ನೇತೃತ್ವ ವಹಿಸಬೇಕಿತ್ತು. ಕಾರ್ಯಾಚರಣೆ ಕರ್ತವ್ಯಗಳಿಗಾಗಿ ನನ್ನ ಘಟಕ ಐ.ಆರ್.ಎ.ಎಂ.ಓ.ಗೆ ಹೊಂದಿಕೊಂಡಿರಬೇಕಿತ್ತು.

ಈ ಅಧಿಕಾರಿ (ಕರ್ನಲ್ ಇಂಗ್ಲಿಸ್) ಮಿಲಿಟರಿ ಶಿಸ್ತಿನ ಕಟ್ಟಾಳು ಆಗಿದ್ದರು. ಸೇನೆಯ ನಿಯಮಾವಳಿಗಳನ್ನು ಚಾಚೂ ತಪ್ಪದೆ ಪಾಲಿಸಬೇಕೆಂಬ ಧೋರಣೆಯವರಾಗಿದ್ದರು. ಈ ಅಂಥ ಶಿಸ್ತಿನ ಅನುಕರಣೆ ಎಷ್ಟರಮಟ್ಟಿಗಿದ್ದಿಂದರೆ ತನ್ನ ಬೇರರ್ ಅನ್ನು ಕೆಲಸವಿಲ್ಲದ ಅವಧಿಯಲ್ಲೂ ಪರೇಡ್ ಮಾಡಿಸುತ್ತಿದ್ದರು.

ಮೊದಲ ದಿನವೇ ನಾವು ಜಗಳವಾಡಿದೆವು. ಕೊನೆತನಕ, ಅಂದರೆ ಬ್ರಿಟಿಷ್ ಸಶಸ್ತ್ರ ಪಡೆಗಳನ್ನು ತೊರೆಯುವ ನಿರ್ಧಾರ ಕೈಗೊಂಡ ದಿನದವರೆಗೂ ಜಗಳ ಮುಂದುವರಿಯಿತು. ವೈಯಕ್ತಿಕ ನೆಲೆಯಲ್ಲಿ ನಮ್ಮ ಸಂಬಂಧ ಉತ್ತಮವಾಗಿದ್ದರೂ ರಾಜಕೀಯ ವಿಚಾರದಲ್ಲಿ ನಾನು ಕಾದಾಡುತ್ತಿದ್ದೆವು. ಆತನ ವಿಸ್ಕಿಗೆ ನಾನು ದುಡ್ಡು ಕೊಡುತ್ತಿದ್ದೆ, ಸಾಧ್ಯವಾದಷ್ಟು ಮಟ್ಟಿಗೆ ಆತನೊಂದಿಗೆ ಚೆನ್ನಾಗಿರಬೇಕೆಂಬ ಆಶಯದೊಂದಿಗೆ.

"ನಮ್ಮ ಘಟಕ 'ಆಪರೇಷನ್ ಅಸ್ಸೆಲಮ್'ಗೆ ನಿಯೋಜಿತವಾಗಿದೆ. ತಕ್ಷಣವೇ ನಿಮ್ಮ ಪಡೆಗಳನ್ನು ಹಾಗೂ ಸಾರಿಗೆಯನ್ನು ಪಡೆಯಿರಿ. ಘಟಕವನ್ನು ತರಬೇತಿ ಹಾಗೂ ಸಾಧನ ಸಲಕರಣೆಯಲ್ಲಿ ಜುಲೈನೊಳಗೆ ಫೀಲ್ಡ್ ಸರ್ವಿಸ್ ಮಟ್ಟಕ್ಕೆ ತರಬೇಕು. ಜುಲೈ ಒಂದರ ವೇಳೆಗೆ ನೀವು ನಿಮ್ಮ ಘಟಕದೊಂದಿಗೆ ಬರಾಕ್‌ಪುರಕ್ಕೆ ತೆರಳಬೇಕು" ಎಂದು ಆತ ನನಗೆ ತಿಳಿಸಿದ.

ಸಕಾಲದಲ್ಲಿ ಸನ್ನದ್ಧನಾಗಿ ಪಡೆಗಳೊಂದಿಗೆ ಬರಾಕ್‌ಪುರ ಏರ್‌ಫೀಲ್ಡ್‌ಗೆ ನಿಗದಿತ ಸಮಯದಲ್ಲಿ ತೆರಳಿದೆ. ಅಲ್ಲಿ ಇಬ್ಬರು ಭಾರತೀಯ ಅಧಿಕಾರಿಗಳಾದ ಕ್ಯಾಪ್ಟನ್ ಎನ್.ಜಿ.ಘೋಷ್ ಮತ್ತು ಲೆಫ್ಟಿನೆಂಟ್ ರಾಯ್ ಸೆಕ್ಸೆನ್ ಅಧಿಕಾರಿಗಳಾಗಿ ನಮ್ಮ ಘಟಕವನ್ನು ಸೇರಿದರು.

ನಾನಲ್ಲದೆ ಈ ಘಟಕಕ್ಕೆ ಬಂದ ಮೊದಲ ಭಾರತೀಯರಾಗಿದ್ದರು ಇವರು. ನಾನವರನ್ನು ಸಂತೋಷದಿಂದ ಸ್ವಾಗತಿಸಿದೆ. ನನಗವರು ಬೇಕಾಗಿದ್ದರು. ಕೆಲವು ತಿಂಗಳ ನಂತರ ಇನ್ನೂ ಇಬ್ಬರು ಸೇರಿದರು. ಒಬ್ಬನ ಹೆಸರು ಸಿಂಗ್, ಆತ ಸಿಖ್ ಆಗಿದ್ದ ಇನ್ನೊಬ್ಬ ಉತ್ತರ ಪ್ರದೇಶದವರು, ಹೆಸರು ಮರೆತಿದ್ದೇನೆ.

ಆದಾಗ್ಯೂ, ನನ್ನ ಕೇಂದ್ರ ಸ್ಥಾನದಲ್ಲಿ ನಾಲ್ವರು ಬ್ರಿಟಿಷ್ ಅಧಿಕಾರಿಗಳು ಇನ್ನೂ ಪ್ರಮುಖಸ್ಥಾನಗಳಲ್ಲಿ ಇದ್ದರು. ಒಬ್ಬ ಅಡ್ಜುಟೆಂಟ್ ಹಾಗೂ ಸೆಕ್ಷನ್ ಕಮಾಂಡರ್‌ಗಳು, ಒಬ್ಬ ರೌಡಿ ಮತ್ತು ಭಾರತ ವಿರೋಧಿ ಹುಳು.

ಘಟಕದ ಪಾತ್ರಕ್ಕೆ ಸಂಬಂಧಿಸಿದಂತೆ ನನ್ನ ಭಾರತೀಯ ಅಧಿಕಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡೆ. ಅವರ ಕಮಾಂಡಿಂಗ್ ಆಫೀಸರ್ ಆಗಿ ಅದಕ್ಕಿಂತ ಹೆಚ್ಚು ಮುಕ್ತ ಆಗಿರಲಾರೆ. ಎಲ್ಲಕ್ಕಿಂತ ಹೆಚ್ಚಾಗಿ ನನ್ನ ಬ್ರಿಟಿಷ್ ವಿರೋಧಿ ಧೋರಣೆಯನ್ನು ಅವರಿಂದ ಮುಚ್ಚಿಡಲಿಲ್ಲ. ಆದರೆ ಅವರು ಬ್ರಿಟಿಷ್ ವಿರೋಧಿ ಭಾವನೆ ವ್ಯಕ್ತಪಡಿಸುವಲ್ಲಿ ಶಿಸ್ತಿನ ಗೆರೆಯನ್ನು ದಾಟದಂತೆ ನೋಡಿಕೊಂಡೆ ಮೆಸ್‌ನಲ್ಲಿನ ಆಹಾರಕ್ಕೆ ಸಂಬಂಧಿಸಿದಂತೆ ಜಗಳಗಳಾದವು, ಬಿಳಿಯ ಅಧಿಕಾರಿಗಳ ಭಾರತ ವಿರೋಧಿ ನಿಲುವು ಇಬ್ಬರು ಬಂಗಾಳಿ ಅಧಿಕಾರಿಗಳಲ್ಲಿ ರೋಷವನ್ನು ಬಡಿದೆಬ್ಬಿಸಿತು. ನಾನು ಅವರಿಗೆ ಶಾಂತಿಯಿಂದ ಇರುವಂತೆ ಸೂಚಿಸಿದೆ. ಉತ್ತಮ ಭಾರತೀಯರಿಗೆ ಅನುಗುಣವಾಗಿ ಅವರು ನನ್ನ ಸಲಹೆಯನ್ನು ಅಂಗೀಕರಿಸಿದರು.

ನಾನು ಮತ್ತೊಮ್ಮೆ 'ಆಪರೇಷನ್ ಅಸ್ಸೆಲಮ್' ಅದರ ಸೇನಾ ಆಯಾಮದ ಬಗ್ಗೆ ಹೇಳುತ್ತೇನೆ. ಆಪರೇಷನ್ ಅಸ್ಸೆಲಮ್ ಅನ್ನು ಬ್ರಿಟಿಷರು ಅನುಷ್ಠಾನಗೊಳಿಸುವುದೇ ನಿಶ್ಚಿತವಾದಲ್ಲಿ ಅದನ್ನು ಚೂರು ಚೂರುಗೊಳಿಸಲು ನಾವು ಬೇಕಾದ ಎಲ್ಲ ಕ್ರಮಗಳನ್ನು ಕೈಗೊಂಡೆವು.

ಪೂರ್ವ ಕಮಾಂಡ್‌ನಿಂದ ಭಾರತೀಯರ ವಿರುದ್ಧ ಕಾರ್ಯಾಚರಣೆ ನಡೆಸಲು ಬ್ರಿಟಿಷರು ಯೋಜಿಸಿದ್ದರು. ಈ ಕಮಾಂಡ್‌ನ 'ವಾಯುನೆಲೆ'ಗಳಿಂದ ನನ್ನ ಘಟಕ ವೈಮಾನಿಕ ಸರಬರಾಜು ಮಾಡಬೇಕಿತ್ತು. ಸಂಪರ್ಕ ವ್ಯವಸ್ಥೆ ತೀವ್ರವಾಗಿ ಅಸ್ತವ್ಯಸ್ತವಾಗಲಿದೆ ಹಾಗೂ ಸಂಪರ್ಕ ಮತ್ತು ಸರಬರಾಜಿಗೆ ವೈಮಾನಿಕ ಸರಬರಾಜೇ ಪ್ರಮುಖ ಸಾಧನವಾಗಲಿದೆ ಎಂದು ಬ್ರಿಟಿಷರು ಮುಂಗಂಡಿದ್ದರು.

ನಿಗದಿತ ದಿನದಂದು ಬರಾಕ್‌ಪುರ, ಪನ್ನಾಗಢ ಮತ್ತು ಪೂರ್ವ ಕಮಾಂಡ್ ದಕ್ಷಿಣ ಕಮಾಂಡ್ ಹಾಗೂ ಉತ್ತರ ಕಮಾಂಡ್‌ನಲ್ಲಿನ ವೈಮಾನಿಕ ಸರಬರಾಜು ಘಟಕಗಳನ್ನು ಹಾಳುಗೆಡವಲು ನಾವು ಯೋಜಿಸಿದೆವು. ಪ್ಯಾರಚೂಟ್‌ಗಳಲ್ಲಿ ತೂತು ಮಾಡಬೇಕು ಹಾಗೂ ಇತರ ಸಲಕರಣೆ ಡಿಪೋಗಳಿಗೆ ಬೆಂಕಿ ಹಚ್ಚುವುದೆಂದು ನಿರ್ಧರಿಸಿದೆವು.

ಈ ಹಂತದಲ್ಲಿ ರಾಷ್ಟ್ರೀಯ ಸನ್ನಿವೇಶದಲ್ಲಿ ಬಿಕ್ಕಟ್ಟು ಉಂಟಾಗಿತ್ತು. ಐಎನ್ಎ ಸೈನಿಕರನ್ನು ದೊಡ್ಡ ಪ್ರಮಾಣದಲ್ಲಿ ಬಿಡುಗಡೆ ಮಾಡಲಾಗುತ್ತಿತ್ತು, ಅವರ ಅಧಿಕಾರಿಗಳನ್ನು ಸೂಕ್ತವಾಗಿಯೇ ರಾಷ್ಟ್ರೀಯ ಹೀರೋಗಳೆಂದು ಕರೆಯಲಾಯಿತು.

ಮೇಜರ್ ಜತೆ ಸಂಪರ್ಕ

(ಮುಂದುವರಿಯುವುದು)

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

ಜೂನ್ 2, 2003
ಗ್ರಾಮ ಪಂಚಾಯತ್ ನೌಕರರ ಬೇಡಿಕೆಗಳಿಗೆ ಒತ್ತಾಯಿಸಿ ಬೆಂಗಳೂರು ಚಲೋ ಅನಿರ್ದಿಷ್ಟ ಕಾಲ ಸಾಮೂಹಿಕ ಧರಣಿ.

ಜೂನ್ 2-9, 2003
ರೇಷನ್ ಕಾರ್ಡ್ ಕಡಿತದ ವಿರುದ್ಧ ಅರ್ಹರಿಗೆ ಕಾರ್ಡ್ ಸಿಗುವಂತೆ ಆಗ್ರಹಿಸಿ, ರಾಜ್ಯವ್ಯಾಪಿ ಚಳುವಳಿ
ಕೂಲಿಕಾರ ರೈತ ಮತ್ತು ಮಹಿಳಾ ಸಂಘಟನೆಗಳಿಂದ.

ಜೂನ್ 9, 2003
ಬೆಂಗಳೂರು, ಮಂಗಳೂರು, ಗುಲ್ಬರ್ಗಾ, ಮಂಡ್ಯ, ಮೈಸೂರು ಹಾಗೂ ಹುಬ್ಬಳ್ಳಿ ಉದ್ಯೋಗ ವಿನಿಮಯ ಕಛೇರಿಗಳ ಮುಂದೆ ಪ್ರತಿಭಟನೆ 'ಕಂಪು' (CAMPU) ಯೋಜನೆಯನ್ನು ಖಾಸಗಿಯವರಿಗೆ ನೀಡುವ ಕ್ರಮದ ವಿರುದ್ಧ ಡಿವೈಎಫ್ಐ ಕರೆ.

ಜೂನ್ 12, 2003.
ಧಾರ್ಮಿಕ ಮೂಲ ಭೂತವಾದ ಮತ್ತು ಕೋಮುವಾದಿ ವಿರೋಧಿ ಚಳುವಳಿಯ ಭಾಗವಾಗಿ ರಾಜ್ಯಮಟ್ಟದ ವಿಚಾರ ಸಂಕಿರಣ.
ಪುರಸಭಾ ಭವನ, ಗದಗ, ಸಮಯ 3 ಗಂಟೆಗೆ.

ಬಿಜೆಪಿಯಲ್ಲಿ ಬಂಡಾಯ - ಸಂಕೇಶ್ವರ ವಿದಾಯ

ಈವಾರ ಕರ್ನಾಟಕ ಒಂದು ನೋಟ —— ಎಸ್.ವೈ.ಗುರುಶಾಂತ್

ಹಲವಾರು ತಿಂಗಳುಗಳ, ಅಲ್ಲಲ್ಲ ಕೆಲ ವರುಷಗಳ ಒಳಬೇಗುದಿಯೀಗ ಹೊರಬಿದ್ದಿದೆ. ಸಂಘ ಪರಿವಾರದ ವಿನಮ್ರ ಸ್ವಯಂ ಸೇವಕನಾಗಿ, ವಿಶ್ವಹಿಂದೂ ಪರಿಷತ್, ಬಜರಂಗದಳದ ಬಂಟನಾಗಿ ಪರಿವಾರದ ಶ್ರಮ ವಿಭಜನೆಯಲ್ಲಿ ರಾಜಕೀಯ ಮುಖವಾಗಿ ಬಿಜೆಪಿಯ ಸಂಸದನಾಗಿ, ಉದ್ದಿಮೆದಾರನಾಗಿ, ಪತ್ರಿಕೆಯ ಮಾಲೀಕರಾಗಿರುವ ವಿಜಯ ಸಂಕೇಶ್ವರ್ ಬಿಜೆಪಿಗೆ 'ಗುಡ್ ಬೈ' ಹೇಳಿದ್ದಾರೆ. ಬಿಜೆಪಿಯ ವೈಫಲ್ಯಗಳು ಮತ್ತು ವೈರುಧ್ಯಗಳ ಬಗ್ಗೆ ಬಹಿರಂಗವಾಗಿ ಮಾತನಾಡಿದ್ದಾರೆ. ಪರ್ಯಾಯವಾಗಿ ಪ್ರಾದೇಶಿಕ ಪಕ್ಷವೊಂದನ್ನು ಹುಟ್ಟುಹಾಕುವ ರೂಪು-ರೇಶೆ ಮಂಡಿಸಿದ್ದಾರೆ.

ಪ್ರಾದೇಶಿಕ ಪಕ್ಷ ಹೇಗಿರುತ್ತದೆ? ಯಾವ ರೂಪವನ್ನು ಅದು ಭವಿಷ್ಯದಲ್ಲಿ ಪಡೆಯಲಿದೆ? ಏನಾದೀತು? ಎಂಬುದನ್ನು ಕಾಲವೇ ಹೇಳಬೇಕು! ಅದು ಈಗ ಮುಖ್ಯ ಪ್ರಶ್ನೆಯಲ್ಲ. ಬಹಳ ವರುಷಗಳಿಂದ ಸಂಘ ಪರಿವಾರದ ನಿಷ್ಠ ಕರಸೇವಕರಾಗಿದ್ದ ವಿಜಯ ಸಂಕೇಶ್ವರರವರ ಇಂತಹ ತೀರ್ಮಾನದ ಹಿಂದಿನ ಕಾರಣವೇನು? ಎಂಬುದು ಪ್ರಸ್ತುತ. ಇದು ಬಿಜೆಪಿಯ ಅಭಿವೃದ್ಧಿ ಹರಿಹಾರದ ಡೋಂಗಿತನವನ್ನು ಮತ್ತು ಆಂತರಿಕ ಸಂಘರ್ಷಗಳ ಬರಿತವನ್ನು ಬಯಲಿಗಿಡುತ್ತದೆ. ಮಾತ್ರವಲ್ಲ ಈಗಾಗಲೇ ಕುಸಿಯುತ್ತಿರುವ ಅದರ ಶಕ್ತಿ ಹಾಗೂ ವರ್ಚಸ್ಸು ಮತ್ತು ಜಾತಿ ಆಧಾರಿತ ಚುನಾವಣಾ ತಂತ್ರ ಸಿದ್ಧತೆಗೆ ಕೊಟ್ಟ ಪೆಟ್ಟು ಕೂಡಾ. ಬಿಜೆಪಿ ರಾಜ್ಯ-ರಾಷ್ಟ್ರದ ನಾಯಕತ್ವ ಅನುಸರಿಸುತ್ತಿರುವ ನೀತಿಗಳ ಜನದ್ರೋಹಿತನ, ನಾಯಕತ್ವದ ದಿವಾಳಿತನ - ದೌರ್ಬಲ್ಯಗಳ ಬಗ್ಗೆ ಮೂಡಿಬಂದ ಬಹಿರಂಗ ದಾಳಿ.

ಕೇಂದ್ರ ಸಂಪುಟ ವಿಸ್ತಾರದ ನಂತರದ ವಿದ್ಯಮಾನವಿದು. ಸಂಕೇಶ್ವರರನ್ನು ಸಂಪುಟಕ್ಕೆ ತೆಗೆದುಕೊಳ್ಳುವವರೇ ಎಂದು ಕಾದಿದ್ದ ಸುದ್ದಿಗಳಿದ್ದದ್ದು ನಿಜ. ಇವರ ಮೂಗಿಗೆ ಬೆಣ್ಣೆ ಹಚ್ಚಿದವರ್ಯಾರು ಎಂದು ಅವರೇ ಈಗ ಹೇಳಬೇಕು. ಸಂಕೇಶ್ವರರಂಥ 'ಶರಣ'ರನ್ನು ಸಾಕಷ್ಟು ದುಡಿಸಿಕೊಂಡು 'ಅಗ್ರಹಾರ'ದ ಕೊಟ್ಟಿಗೆಯ ಹೊರಗೂಟಕ್ಕೆ ಕಟ್ಟಿಹಾಕಲಾಯಿತು ಎಂಬ ಮಾತುಗಳ ನಿಜವೇನು? ಆದರೆ ಸಂಕೇಶ್ವರರು ಎತ್ತಿರುವ ಪ್ರಶ್ನೆಗಳು ಗಮನಾರ್ಹ.

ಬಿಜೆಪಿಗೆ ರಾಜ್ಯದ ಹಿತಗಳತ್ತ ಗಮನವೇ ಇಲ್ಲ. ಅಭಿವೃದ್ಧಿ ವಿಷಯದಲ್ಲಿ ಅದರದ್ದು ತೀರಾ ನಿರ್ಲಕ್ಷ್ಯತನ..." ಎಂದು ವಿವರಿಸುವ ಅವರು ಕೇದ್ರದಲ್ಲಿ ಅಧಿಕಾರದಲ್ಲಿದ್ದರೂ ರಾಜ್ಯಕ್ಕೇನು ಪ್ರಯೋಜನವಾಯಿತು ಎಂದು ಪ್ರಶ್ನಿಸುತ್ತಾರೆ. ಹುಬ್ಬಳ್ಳಿಯ ರೈಲ್ವೆ ವಲಯದ ಕಛೇರಿ ಸ್ಥಾಪನೆಗಾಗಿ ಕಂಬಿಗಳ ಮೇಲೆ ನಿಲ್ಲುವ ಪರಿಸ್ಥಿತಿಯೀಗ ನೆನಪಾಗುತ್ತದೆ. ಬಿಜೆಪಿ ಅಭಿವೃದ್ಧಿ ಹೀನ ಹೆಜ್ಜೆಗಳ ಬಗ್ಗೆ, ಅದರ ಮುಖವಾಡಗಳ ಬಗ್ಗೆ ಸಂಕೇಶ್ವರರು ಹೀಗೆ ಹೆಚ್ಚು ಅಧಿಕೃತವಾಗಿ ಮಾಹಿತಿ ಹೊರಹಾಕಬಲ್ಲರು. ಇನ್ನು ರಾಜ್ಯದ ನಾಯಕತ್ವದ ಬಗ್ಗೆಯೇ ದೂರದೃಷ್ಟಿ ಇಲ್ಲದ ಸ್ವಾರ್ಥಪರತೆ, ಗುಂಪುಗಾರಿಕೆ ಮತ್ತು ದುರ್ಬಲ ನಾಯಕತ್ವದತ್ತ ನಿಷ್ಠುರ ಮಾತುಗಳಿವೆ. ಅವರೇ ಹೆಚ್ಚು ಹತ್ತಿರದಿಂದ ಬಲ್ಲರು! ಕರ್ನಾಟಕದಲ್ಲಿ ಬಿಜೆಪಿ ಹಂತಹಂತವಾಗಿ ನೆಲಕಚ್ಚುತ್ತಲೇ ಸಾಗಿದೆ. ಕಳೆದ ವಿಧಾನಸಭೆಯಿಂದ ಆರಂಭಗೊಂಡು - ನಂತರದ ಬಹುತೇಕ ಸ್ಥಳೀಯ ಹಾಗೂ ಲೋಕಸಭೆ, ವಿಧಾನಸಭೆ -ಪರಿಷತ್‌ಗಳ ಪ್ರತಿ ಚುನಾವಣೆಯಲ್ಲಿಯೂ ಬಿಜೆಪಿಯನ್ನು ರಾಜ್ಯದ ಜನತೆ ತಿರಸ್ಕರಿಸು ತ್ತಲೇ ಬಂದಿದ್ದಾರೆ. ಕೇಂದ್ರ ಸಚಿವ ಅನಂತ ಕುಮಾರ್, ಅಧ್ಯಕ್ಷ ಸೇಡಂ, ಯಡಿಯೂರಪ್ಪಾದಿಗಳ ವಿರುದ್ಧ ಶಾಸಕರು, ಸಂಸದರು, ಕಾರ್ಯಕರ್ತರು ಬಹಿರಂಗ ಬಂಡಾಯ ಘೋಷಿಸಿದ್ದಾರೆ. ಅನೇಕರು ಹೊರ ನಡೆದಿದ್ದಾರೆ. ಬಿ.ಬಿ.ಶಿವಪ್ಪ, ಆಯನೂರು ಮಂಜುನಾಥ, ಹಿರಿಯ ನಾಯಕ ರಾಜಶೇಖರ ಮೂರ್ತಿ ಭ್ರಮನಿರಸನ ಹೊಂದಿ ದೂರ ವಾಗಿದ್ದಾರೆ. ಆದರೆ ಈ ಗಂಭೀರ ಬೆಳವಣಿಗೆಗಳಿಂದ 'ಚೆಡ್ಡಿ ನಾಯಕತ್ವ' ಕಿಂಚಿತ್ತೂ ಪಾಠ ಕಲಿಯಲಿಲ್ಲ. ಸಚಿವ, ಶಾಸಕ-ನಾಯಕರ ಭ್ರಷ್ಟಾತಿ ಭ್ರಷ್ಟತೆಯ ಹಗರಣಗಳಿಗೆ ಕೊನೆ ಹಾಡಲಿಲ್ಲ. ಸರ್ವಾಧಿಕಾರತ್ವದ ನಾಯಕತ್ವಕ್ಕೆ ಕಡಿವಾಣ ಹಾಕಲಿಲ್ಲ. ಹಲವು ಹಗರಣಗಳ ಚೆಡ್ಡಿ ಸರ್ದಾರ ಸಚಿವ ಅನಂತ ಕುಮಾರ್ ಪಡೆಯನ್ನೇ ಬಲಗೊಳಿಸಿದರು. ಈ ಎಲ್ಲಾ ಹಗರಣ, ಅವಾಂತರಗಳನ್ನು 'ದೇಶ ಸೇವೆ-ದೇಶ ಪ್ರೇಮ'ದ ಸೋಗಿನಲ್ಲಿ ಮುಚ್ಚಿ ಹಾಕುವ ಹುನ್ನಾರ ನಡೆಯುತ್ತಲೇ ಇದೆ. ರಾಜ್ಯದ-ದೇಶದ ಜನತೆಯನ್ನು ದಿವಾಳಿಯೆಬ್ಬಿಸುವ, ವಿದೇಶಗಳೆದುರು ಅಂಗಲಾಚುವ, ಜನ ವಿಭಜನೆಯ ವಿಧ್ವಂಸಕ ನೀತಿಗಳನ್ನು ಮುಂದುವರಿಸುತ್ತಲೇ ನಡೆದರು. ಅನಂತ ಕುಮಾರ್‌ರಂಥವರು ಕೇಂದ್ರದಲ್ಲಿ 'ಪವರ್‌ಫುಲ್' ಆಗಿರುವಾಗಲೇ ರಾಜ್ಯದ ನಾಯಕತ್ವ, ಪಕ್ಷವು ಅತ್ಯಂತ ದುರ್ಬಲವಾಗುತ್ತಲೇ ಸಾಗಿತು. ಪಟ್ಟಭದ್ರ ಹಿತಾಸಕ್ತಿಗಳು ನಿರಾತಂಕವಾಗಿ ಸಾಗಲು ಇದು ಅವರಿಗೆ ಅಗತ್ಯ. ಇಂತಹವರ ಬಾಲಂಗೋಚಿಯಾಗಿದಕ್ಕೆ ಕಾರ್ಯಕರ್ತರು, ಕೆಲ ನಾಯಕರನ್ನು ಕೆರಳಿಸಿದೆ. ಹೀಗಾಗಿ ಬಹಿರಂಗ ಕದನ, ಬಂಡಾಯಗಳು ಆಸ್ಫೋಟಿಸುತ್ತಿವೆ. ಇದೆಲ್ಲಾ ಶಿಸ್ತುಬದ್ಧ, ತತ್ವನಿಷ್ಟ ಪಕ್ಷವೆಂಬುದರ ಗೋಸುಂಬೆತನವನ್ನು ಸಾಬೀತು ಮಾಡಿವೆ.

ಇಷ್ಟೇ ಅಲ್ಲ ಅವೆಲ್ಲಾ ಅವಾಂತರಗಳನ್ನು ತಮ್ಮ ಸಹಜ ಗುಣವೆಂದು ಒಪ್ಪಿಕೊಂಡಿರುವ 'ಸಂಘ ಪರಿವಾರ' ಜನಪರ ಕಾರ್ಯಗಳ ಮೂಲಕ ಬೆಳೆಯುವ ಬದಲು ಕೋಮು ಘರ್ಷಣೆಗಳನ್ನು ಹೆಚ್ಚಿಸುತ್ತಾ, ಬಿಜೆಪಿ ಕಳೆದುಕೊಂಡ ನೆಲೆಯನ್ನು ಉಳಿಸಲು - ಹೊಸ ಭೂಮಿಕೆ ಸಿದ್ದಗೊಳಿಸಲು ಅತ್ಯಂತ ವ್ಯವಸ್ಥಿತವಾಗಿ ಆರ್‌ಎಸ್‌ಎಸ್ ಪಡೆ ಯೋಜನೆ ರೂಪಿಸಿ - ಕಾರ್ಯಕ್ಕೆ ಇಳಿದಿದೆ. ಬಿಜೆಪಿಗೆ ಅಧಿಕಾರದ ಆಸೆ ಇದ್ದರೆ, ಆರ್‌ಎಸ್‌ಎಸ್‌ಗೆ ಮತೀಯತೆ ಆಧಾರದಲ್ಲಿ ಜನರ ಒಗ್ಗಟ್ಟು ಮುರಿಯುವ ವಿಭಜಕತನದ ತವಕ! ತನ್ನ ಫ್ಯಾಸಿಸ್ಟ್ ಅಜೆಂಡಾ ಸಾಧಿಸಲು ಒಂದೊಂದು ಕಾಲಕ್ಕೆ ಒಬ್ಬೊಬ್ಬರನ್ನು ಬಳಸಿ ಬಿಸಾಡುವ ಸಿದ್ಧಾಂತವೇ ಅದರ ಜಾಯಮಾನ. ಸಂಕೇಶ್ವರಂಥವರು ತಡವಾಗಿಯಾದರೂ ಎಚ್ಚರಗೊಂಡಂತಿದೆ! ಅವರ ಬಂಡಾಯ ಹೆಚ್ಚು ನಿರ್ದಿಷ್ಟ, ನಿಷ್ಠುರತೆಯನ್ನು ಪಡೆದುಕೊಂಡೀತೆ?

ಕಳೆದುಹೋಗುತ್ತಿರುವ ಬದುಕನ್ನು ಉಳಿಸಬಾರದೆ?

ಭೀಕರ ಬರ ಯಾರನ್ನೂ ಬಿಟ್ಟಿಲ್ಲ. ಕಾವೇರಿ ಕಣಿವೆಯ ಜನಸಾಮಾನ್ಯರು ಬರದ ಬವಣೆಯಲ್ಲಿ ಬೆಂದು ಹೋಗುತ್ತಿದ್ದಾರೆ. ಎನ್.ಡಿ. ಟಿವಿಯ ಡಾಕ್ಯುಮೆಂಟರಿಗಾಗಿ ಮಂಡ್ಯದ ಮಳವಳ್ಳಿ ತಾಲೂಕಿನ ಹಳ್ಳಿಗಳಿಗೆ ಭೇಟಿ ನೀಡಿದಾಗ ಕಂಡುಂಡ ಕರುಳು ಹಿಂಡುವ ನೈಜ ಚಿತ್ರವನ್ನು ಇಲ್ಲಿ ನೀಡಿದ್ದಾರೆ ಶಮಾ ರಾವ್

ಮನ ಮಿಡಿದ ಘಟನೆ

ಈ ವರ್ಷವೂ ಕೈ ಕೊಟ್ಟ ಮುಂಗಾರು, ರಾಜ್ಯದಲ್ಲಿ ಭೀಕರ ಬರ, ಎಂಬ ತಲೆಬರಹವನ್ನು ಓದಿ, ವಾರ್ತೆಗಳಲ್ಲಿ ಕೇಳಿ ಅಭ್ಯಾಸವಾಗಿತ್ತು. ಆದರೆ ಆ ಬರದ ಭೀಕರತೆಯನ್ನು ಕಣ್ಣಾರೆ ಕಂಡಾಗ ಆಘಾತವಾಯಿತು.

ಅಂದು ಭಾನುವಾರ. ಆದರೆ ಅದು ಎಂದಿನಂತೆ ನಿರರ್ಥಕ ಅರ್ಥಹೀನವಾಗಿ ಕಳೆದ ಇನ್ನೊಂದು ದಿನದ ಗುಂಪಿಗೆ ಸೇರಲಿಲ್ಲ.

ಎ.ಐ.ಡಿ.ಡಬ್ಲ್ಯೂ.ಎಗೆ ಬರ ಪರಿಸ್ಥಿತಿಯ ಬಗ್ಗೆ ಸಾಕ್ಷ್ಯ ಚಿತ್ರ ಮಾಡಲು ಮಂಡ್ಯ ಜಿಲ್ಲೆಗೆ ತೆರಳಿದ ತಾರಾ ರಾಯ್‌ರೊಂದಿಗೆ ಭಾಷಾ ಸಮಸ್ಯೆಯಿಂದಾಗಿ ಮಳವಳ್ಳಿ ತಾಲೂಕಿಗೆ ಅವರೊಂದಿಗೆ ಅಲ್ಲಿಗೆ ಹೊರಟೆ.

ಮೊದಲು AIJMS ನ ಕಾರ್ಯಕರ್ತೆ ದೇವಿ ಮತ್ತು ಎಸ್‌ಎಫ್‌ಐನ ಯಶವಂತ್‌ನವರೊಂದಿಗೆ ಕಾರಿನಲ್ಲಿ ಮಾಗನೂರಿಗೆ ತಲುಪಿದೆವು.

ತಲೆಯ ಮೇಲೆ ಕೆಂಡ ಕಾರುತ್ತಿದ್ದ ಸೂರ್ಯ, ಬೇರೆ ಗ್ರಹದವರೋ ಎಂಬಂತೆ ಅಲ್ಲಿನ ಜನರ ನೋಟವನ್ನು ಸಾವರಿಸಿಕೊಂಡು ಮುನ್ನಡೆದೆವು. CAMERA ವನ್ನು ಹೊತ್ತು ಒಂದು ಮನೆಯ ಬಾಗಿಲಲ್ಲಿ ನಿಂತು ಛಾಯಾಗ್ರಹಣ ಪ್ರಾರಂಭಿಸಿದೆವು.

ಬಿದಿರಿನಿಂದ ಮೊರ ಹೆಣೆಯುತ್ತಿದ್ದ ಅಜ್ಜಿ ಕ್ಷೇಮ ವಿಚಾರಿಸಿ, ವ್ಯಾಪಾರ ಹೇಗೆ ಎಂದಾಗ "ಎಲ್ಲವ್ವ ಯಾಪಾರ, ಊರ್‍ಮೇಲೆ ಹೋಗಿ ಮಾರ್ತಿವಿ. ಮುಂಚೆ ಆದ್ರೆ ಎರಡು ಮೂರು ತಕ್ಕತಿದ್ರು, ಈಗೆಲ್ಲ ನಮ್ಮನೇಲಿ ರಾಗಿ ಇಲ್ಲ. ಇರೋ ಅಷ್ಟನ್ನ ಕಾಂಕ್ರಿಟ್ ನೆಲದ ಮೇಲೆ ಕಲೀನು ಮಾಡೀವಿ ಅಂತಾರೆ" ಎಂದು ಸೆರಗಿನಿಂದ ಕಣ್ಣೀರು ಒರೆಸಿದರು.

ಹಾಗೆ ಮುಂದೆ ಹೋಗಿ ಇನ್ನೊಂದು ಮನೆಯ ಎದುರು ನಿಂತೆವು. ಸುಮಾರು 4X9ರ ಜಾಗ. ಒಬ್ಬ ಮುದುಕ, ಮುದುಕಿ ಮತ್ತು ಸುಮಾರು 5-6 ತಿಂಗಳಿನ ಹಸುಗೂಸು. ಅದರ ಪಕ್ಕದಲ್ಲೇ ಅಳುತ್ತಿದ್ದ ಸುಮಾರು 2-3 ವಯಸ್ಸಿನ ಹುಡುಗಿ ಜೊತೆಗೆ ಇಬ್ಬರು ಹುಡುಗಿಯರು ಇದ್ದರು.

ಆ ಮುದುಕಿಯನ್ನು ಪ್ರಶ್ನಿಸಿದಾಗ, "ಈ ಮಗ 15 ದಿನ ಇದ್ದಾಗ, ಇದರವ್ವ ಬೆಂಗಳೂರಿಗೆ ಹೋದ್ಲು, ಕೆಲಸ ಮಾಡಾಕೆ. ನರ್ಸರೀಲಿ ಇದಾರಂತೆ ನನ್ನ ಮಗ, ಸೊಸೆ. ಈ ಮುದಿವಯಸ್ಸಲ್ಲಿ ಹೊಟ್ಟೆಗೂ ಇಲ್ದೇ ಈ ಐಕಳ್‌ನ ಹೆಂಗೆ ನೋಡ್ಲಿ' ಎಂದರು.

ಆಮೇಲೆ ತಿಳಿಯಿತು, ಆ ಮುದುಕಿ ಆ ಹಸುಗೂಸಿನ ಅಜ್ಜಿ ಎಂದು. ಆ ಮಗುವಿನ ತಾಯಿ ಕೆಲಸಕ್ಕಾಗಿ ಬೆಂಗಳೂರಿಗೆ ಬಂದವಳು ಇನ್ನೂ ಹಿಂದಿರುಗಿರಲಿಲ್ಲ.

ಇಷ್ಟು ಹೊತ್ತಿಗಾಗಲೇ ಆ ಊರಿನ ಜನರೆಲ್ಲಾ ನಮ್ಮನ್ನು ಸುತ್ತುವರೆದಿದ್ದರು. ಅಲ್ಲಿಯೇ ಇದ್ದ ಒಂದು ಚಿಕ್ಕ ಗುಡಿಸಲಿಗೆ ಹೋದೆವು.

ಒಣಗಿದ ತೆಂಗಿನ ಗರಿಯನ್ನು ಹೆಣೆದು ಮಾಡಿದ ಸೂರು, ಸುಮಾರು 5 ಅಡಿ ಎತ್ತರದ ಮಣ್ಣಿನ ಗೋಡೆ ಆ ಮನೆಯಲ್ಲಿ ವಾಸ ಮಾಡುತ್ತಿದ್ದುದು ಒಂಟಿ ಹೆಂಗಸು. ಬರದ ಪರಿಣಾಮ ಸಾಲ ಮಾಡಿ ಗಂಡ ಊರು ಬಿಟ್ಟು ಹೋದ "ಏನಾದ್ರೂ ಮಾಡಿ ಅಮ್ಮ ನನಗೊಂದು ಹೊತ್ತು ಊಟ ಇಲ್ದೇ ಇದ್ರೂ, ಮಗೀಗೆ ಗಂಜಿ ಉಣಸಾಕೆ ಆಗೋ ಅಷ್ಟು ಕೆಲಸ ಕೊಡ್ಸಿ" ಎಂದು ಕಣ್ಣೀರಿಡುತ್ತಾ ಕಾಲಿಗೆ ಬೀಳಲು ಹೊರಟ ಅವಳನ್ನು ಕಂಡು ಕರುಳು ಚುರಕ್ ಎಂದಿತು. ನಿಲ್ಲಲು ಹೆಚ್ಚು ಸಮಯವಿಲ್ಲದೆ ಮುಂದಿನ ಊರಾದ ಕೂನನಪುರಕ್ಕೆ ಹೊರಟೆವು.

ಈ ಊರಿನಲ್ಲಿ ಕೆಲಸ ಹುಡುಕಿಕೊಂಡು ಮನೆ ಮಠ ಬಿಟ್ಟು ವಲಸೆ ಬಂದವರೇ ಹೆಚ್ಚು. ಮುಂಚೆ ಆ ಊರಿನಲ್ಲಿ ಇದ್ದುದು 90 ಕುಟುಂಬಗಳು ಈಗ 40ಕ್ಕೆ ಇಳಿದಿದೆ. ಉಳಿದೆಲ್ಲರೂ ಬೆಂಗಳೂರು, ಮೈಸೂರು ಎಂದು ಊರುಬಿಟ್ಟವರೇ.

ಇರುವ ಆ 40 ಕುಟುಂಬಗಳಲ್ಲೂ ಕೆಲಸ ಮಾಡಲಾರದ ಮುದುಕ ಮುದುಕಿಯರೇ ಹೆಚ್ಚು.

ಆ ಊರಿನ ಕುಟುಂಬವೊಂದನ್ನು ಪ್ರಶ್ನಿಸಿದಾಗ, "ನಮ್ದು ದೊಡ್ಡ ಸಂಸಾರ, ಮನೇಲಿ ಸುಮಾರು ಜನ ಇದೀವಿ. ಎಲ್ಲರೂ ವಯಸ್ಸಾದವರೇ, ಕಣ್ಣು ಕಾಣದ ಇಬ್ಬರು ಮುದುಕಿಯರು, ಇವರಿಗೆಲ್ಲಾ ಊಟ ಹೇಗೆ? ಅಮ್ಮ ಬಿದಿರಿನ ಬುಟ್ಟಿ ಮಾರಾಟ. ಬೆಳಿಗ್ಗೆ ಊಟ ಮಾಡಿದವರು ಸಂಜೆ ಮಾಡಕ್ಕಿಲ್ಲ. ಇದು ಕರುಳಿನಿಂದ ಬಂದ ಮಾತು. ಆಗ ನನಗೆ ನೆನಪಿಗೆ ಬಂದಿದ್ದು ಟೇಬಲ್ ಮ್ಯಾನರ್ಸ್‌ಗೆ ನಡೆಯುವ ಡಿನ್ನರ್/ ಲಂಚ್ ಪಾರ್ಟಿಗಳು ಒಂದೆಡೆ, ಸರದಿಯಂತೆ ಮನೆಯ ಸದಸ್ಯರ ಊಟ ಇನ್ನೊಂದೆಡೆ. ನಮ್ಗೆ ಊಟ ಅಂದ್ರೆ ಅನ್ನ, ಮಾಂಸದ ತುಂಡು ಬೇಡ್ರವ್ವ, ಒಂದು ಹಿಡಿ ರಾಗಿ ಸಿಕ್ರೆ ಸಾಕು, ಅದಕ್ಕೂ ಗತಿ ಇಲ್ಲ. ಒಂದು ರೇಸನ್ ಕಾರ್ಡು ಕೊಟ್ಟಿದ್ದಾರೆ. 200 ರೂ ಕೊಟ್ರೆ 20 ಕೆ.ಜಿ. ಅಕ್ಕಿ, ಸಾಕಾಯ್ತದಾ ನೋಡಿ ಎಂದು, ತಮ್ಮ ಬುಟ್ಟಿ ನೇಯ್ಗೆಯನ್ನು ಮುಂದುವರಿಸುತ್ತಲೇ ಹೇಳಿದರು. ಆ ತಾಯಿ.

ಊಟಕ್ಕೆ ಏನು ಮಾಡ್ತೀರ ಎಂದಾಗ ಬುಟ್ಟಿ ಮಾರಾಟವಾದರೆ, ಆ ಹಣದಲ್ಲಿ ರಾಗಿ ತರುವುದಾಗಿಯೂ ರಾಗಿ ಗಂಜಿ ಮಾಡಿ, ಅದರ ತಿಳಿಯನ್ನು ಮಗುವಿಗೆ ಕುಡಿಸುವುದಾಗಿಯೂ ಹೇಳಿದರು.

ಏನಾದ್ರೂ ಮಾಡಿ ಅವ್ವ, ನಮ್ಮ ಐಕ್ಳು ಜೀವನ ಮಾಡೋ ಹಂಗಾದ್ರೂ ಆಗ್ಲಿ ಎಂದರು ಇನ್ನೊಬ್ಬ ವೃದ್ಧೆ.

ಆ ಮಾತುಗಳನ್ನು ಕೇಳಿ, ಅಲ್ಲಿ ನಿಲ್ಲಲಾರದೇ, ಮುಂದಿನ ಹಳ್ಳಿ, ಲಿಂಗಾಣಪುರದೆಡೆಗೆ ಪ್ರಯಾಣ ಬೆಳೆಸಿದೆವು.



ಲಿಂಗಾಣಪುರದಲ್ಲಿ ಪರಿಸ್ಥಿತಿ ಇನ್ನೂ ಭೀಕರ. ಆ ಹಳ್ಳಿಯ ಓದುವ ಮಕ್ಕಳನ್ನು ಶಾಲೆ ಬಿಡಿಸಿ ಜೀತಕ್ಕೆ ಹಚ್ಚಲಾಗಿತ್ತು. ಆ ಊರಿನಲ್ಲಿ ಶಾಲೆಗೆ ಹೋಗುತ್ತಿದ್ದುದು ಕೆಲವೇ ಮಕ್ಕಳು. ಅವರಲ್ಲಿ ಒಂದು ಹುಡುಗಿಯನ್ನು ಅವಳ ಓದಿನ ಬಗ್ಗೆ ಕೇಳುತ್ತಾ ಮುಂದೆ ಏನು ಮಾಡ್ತೀಯ ಅಂದಾಗ, "ಅದೆಲ್ಲ ನಮ್ಗೆ ಗೊತ್ತಾಗಲ್ರೀ" ಅಂದಳು, ಆ ಮೇಲೆ Doctor,

ಪುಟ 4 ಕ್ಕೆ

ರೇಷನ್ ವ್ಯವಸ್ಥೆ : ಅರ್ಜಿ ಅವಧಿ ವಿಸ್ತರಣೆ
ಪುನರ್ ಸಮೀಕ್ಷೆಗೆ ಸೂಚನೆ - ಮುಖ್ಯಮಂತ್ರಿ ಭರವಸೆ

ಮೇ 24 ರಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ನಿಯೋಗವು ರಾಜ್ಯದ ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಿ ಕರ್ನಾಟಕದಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸುವಂತೆ ಒತ್ತಾಯಿಸಲಾಯಿತು. ಈ ನಿಯೋಗದಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಮುಖಂಡರಾದ ಕೀರ್ತಿಸಿಂಗ್ ಮತ್ತು ಮಾರಿಯಮ್ ಧಾವಳೆ, ರಾಜ್ಯ ಅಧ್ಯಕ್ಷೆ ನೀಲಾ ಕೆ. ಹಾಗೂ ಕಾರ್ಯದರ್ಶಿ ವಿಮಲಾ ಇದ್ದು ಮುಖ್ಯಮಂತ್ರಿಗಳೊಂದಿಗೆ ಚರ್ಚೆ ಮಾಡಲಾಯಿತು.

ಅರ್ಧ ಗಂಟೆ ಚರ್ಚೆಯ ತರುವಾಯ ಈ ಸಮಸ್ಯೆಗಳ ಪರಿಹಾರಕ್ಕೆ ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಭರವಸೆ ಕೊಟ್ಟರು.

ರಾಜ್ಯದ ಬಡತನ ರೇಖೆಯ ಕೆಳಗಿರುವ ಕುಟುಂಬಗಳು ರೇಷನ್ ಕಾರ್ಡ್‌ಗಾಗಿ ಅರ್ಜಿ ಸಲ್ಲಿಸಲು ಇದ್ದ ಕೊನೆಯ ದಿನಾಂಕ ಮೇ, 17-2003 ಅನ್ನು ಜುಲೈ 31 ರವರೆಗೆ ವಿಸ್ತರಿಸುವುದಾಗಿ ಹೇಳಿದ್ದಾರೆ.

ಈಗಾಗಲೇ ರಾಜ್ಯದಲ್ಲಿ ಸಮೀಕ್ಷೆ ಕಾರ್ಯ ಪೂರ್ಣಸಲಾಗಿದೆ. ಆದರೆ ಬರದ ಕಾರಣವಾಗಿ ಅನೇಕ ಜಿಲ್ಲೆಗಳಲ್ಲಿ ಕೂಲಿಕಾರರು ಮತ್ತು ಸಣ್ಣ ರೈತರು ದುಡಿದುಣ್ಣಲು ತಾತ್ಕಾಲಿಕವಾಗಿ ವಲಸೆ ಹೋಗಿರುವ ಕಾರಣವಾಗಿ ಅವರುಗಳು ಹೆಸರುಗಳು ಸಮೀಕ್ಷೆಯಲ್ಲಿ ಸೇರಿರದ ಕಾರಣ ಸಮೀಕ್ಷೆಯನ್ನು ಪುನಃ ನಡೆಸಲು ಭರವಸೆ ನೀಡಿದ್ದಾರೆ. ಸಮೀಕ್ಷೆಯ ಸಮಯವು ಬೆಳಿಗ್ಗೆ ಅಥವಾ ಸಾಯಂಕಾಲ ಆಗಿರಬೇಕೆಂದು ನಿಯೋಗ ಸೂಚಿಸಿರುವುದಕ್ಕೆ ಮುಖ್ಯಮಂತ್ರಿಗಳು ಸಮ್ಮತಿಸಿದ್ದಾರೆ.


ಬಿ.ಪಿ.ಎಲ್. ವ್ಯಾಪ್ತಿಯಲ್ಲಿ ಈಗಾಗಲೇ ಇರುವ ಕನಿಷ್ಠ ಆದಾಯವನ್ನು ಪುನರ್ ಪರಿಶೀಲಿಸಿ ಕನಿಷ್ಠ ಆದಾಯ ರೂ. 25,000 ಕ್ಕೆ ನಿಗದಿಸಬೇಕೆಂದು ಒತ್ತಾಯ ಮಾಡಲಾಯಿತು. ಈ ಬೇಡಿಕೆಯನ್ನು ಪರಿಗಣಿಸುವುದಾಗಿ ಅವರು ಹೇಳಿದರು.

ಮಂಡ್ಯ ಜಿಲ್ಲೆಯ ಮಾಗನೂರು ಮತ್ತಿತರ ಗ್ರಾಮಗಳ ಜನತೆ ಕೆಲಸವಿಲ್ಲದೆ ಇಡೀ ಊರಿಗೆ ಊರೇ ಗುಳೆ ಹೋಗುತ್ತಿದೆ. ತಕ್ಷಣ ಅಲ್ಲಿ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳಲು ಒತ್ತಾಯಿಸಿರುವುದಕ್ಕೆ ಕೂಡಲೇ ಕ್ರಮ ಕೈಗೊಳ್ಳಲು ಒಪ್ಪಿದರು. ಮತ್ತು ಮಂಡ್ಯ ಜಿಲ್ಲಾಧಿಕಾರಿಯನ್ನು ಸಂಪರ್ಕಿಸಿ ವರದಿ ಕೊಡಲು ಹೇಳಿದ್ದಾರೆ.

ಬಿ.ಪಿ.ಎಲ್ ಪಟ್ಟಿ ಪುನರ್ ಸಮೀಕ್ಷೆಗೆ ಆಗ್ರಹಿಸಿ ಧರಣಿ

ತುಮಕೂರಿನ ತುರುವೇಕೆರೆ ತಾಲ್ಲೂಕಿನಾದ್ಯಂತ ಬಡತನ ರೇಖೆಗಿಂತ ಕೆಳಗಿರುವವರ ಸರ್ವೆ ನಡೆಸಿ ಹಳದಿಪಡಿತರ ಚೀಟಿ ನೀಡುತ್ತಿದ್ದು ಈ ಪಟ್ಟಿ ಲೋಪದಿಂದ ಕೂಡಿದ್ದು ಆ ಪಟ್ಟಿಯನ್ನು ಪುನರ್ ಸಮೀಕ್ಷಣೆ ಆಗ್ರಹಿಸಿ ಸಿ.ಪಿ.ಐ(ಎಂ) ಸಿ.ಐ.ಟಿ.ಯು ಮತ್ತು ನಾಗರೀಕರು ಇತ್ತೀಚೆಗೆ ತಾಲ್ಲೂಕ್ ಕಛೇರಿ ಎದುರು ಧರಣಿ ನಡೆಸಿದರು. ಈ ಸಂದರ್ಭದಲ್ಲಿ ಪ್ರತಿಭಟನಾಕಾರರನ್ನು ಉದ್ದೇಶಿಸಿ ಸಿ.ಪಿ.ಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಎ.ಅಲ್ಲಾಬಕಾಶ್, ರೈತ ಮುಖಂಡರಾದ ಕಿಣತೂರು ಹನುಮಂತೇಗೌಡರು ಮಾತನಾಡಿದರು. ಸಿಪಿಐ(ಎಂ) ತಾಲ್ಲೂಕ್ ಕಾರ್ಯದರ್ಶಿ ಡಿ.ಹೆಚ್.ಸತೀಶ್ ಪಟ್ಟಣದಲ್ಲಿರುವ ಇಂದಿರಾ ನಗರವನ್ನು ಕೊಳಚೆ ಪ್ರದೇಶವೆಂದು ಘೋಷಿಸಿ ಮೂಲಭೂತ ಸೌಲಭ್ಯ ನೀಡಬೇಕೆಂದು ಆಗ್ರಹಿಸಿದರು. ಈ ಪ್ರತಿಭಟನೆಯಲ್ಲಿ ಪಟ್ಟಣ ಪಂಚಾಯ್ತಿ ಸದಸ್ಯ ಶ್ರೀನಿವಾಸ್ ಬೆಂಬಲಿಸಿ ಭಾಗವಹಿಸಿದ್ದರು. ಪ್ರತಿಭಟನೆಯಲ್ಲಿ ಮಹಿಳೆಯರು ಸೇರಿದಂತೆ ನೂರಾರು ಜನ ಭಾಗವಹಿಸಿದ್ದು ಇದರ ನೇತೃತ್ವವನ್ನು ಇಂದಿರಾನಗರದ ಸ್ವಾಮಿ ಜಹಿರುಲ್ಲಾ, ರವಿಕುಮಾರ್, ದೇವೇಗೌಡ ಬಡಾವಣೆಯ ಸಯ್ಯದ್‌ಜೀರ್, ಕಿಜರ್, ಡಿ.ವೈ.ಎಫ್.ಐ ನ ಟಿ.ಆರ್.ರವೀಂದ್ರ ರಾಮೇಗೌಡ ಸಿಪಿಐ(ಎಂ) ರವೀಂದ್ರ ಯಾದವ್ ಭಾಗವಹಿಸಿದ್ದರು. ತಹಶೀಲ್ದಾರ್ ರಾಮಸ್ವಾಮಿಯವರು ಮನವಿ ಪತ್ರ ಸ್ವೀಕರಿಸಿದರು.

- ರವೀಂದ್ರ




ಬೆಂಗಳೂರು ಎಡಿಟೋರಿಯಲ್ ಫೋರಂ ರಚನೆ

ಬೆಂಗಳೂರಿನ ಪ್ರಮುಖ ಪತ್ರಿಕೆಗಳು ಹಾಗೂ ಟಿವಿ ಚಾನೆಲ್‌ಗಳ ಸಂಪಾದಕೀಯ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರ ಹೊಸ ವೃತ್ತಿಪರ ಸಂಘಟನೆ 'ಬೆಂಗಳೂರು ಎಡಿಟೋರಿಯಲ್ ಫೋರಂ' (ಬಿ.ಇ.ಎಫ್) ಅಸ್ತಿತ್ವಕ್ಕೆ ಬಂದಿದೆ.

ಮೇ 25 ರಂದು ಪ್ರೆಸ್ ಕ್ಲಬ್ ಆವರಣದಲ್ಲಿ ಹಿರಿಯ ಕಲಾವಿದ ಪ.ಸ. ಕುಮಾರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಫೋರಂನ ಸರ್ವಸದಸ್ಯರ ಸಭೆಯಲ್ಲಿ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಲಾಯಿತು.

"ಕನ್ನಡ ಪ್ರಭ"ದ ಮುಖ್ಯ ಉಪ ಸಂಪಾದಕ


ವಿಶ್ವ ಕುಂದಾಪುರ

ವಿಶ್ವ ಕುಂದಾಪುರ ಅಧ್ಯಕ್ಷರಾಗಿ ಆಯ್ಕೆಯಾದರು. ಇತರ ಪದಾಧಿಕಾರಿಗಳು ಶ್ರೀವತ್ಸ ನಾಡಿಗ್ (ಕನ್ನಡಪ್ರಭ) ಉಪಾಧ್ಯಕ್ಷ, ಬಿ.ವಿ. ಮಹೇಶ್ ಚಂದ್ರ (ವಿಜಯ ಕರ್ನಾಟಕ) ಪ್ರಧಾನ ಕಾರ್ಯದರ್ಶಿ, ನೆತ್ತರಕೆರೆ- ಉದಯಶಂಕರ್ (ಪ್ರಜಾವಾಣಿ) ಖಜಾಂಚಿ, ಎನ್. ವನಜಾ (ವಿಜಯ ಕರ್ನಾಟಕ) ಸಹ ಕಾರ್ಯದರ್ಶಿ, ಪ.ಸ. ಕುಮಾರ್ (ಕನ್ನಡ ಪ್ರಭ) ಜಯಪ್ರಕಾಶ್ ನಾರಾಯಣ (ಪ್ರಜಾವಾಣಿ) ಡಿ. ಯಶೋಧಾ (ಕನ್ನಡಪ್ರಭ), ಗಣೇಶ್ ಕಾಸರಗೋಡು (ವಿಜಯ ಕರ್ನಾಟಕ), ಶಿವರಾಯ ಕೋತ್ವಾಲ (ಐ.ಎನ್.ಎಸ್.), ವೀರಣ್ಣ ಗದ್ದಿಗಿಹಳ್ಳಿ (ವಿಜಯ ಕರ್ನಾಟಕ) ಎಲ್ಲರೂ ಕಾರ್ಯಕಾರಿ ಸಮಿತಿ ಸದಸ್ಯರು.

ಹಗರಿ ಬೊಮ್ಮನ ಹಳ್ಳಿ ಬಂದ್' ಸಂಪೂರ್ಣ ಯಶಸ್ವಿ

ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ಕರೆಯ ಮೇರೆಗೆ ಮೇ. 21 ರಂದು ನಡೆದ ಅಖಿಲ ಭಾರತ ಸಾರ್ವತ್ರಿಕ ಮುಷ್ಕರದ ಭಾಗವಾಗಿ ಹಗರಿಬೊಮ್ಮನ ಹಳ್ಳಿ ಬಂದ್' ಸಂಪೂರ್ಣವಾಗಿ ಯಶಸ್ವಿಯಾಯಿತು.

ಸಾರ್ವಜನಿಕ ಕ್ಷೇತ್ರಗಳ ಖಾಸಗೀಕರಣ ವಿರೋಧಿಸಿ, ಕೃಷಿ ಕೂಲಿಕಾರರಿಗೆ ಸಮಗ್ರ ಕಾನೂನು ಜಾರಿ ಮಾಡಲು ಆಗ್ರಹಿಸಿ, ನಿರುದ್ಯೋಗಕ್ಕೆ ಕಾರಣವಾದ ನೀತಿಗಳನ್ನು ವಿರೋಧಿಸಿ, ಎಲ್ಲರಿಗೂ ಸಾಮಾಜಿಕ ಭದ್ರತಾ ಯೋಜನೆಗಳನ್ನು ಜಾರಿಗೊಳಿಸಲು, ರಫ್ತು ಆಮದು ಮೇಲಿನ ಮಿತಿಗಳನ್ನು ಮತ್ತೆ ಹಾಕಬೇಕೆಂದು, ರೈತರ ಬೆಂಬಲ ಬೆಲೆಗಾಗಿ ಒತ್ತಾಯಿಸಿ ಹಮಾಲರಿಗೆ ಭದ್ರತೆ ಒದಗಿಸುವ ಕಾನೂನಿಗಾಗಿ, ಇನ್ನೂ ಮುಂತಾದ ಬೇಡಿಕೆಗಳಿಗಾಗಿ ಒತ್ತಾಯಿಸಿ ತಾಲೂಕಿನ ಇಪ್ಪತ್ತಕ್ಕೂ ಹೆಚ್ಚು ಸಂಘಟನೆಗಳು ಹಗರಿ ಬೊಮ್ಮನಹಳ್ಳಿಯಲ್ಲಿ ವರ್ಣರಂಜಿತ ಮೆರವಣಿಗೆ ನಡೆಸಿ 'ಹಗರಿ ಬೊಮ್ಮನಹಳ್ಳಿ ಬಂದ್' ನ್ನು ಯಶಸ್ವಿಗೊಳಿಸಿದರು.

ಐದನೂರಕ್ಕೂ ಹೆಚ್ಚು ರೈತ - ಕಾರ್ಮಿಕರನ್ನೊಳಗೊಂಡ ಬೃಹತ್ ಸಭೆಯನ್ನುದ್ದೇಶಿಸಿ ಪ್ರಾಂತ ರೈತ ಸಂಘದ ಎಸ್.ಜಗನ್ನಾಥ್, ಡಿವೈಎಫ್ಐ ಜಿಲ್ಲಾ ಸಹಕಾರ್ಯದರ್ಶಿ ರಂಗಪ್ಪದಾಸರ, ಎಸ್ಎಫ್ಐ ಜಿಲ್ಲಾ ಅಧ್ಯಕ್ಷೆಯಾದ ಸೌಮ್ಯರಾಣಿ, ತಾಲ್ಲೂಕ ಸಂಚಾಲಕ ಈರಣ್ಣ ಕಲ್ಲಣ್ಣೆ, ನೀರು ಮತ್ತು ವಿದ್ಯುತ್ ಬಳಕೆದಾರರ ಸಂಘದ ಅಂಗಡಿ ಗವಿಸಿದ್ದಪ್ಪ, ರೈತ ಮುಖಂಡರಾದ ಉಪ್ಪಿನ ತಾರಾನಾಥ, ಸಿಐಟಿಯು ಜಿಲ್ಲಾ ಸಹಕಾರ್ಯದರ್ಶಿ ಆರ್.ಎಸ್. ಬಸವರಾಜ, ಜನವಾದಿ ಮಹಿಳಾ ಸಂಘಟನೆಯ ತಾಲೂಕು ಕಾರ್ಯದರ್ಶಿ ಬಿ. ಮಾಳಮ್ಮ ಹಮಾಲರ ಸಂಘದ ಮುಖಂಡರಾದ ಸರ್ದಾರರ ಗೋವಿಂದಪ್ಪ, ಎಐಆರ್‌ಆರ್‌ಬಿಇಎ. ಮುಖಂಡರಾದ ವೀರಣ್ಣ ಚಾವಡಿ, ಎಸ್.ಟಿ.ಎಫ್.ಐ. ಮುಖಂಡರಾದ ಭೀಮ ಸೇನಪ್ಪ, ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಮುಖಂಡರಾದ ರಂಗನಾಥ ಹವಲ್ದಾರ್ ಮಾತನಾಡಿದರು.

ಪಟ್ಟಣದ ಚಿತ್ರ ಮಂದಿರಗಳು, ಎಣ್ಣೆ ಗಿರಣಿಗಳು, ರೈಸ್ ಮಿಲ್‌ಗಳು, ಟೆಲಿಫೋನ್, ಅಂಚೆ, ಬ್ಯಾಂಕ್‌ಗಳು, ತರಕಾರಿ ಮಾರುಕಟ್ಟೆ ಸೇರಿದಂತೆ ಎಲ್ಲಾ ಅಂಗಡಿಗಳು, ಸರ್ಕಾರಿ ಕಛೇರಿಗಳು ಮುಚ್ಚಿ ಹಗರಿಬೊಮ್ಮನಹಳ್ಳಿ ಬಂದ್ ಯಶಸ್ವಿಗೊಳಿಸಲಾಯಿತು.

ಕಳೆದುಹೋಗುತ್ತಿರುವ ಬದುಕು.....

ಪುಟ 3 ರಿಂದ

Engineer, Nurse ಬಗ್ಗೆ ಎಲ್ಲಾ ಹೇಳಿದಾಗ, ಕಣ್ಣಲ್ಲಿ ನೀರು ತುಂಬಿಕೊಂಡು ನಾವು ಅದೆಲ್ಲ ಆಗಕ್ಕೆ ಆಯ್ತದಾ" ಎಂದಳು. ಅವಳಿಗೆ ಏನೆಂದು ಉತ್ತರಿಸಬೇಕೋ ತಿಳಿಯಲಿಲ್ಲ. ಗಗನ ಕುಸುಮದ ಕನಸನ್ನು ಬಿತ್ತಿದೆನೋ ಅಥವಾ ಅವಳ ಜೀವನಕ್ಕೊಂದು confidence ಕೊಟ್ಟೆನೋ ತಿಳಿಯಲಿಲ್ಲ.

ಹಾಗೇ ಮುಂದೆ ನಡೆದು ಒಂದು ತಾಯಿಯನ್ನು ಅವಳ ಮಕ್ಕಳ ಬಗೆಗೆ ಪ್ರಶ್ನಿಸಿದೆ. ಅವಳಿಗೆ ನಾಲ್ಕು ಮಕ್ಕಳು, ಎಲ್ಲರನ್ನೂ ಜೀತಕ್ಕೆ ಬಿಟ್ಟಿರುವುದಾಗಿ ಹೇಳಿ, ದೊಡ್ಡ ಮಗಳಿಗೆ 18 ವರ್ಷ ಆದ ಕಾರಣ, ಜೀತದಿಂದ ಬಿಡಿಸಿದ್ದಾಗಿ ಹೇಳಿದಳು.

ಅವಳೀಗ ಎಲ್ಲಿದ್ದಾಳೆ, ಏನು ಕೆಲಸ ಎಂದು ಎಲ್ಲೆಡೆ ಕೇಳಿದಂತೆ ಕೇಳಿದೆ. ಆ ತಾಯಿ ಸಂಕೋಚ ಅವಮಾನಗಳಿಂದ ಕೂಡಿ ಜಮೀನ್ದಾರರ ಮನೆಗೇ ಎಂದು ರಾಗ ಎಳೆದಾಗ ಎಲ್ಲಿಂದಲೋ ಬಂದ ಬರ ಸಿಡಿಲು ನನಗೆ ಹೊಡೆದಂತಾಗಿ ದಂಗಾದೆ.

ಹೀಗೆಲ್ಲಾ ಏಕೆ ಎಂದಾಗ, ಊಟಕ್ಕೆ ಗತಿ ಇಲ್ಲದೇ ಮಾನ ಮಾರೋ ಪರಿಸ್ಥಿತಿ ಇದೆ ಎಂದು ಕಣ್ಣೀರಿಟ್ಟರು. ಈ ಕಂಬನಿ ಕಥೆಯನ್ನು ಕೇಳಲಾರದೇ, ಬೆಂಗಳೂರಿನ ಕಡೆಗೆ ಹೊರಟೆವು.

ಜೋರಾಗಿ ಮಳೆ ಸುರಿಯುತ್ತಿತ್ತು. ಆ ಎಲ್ಲಾ ಹಳ್ಳಿಗಳಲ್ಲೂ ಮಹಿಳೆಯರು ಜೆ.ಎಂ.ಎಸ್. ಮತ್ತು ಡಿವೈಎಫ್ಐ ಸಹಾಯ ಮತ್ತು ಮುಂದಾಳತ್ವದಿಂದ ಸ್ವಸಹಾಯ ಗುಂಪುಗಳನ್ನು ಸ್ಥಾಪಿಸಿ, ದುಡ್ಡಿದ್ದಾಗ ಅದರಲ್ಲಿ ಸ್ವಲ್ಪ ಕೂಡಿಟ್ಟು, ಆ ಹಣದಿಂದ ಅಗತ್ಯವಿರುವವರಿಗೆ ಶೇ. 2 ರಂತೆ ಸಾಲ ನೀಡುತ್ತಾರೆಂದು ತಿಳಿದು ಸಂತೋಷವಾಯಿತು.

ಕಾವೇರಿ ಕಣಿವೆಯಲ್ಲೇ ಈ ಪರಿಸ್ಥಿತಿ ಯಾದರೆ, ಇನ್ನು ಬೇರೆ ಜಾಗಗಳಲ್ಲಿ ಏನಾಗಿರಬಹುದು? ಈ ಲೇಖನವನ್ನು ಕೊಡಲು ಬರುತ್ತಿರುವಾಗಲೇ ರಣ ಬಿಸಿಲಿನಲ್ಲಿ ಮೂರು ದಿನದಿಂದ ನಡೆದು ಬರುತ್ತಿದ್ದ ಕೋಲಾರದ ರೈತರ ಜಾಥಾ ಕಂಡೆ. ನಮ್ಮ ಸರ್ಕಾರ ನಿಜವಾಗಿ ಜನಪರವಾಗಿದ್ದರೆ ಬೆಂಗಳೂರನ್ನು ಸಿಂಗಾಪುರ ಮಾಡುವ ಬದಲು ಕಳೆದುಹೋಗುತ್ತಿರುವ ಬದುಕನ್ನು ಉಳಿಸಲು ಸಮೃದ್ಧಿ ತರಲು ಹಣ ಹೂಡಬಾರದೇಕೆ?

- ಶಮಾ ರಾವ್

ಕೇಂದ್ರ ಸಂಪುಟ ಪುನರ್ರಚನೆ

ರಾಜಕೀಯ ಭ್ರಷ್ಟಾಚಾರ ಅಂಗೀಕಾರ

ಪ್ರಧಾನ ಮಂತ್ರಿ ವಾಜಪೇಯಿಯವರು ತಮ್ಮ ಪ್ರಸಕ್ತ ಅವತಾರದಲ್ಲಿ ಹನ್ನೊಂದನೇ ಸಂಪುಟ ಪುನರ್ರಚನೆ (ವಿಸ್ತರಣೆ ಎಂದು ಓದಿಕೊಳ್ಳಿ) ನಡೆಸಿದ್ದಾರೆ. ಈಗಾಗಲೇ ಅವರು 12ನೇ ಪುನರ್ರಚನೆ ನಡೆಯಲಿದೆ ಎಂದು ಭರವಸೆಯನ್ನೂ ನೀಡಿದ್ದಾರೆ. ಹಿಂದಿನ ಅವರ 13 ತಿಂಗಳ ಅವತಾರವನ್ನು ಪರಿಗಣಿಸಿದರೆ ಇದು ಅವರ 13ನೇ ಸಂಪುಟ ಪುನರ್ರಚನೆಯಾಗುತ್ತದೆ(ಅವರಿಗೆ 'ಹದಿಮೂರರ' ಮೇಲೆ ಅದೇನೋ ವಿಶೇಷ ಒಲವು ಇದ್ದಂತಿದೆ. ಅವರ ಮೊದಲ ಅವಧಿ 13 ದಿನಗಳದ್ದು ತಾನೇ). ಇದು ಯಾವುದೇ ಲೋಕಸಭೆ ನೋಡಿದ ಅತಿ ಹೆಚ್ಚು ಸಂಪುಟ ಪುನರ್ರಚನೆ. ಈ ಹದಿಮೂರನೇ ಲೋಕಸಭೆಯು ಇಂತಹ ಕುಖ್ಯಾತಿಯನ್ನುಗಳಿಸಿದೆ.

ಇದರ ಪರಿಣಾಮವಾಗಿ ಸಂಪುಟದ ಗಾತ್ರವೂ ಸ್ವತಂತ್ರ ಭಾರತದಲ್ಲಿ ಅಭೂತಪೂರ್ವ ಮಟ್ಟ ತಲುಪಿದೆ. ಈ ಹಿಂದೆ ಆರ್.ಕೆ. ಲಕ್ಷ್ಮಣರವರು ಬರೆದ ಒಂದು ವ್ಯಂಗ್ಯಚಿತ್ರದ ನೆನಪಾಗುತ್ತದೆ. ಅವರು ಒಂದು ಸಾರ್ವಜನಿಕ ಪಾರ್ಟಿಯಲ್ಲಿ ಹಾಕಿದ ಬೃಹತ್ ಮಂಟಪವನ್ನು ತೋರಿಸುತ್ತಾ "ಅಲ್ಲ, ಇದು ಸಾರ್ವಜನಿಕ ಸಭೆಗಲ್ಲ. ಪೂರ್ಣ ಸಂಪುಟದ ಒಂದು ಸಭೆಗೆ" ಎಂದು ಆ ವ್ಯಂಗ್ಯ ಚಿತ್ರದ ಕೆಳಗೆ ನಮೂದಿಸಲಾಗಿತ್ತು.

'ಮಿತಿ' ಮೀರಿದ ಸಂಪುಟ

ಸಂಪುಟ ಎಷ್ಟು ದೊಡ್ಡದೆಂದರೆ ಜನಗಳಿಗೆ ಅದರ ಲೆಕ್ಕವೇ ತಪ್ಪಿಹೋಗಿದೆ. ಈ ಸಂಪುಟದಲ್ಲಿ 80 ಜನರಿದ್ದಾರೆ ಎಂಬುದು ಸಾಮಾನ್ಯ ನಂಬಿಕೆ. ಆದರೆ ಒಂದು ಖಾಸಗಿ ಟಿ.ವಿ. ಚಾನೆಲ್ ಪ್ರಕಾರ ಈಗ 83 ಸದಸ್ಯರಿದ್ದಾರೆ. ಇತರ ಸಂಪುಟ ಸ್ಥಾನಮಾನದ ಹುದ್ದೆಗಳನ್ನು (ವಿವಿಧ ಆಯೋಗಗಳ ಅಧ್ಯಕ್ಷರು, ಇತ್ಯಾದಿಗಳನ್ನು) ಪರಿಗಣಿಸಿದರೆ ಈ ಸಂಖ್ಯೆ 130 ಆಗುತ್ತದೆ!

ಇದು ಸ್ವತಃ ವಾಜಪೇಯಿ ಸರಕಾರವೇ ವಿಧಿಸಿದ ಮಿತಿಯನ್ನು ಮೀರಿದೆ. ವಿವಿಧ ಆಯೋಗಗಳ ವರದಿಗಳು ಮತ್ತು ಸಿಪಿಐ(ಎಂ) ಕೂಡ ಮಂತ್ರಿಮಂಡಲದ ಗಾತ್ರ ಚುನಾಯಿತ ಸದನದ (ಲೋಕಸಭೆ ಅಥವಾ ವಿಧಾನಸಭೆಯ) ಸಂಖ್ಯೆ ಶೇ. 10ಕ್ಕಿಂತ ಹೆಚ್ಚಿರಬಾರದು ಎಂದು ಶಿಫಾರಸು ಮಾಡಿದ್ದವು. ಇದನ್ನು ನಿರ್ಲಕ್ಷಿಸಿ ವಾಜಪೇಯಿ ಸರಕಾರ ಈ ಗಾತ್ರವನ್ನು ಎರಡೂ ಸದನಗಳ ಒಟ್ಟು ಸಂಖ್ಯೆಯ ಶೇ. 10ಕ್ಕೆ ಮಿತಿಗೊಳಿಸಬೇಕು ಎಂದು ಪ್ರಸ್ತಾವವಿಟ್ಟಿದೆ. ಈ ಪ್ರಕಾರವೂ ಕೇಂದ್ರ ಸಂಪುಟದ ಸಂಖ್ಯೆ 79ನ್ನು ಮೀರಬಾರದು. ಅದನ್ನು ಈಗಾಗಲೇ ಮೀರಲಾಗಿದೆ, ಅಲ್ಲದೆ ಇನ್ನಷ್ಟು ಹೆಚ್ಚಿಸುವ ಭರವಸೆ ಬೇರೆ!

ಏತಕ್ಕಾಗಿ 'ಪುನರ್ರಚನೆ'!


ಈ ಎಲ್ಲಾ ಸಂಪುಟ ಪುನರ್ರಚನೆಗಳಲ್ಲಿ ಸರಕಾರದ ದಕ್ಷತೆ ಹಾಗೂ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕಾಗಿಯಂತೂ ಖಂಡಿತಾ ಅಲ್ಲ. ಅವೆಲ್ಲಾ ನೀಚ ರಾಜಕೀಯ ಕಸರತ್ತುಗಳು ಮತ್ತು ಕುದುರೆ ವ್ಯಾಪಾರದ ಭಾಗ. ಇದರ ಉದ್ದೇಶ ಈ ಎನ್.ಡಿ.ಎ. ಎಂಬ ಅಸಹಜ, ಅನೀತಿಯುತ ಕೂಟವನ್ನು ಒಟ್ಟಾಗಿ ಇಡುವುದು ಮತ್ತು ಅದರೊಳಗೆ ಆರ್.ಎಸ್.ಎಸ್.-ಬಿಜೆಪಿಯ ಪ್ರಾತಿನಿಧ್ಯ ಮತ್ತು ಸರಕಾರದ ಮೇಲೆ ಹಿಡಿತದ ಮಟ್ಟವನ್ನು ಹೆಚ್ಚಿಸುವುದು. ಈ ಗುರಿಸಾಧನೆಗೆ ವಾಜಪೇಯಿ ರಾಜಕೀಯ ಭ್ರಷ್ಟಾಚಾರದ 'ಅಲ'ಯನ್ನು ಪರಿಪೂರ್ಣಗೊಳಿಸುತ್ತಿದ್ದಾರೆ. ಯಾವುದೇ ನೀತಿ, ಧೋರಣೆಯಿಲ್ಲದ ಬೆಂಬಲಕ್ಕೆ ಪ್ರತಿಯಾಗಿ ಮಂತ್ರಿ ಪದವಿಗಳನ್ನು ಹಂಚಲಾಗುತ್ತಿದೆ. ಕೇಂದ್ರ ಸಂಪುಟದಲ್ಲಿ ಒಂದು ಸ್ಥಾನ ಪಡೆಯಲು ನಿರ್ದಿಷ್ಟ ವಾಣಿಜ್ಯ ದರಗಳನ್ನು ವಿಧಿಸುವ ಕ್ರಮವೂ ಸದ್ಯದಲ್ಲೇ ಬರಬಹುದು. ರಾಜ್ಯಸಭೆಗೆ ಸೀಟು ಕೊಡುವಲ್ಲಿ ಇದು ಈಗಾಗಲೇ ಹೆಚ್ಚೆಚ್ಚು ಕಾಣಬರುತ್ತಿದೆ! ಬೇರೆ ಯಾವುದೇ ಸರಕಿನಂತೆ ಕೇಂದ್ರ ಸಂಪುಟದಲ್ಲಿ ಒಂದು ಸ್ಥಾನವನ್ನು ಖರೀದಿಸಬಹುದು, ಮುಂಗಡ ಕಾದಿರಿಸಬಹುದು!

ಈ ನಡುವೆ ಕೇಂದ್ರ ಸಂಪುಟದಲ್ಲಿ ಒಂದು ಸ್ಥಾನಕ್ಕೆ ಒಂದು ರಾಜಕೀಯ ಬೆಲೆಯನ್ನು ಈಗಾಗಲೇ ನಿಗದಿ ಮಾಡಲಾಗಿದೆ. ವಾಜಪೇಯಿಯವರನ್ನು ಪ್ರಧಾನ ಮಂತ್ರಿಯಾಗಿ ಬೆಂಬಲಿಸಿ, ಅದಕ್ಕೆ ಪ್ರತಿಯಾಗಿ ಸಂಪುಟದಲ್ಲಿ ಒಂದು ಸ್ಥಾನ ಪಡೆಯಿರಿ (ನಿಮ್ಮ ಪಕ್ಷ ಎನ್‌ಡಿಎ ಸದಸ್ಯ ಪಕ್ಷವಾಗಿಲೇಬೇಕೆಂದೇನಿಲ್ಲ, ಇತ್ತೀಚಿನವರೆಗೆ ಅಜಿತ್ ಸಿಂಗ್‌ರಂತೆ) ಅಧಿಕಾರದ ಫಲಗಳ ಹೊಳೆಯಲ್ಲಿ ಪಾಲು ಪಡೆಯಿರಿ!

ಹಗರಣಗಳಲ್ಲೂ 'ಹೊಸ ಬೆಳಕು'!

ಅಧಿಕಾರದ ಕೊಳ್ಳೆಯ ಪ್ರಶ್ನೆ ಬಂದಾಗ, ಮತ್ತೊಮ್ಮೆ ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರ ಪ್ರಕಟಗೊಂಡಿದೆ. ಎಂ.ಡಿ.ಎಂ.ಕೆ.ಯ ಹಣಕಾಸು ರಾಜ್ಯ ಮಂತ್ರಿ ಜಿಂಜಿ ರಾಮಚಂದ್ರನ್ ಆದಾಯ ತೆರಿಗೆ ಅಧಿಕಾರಿಗಳ ವರ್ಗಾವಣೆಯ ಸಂಯೋಜಿತ, ಸುಸಜ್ಜಿತ ಹಗರಣದಲ್ಲಿ ಸಿಲುಕಿ ರಾಜೀನಾಮೆ ನೀಡಬೇಕಾಗಿ ಬಂದಿದೆ. ಅವರ ರಾಜಕೀಯ ಕಾರ್ಯದರ್ಶಿ ನೇರವಾಗಿ ಸಿಕ್ಕಿಹಾಕಿಕೊಂಡು ಬಂಧಿತರಾಗಿದ್ದಾರೆ. ಹಣಕಾಸು ಮಂತ್ರಿಗಳು ಇಂತಹ 54 ವರ್ಗಾವಣೆಗಳನ್ನು ರದ್ದು ಮಾಡಬೇಕಾಗಿ ಬಂದಿದೆ. ತ್ವರಿತವಾಗಿ ಬೆಳಕಿಗೆ ಬರುತ್ತಿರುವ ಹಗರಣಗಳ ಸರಣಿಯಿಂದಾಗಿ ವಾಜಪೇಯಿ ಸರಕಾರ ಲೂಟಿಯ ತನ್ನ ದೊಡ್ಡ ನದಿಗಳನ್ನು ಮಾಡಿದಂತೆ ಕಾಣುತ್ತಿದೆ. ಸಚಿವ ಸಂಪುಟ ದುಡ್ಡು ಮಾಡುವುದರಲ್ಲಿ ಎಷ್ಟು ಮಗ್ನವಾಗಿದೆಯೆಂದರೆ ಆಡಳಿತ ನಡೆಸಲು ಅದಕ್ಕೆ ಸಮಯವೇ ಇಲ್ಲ. ಕಾಂಗ್ರೆಸ್ ಪಕ್ಷದವರು ಸುಮಾರು ನಾಲ್ಕು ದಶಕದವರೆಗೆ ಆಡಳಿತ ನಡೆಸಿದರೂ ದುಡ್ಡು ಮಾಡಲು ಇಷ್ಟೊಂದು ದಾರಿಗಳಿವೆ ಎಂದು ತಮಗೆ ತಿಳಿಯಲೇ ಇಲ್ಲ ಎಂದು ಒಬ್ಬ ಹಿರಿಯ ಕಾಂಗ್ರೆಸ್ಸಿಗರು ಹಳಹಳಿಸುತ್ತಾ ಹೇಳಿದ್ದಾರಂತೆ! ಈ ವಾಜಪೇಯಿ ಸರಕಾರ ನಿಜಕ್ಕೂ ಹೊಸ ಪಥವನ್ನೇ ಬೆಳಗಿಸುತ್ತಿದೆ!


ಅಜಿತ್ ಸಿಂಗ್


ಜಿಂಜಿ ರಾಮಚಂದ್ರನ್

ಬಿಜೆಪಿಯ ಉತ್ತರ ಪ್ರದೇಶ ಅಜೆಂಡಾ

ಸಂಪುಟ ಪುನರ್ರಚನೆಯಲ್ಲಿನ ರಾಜಕೀಯ ಭ್ರಷ್ಟಾಚಾರ ಅಜಿತ್ ಸಿಂಗ್‌ರನ್ನು ಹೊರಹಾಕುವಲ್ಲಿ ಕಂಡುಬರುತ್ತದೆ. ಕೃಷಿಯ ಕುರಿತು ವಾಜಪೇಯಿ ಸರಕಾರದ ಕೆಲವು ಧೋರಣೆಗಳಿಗೆ ಅವರು ಸಾರ್ವಜನಿಕ ವಾಗಿ ಅಸಮ್ಮತಿ ವ್ಯಕ್ತಪಡಿಸಿದ್ದರು. ಆತ ಅವರ ಪಕ್ಷದ ಏಕೈಕ ಲೋಕಸಭೆ ಸದಸ್ಯನಾದ್ದರಿಂದ ಅವರನ್ನು ಹೊರಹಾಕುವುದರಿಂದ ಎನ್.ಡಿ.ಎ.ಗೆ, ಕೇಂದ್ರ ಸರಕಾರಕ್ಕೆ ಏನೂ ತೊಂದರೆಯಿಲ್ಲ! ಆದರೆ ಉತ್ತರ ಪ್ರದೇಶದಲ್ಲಿ ಅವರ ಪಕ್ಷದ 14 ಶಾಸಕರ ಬೆಂಬಲ ಹಿಂತೆಗೆದುಕೊಂಡರೆ ರಾಜ್ಯ ಸರಕಾರದ ಬಹುಮತ ಇಳಿಯುತ್ತದೆ. ಮಾಯಾವತಿ ಸರಕಾರದ ಅಲ್ಪ ಬಹುಮತ ಆಕೆಯ ಮೇಲೆ ಹೆಚ್ಚು ಒತ್ತಡ ಹಾಕಿ, ಆಕೆ ಬಿಜೆಪಿ ಮೇಲೆ ಹೆಚ್ಚು ಅವಲಂಬಿಸುವಂತೆ ಮಾಡಬಹುದು. ಅದೇ ವೇಳೆಗೆ ರಾಜನಾಥ್ ಸಿಂಗ್‌ರಂತಹ ಮಾಯಾವತಿ ವಿರೋಧಿಯೆಂದು ಎಲ್ಲರಿಗೂ ತಿಳಿದಿರುವ ಬಿಜೆಪಿ ಮುಖಂಡರನ್ನು ಕೇಂದ್ರ ಸಂಪುಟದಲ್ಲಿ ಸೇರಿಸುವುದರ ಹಿಂದೆ ಉತ್ತರ ಪ್ರದೇಶದ ಮೇಲ್ಜಾತಿಗಳನ್ನು (ಠಾಕೂರರನ್ನು) ಸಂತುಷ್ಟಗೊಳಿಸುವ, ಆ ಮೂಲಕ ಮಾಯಾವತಿಯವರ ಮೇಲೆ ಒತ್ತಡ ಹೆಚ್ಚಿಸುವ ಉದ್ದೇಶವಿದೆ. ಆದ್ದರಿಂದ ಕೇಂದ್ರ ಸಂಪುಟದ ಪುನರ್ರಚನೆ ಉತ್ತರ ಪ್ರದೇಶದಲ್ಲಿ ರಾಜಕೀಯ ಕಸರತ್ತಿನ ಬಿಜೆಪಿ ಅಜೆಂಡಾದ ಸಾಧನೆಗಾಗಿ ಮತ್ತೊಂದು ತಮಾಷೆ.


ಇನ್ನು ಸಂಪುಟಕ್ಕೆ ಮಮತಾ ಬ್ಯಾನರ್ಜಿಯವರನ್ನು ಸೇರಿಸುವ ಸುದ್ದಿ, ಸಂತರ ವಾಜಪೇಯಿಯವರ ವಿರುದ್ಧ ಪ್ರತಿಭಟನೆಯ ನಟನೆಯಂತೂ ಹಾಸ್ಯಾಸ್ಪದ ಅಸಂಬದ್ಧತೆಯ ವಲಯಕ್ಕೆ ಸೇರಿದ್ದು. ಆಕೆಯ ಅನುಮತಿಯಿಲ್ಲದೆ ಆಕೆಯ ಪಕ್ಷದ ಇನ್ನೊಬ್ಬ ಸದಸ್ಯರನ್ನು ಆರಿಸಿದ್ದಕ್ಕೆ ಆಕೆಗೆ ಸಿಟ್ಟಂತೆ. ಕೇಂದ್ರ ಸಂಪುಟದಲ್ಲಿ ಮಮತಾ ಬ್ಯಾನರ್ಜಿ ಮತ್ತು ಫಾರುಕ್ ಅಬ್ದುಲ್ಲಾರ ಗೈರು ಹಾಜರಿಯ ಹಿಂದೆ ಅಪೂರ್ಣವಾಗುಳಿದಿರುವ ಚೌಕಾಸಿಯ ಸಂಗತಿಗಳಿರುವುದು ಸ್ಪಷ್ಟ. ಪೂರ್ವಭಾವಿಗೆ ಒಂದು ಪ್ರತ್ಯೇಕ ಸಂಪುಟ ದರ್ಜೆಯ ಮಂತ್ರಿಪದವಿಯನ್ನು ಸೃಷ್ಟಿಸುವುದು ಮಾತ್ರವೇ ಮಮತಾ ಬ್ಯಾನರ್ಜಿಯನ್ನು ತೃಪ್ತಿಪಡಿಸಬಹುದಾದ ಏಕೈಕ ದಾರಿ ಎಂದು ಒಂದು ರಾಷ್ಟ್ರೀಯ ಪತ್ರಿಕೆ ವ್ಯಂಗ್ಯವಾಗಿ ಟೀಕಿಸಿದೆ.

ಕೇಡಿನ ಸಂಗತಿ

ಈ ಸಂಪುಟ ಪುನರ್ರಚನೆಯಲ್ಲಿನ ಇನ್ನಷ್ಟು ಆತಂಕಕಾರಿ ಅಂಶವೆಂದರೆ ಸಂಪುಟದೊಳಗೆ ವಿಹೆಚ್‌ಪಿ ಮುಖಂಡರನ್ನು ಸೇರಿಸಿಕೊಂಡಿರುವುದು. ಈ ವಾಜಪೇಯಿ ಸರಕಾರ ವಿಹೆಚ್‌ಪಿ ಎಬ್ಬಿಸುವ ಕರ್ಕಶ ಕೋಮುವಾದಿ ಕೂಗಿನಿಂದ ದೂರ ನಿಲ್ಲಲು ಪ್ರಯತ್ನಿಸುತ್ತಿದೆ ಎಂಬ ಮಾತು ಈಗಲಾದರು ಕೊನೆಗೊಳ್ಳಬೇಕು. ಅಯೋಧ್ಯೆಯಲ್ಲಿ ಸರಕಾ[ರ] ವಹಿಸಿಕೊಂಡ ಸಂಪೂರ್ಣ ಜಮೀನನ್ನು ವರ್ಗಾಯಿಸಬೇಕೆಂಬ ಬಿಜೆಪಿ ಪ್ರಯತ್ನದಲ್ಲಿ ಮುಂಚೂಣಿಯಲ್ಲಿದ್ದ ಸ್ವಾಮಿ ಚಿನ್ಮಯಾನಂದರನ್ನು ನಿರ್ಣಾಯಕವಾದ ಗೃ[ಹ] ವ್ಯವಹಾರಗಳ ಇಲಾಖೆಯಲ್ಲಿ ಒಬ್ಬ ಮಂತ್ರಿಯಾಗಿ ಮಾಡಲಾಗಿದೆ.!

ಅದೇ ರೀತಿ ಗೃಹ ಖಾತೆಯಲ್ಲಿ ರಾಜ್ಯಮಂತ್ರಿಯಾಗಿ ನೇಮಕಗೊಂಡಿರುವ ಪ್ರಹ್ಲಾದ್‌ಸಿಂಗ್ ಪಟೇಲ್ ಇತ್ತೀಚೆಗೆ ಗೋವ[ಧೆ] ನಿಷೇಧಕ್ಕೆ ಒಂದು ರಾಷ್ಟ್ರೀಯ ಕಾನೂನು ಬೇಕೆಂದು ಕರೆ ನೀಡಿ ಲೋಕಸಭೆಯಲ್ಲಿ, ಖಾಸಗಿ ಮಸೂದೆಯನ್ನು ಪ್ರಯೋಜಿಸಿದ ವ್ಯ[ಕ್ತಿ]. ಈ ಖಾಸಗಿ ಮಸೂದೆ ಸದನದಲ್ಲಿ ಅಂಗೀಕಾರವಾಗುವಂತೆ ಮಾಡಲು ಬಿಜೆಪಿ ತ[ನ್ನ] ಎಲ್ಲಾ ಸಂಸತ್ ಸದಸ್ಯರಿಗೆ ವ್ಹಿಪ್ ಹೊರಡಿಸಿ[ತ್ತು] ಎಂಬುದನ್ನು ಓದುಗರು ನೆನಪಿಸಿಕೊಳ್ಳಬಹು[ದು].

ಬಿಜೆಪಿ ಎನ್.ಡಿ.ಎ. ಪಾಲುದಾರರಿಗೆ ಎದುರಾಗಿ ಸಂಪುಟದಲ್ಲಿ ತನ್ನ ಬಲವರ್ಧನೆ ಮಾಡಿಕೊಂಡಿದೆಯಷ್ಟೇ ಅಲ್ಲ, ಪ್ರಭುತ್ವ ಅಧಿಕಾರದ ಮೇಲೆ ಆರ್.ಎಸ್.ಎಸ್. ಮತ್ತು ಅದರ ಕಬಂಧ ಬಾಹುಗಳ ಸಂಪೂರ್ಣ ಹಿಡಿ[ತ] ಈಗ ಒಂದು ವಾಸ್ತವ ಸಂಗತಿ. ಮುಂಬರುವ ಚುನಾವಣೆಗಳಿಗೆ ಸಿದ್ಧತೆಯಾಗಿ ಕೋಮುವಾದಿ ಬ್ಯಾಂಕಿಯ ಕೊಳವನ್ನು ಹೆಚ್ಚಿಸುವ ಗುರಿಯನ್ನೇ ಆರ್.ಎಸ್.ಎಸ್./ ಬಿಜೆಪಿ ಹೊಂದಿದೆ ಎಂಬುದನ್ನು ಇವು ದೃಢಪಡಿಸಿವೆ. ಇದು ನಿಜವಾಗಿಯೂ ಭಾರತೀಯ ಗಣತಂತ್ರದ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಸ್ವರೂಪದ ಭವಿಷ್ಯಕ್ಕೆ ಕೇಡಿನ ಸೂಚನೆ.



ಗ್ರಾಮೀಣ ಕೃಪಾಂಕ - ಮು


ಸುಪ್ರಿಂ ಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ ಗ್ರಾಮೀಣ ಕೃಪಾಂಕ ಆಧಾರಿತವಾಗಿ ನೇಮಕವಾಗಿದ್ದ 13,270 ನೌಕರರು ಅತಂತ್ರ ಸ್ಥಿತಿಯಲ್ಲಿದ್ದಾರೆ. ರಾಜ್ಯ-ಕೇಂದ್ರ ಸರ್ಕಾರಗಳು ಚಿತ್ರದುರ್ಗ ಜಿಲ್ಲೆಯ ಹೊಸದುರ್ಗಾ ತಾಲ್ಲೂಕಿನ ಮಳಲಿ ಗ್ರಾಮದ 28 ವಯಸ್ಸಿನ ರಾಜಪ್ಪ ನಾಗಪ್ಪ ಎಂಬ ಶಿಕ್ಷಕರೊಬ್ಬರು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ವಿಷಯ ಪತ್ರಿಕೆಯಲ್ಲಿ ಇತ್ತೀಚಿಗೆ ವರದಿಯಾಗಿದೆ. ಅಂತೆಯೇ ತುಮಕೂರಿನಲ್ಲಿ ಮದುವೆ ನಿಶ್ಚಿತವಾಗಿದ್ದ ಯುವಕನೋರ್ವನ ಮದುವೆ ಇತ್ತೀಚಿಗೆ ರದ್ದಾಗಿದೆ. ದೂರದ ಬೆಳಗಾವಿಯಿಂದ ಡಿ.ವೈ.ಎಫ್.ಐ. ಕಛೇರಿಗೆ ಫೋನ್ ಮಾಡುವ ನಿರುದ್ಯೋಗಿ ಯುವಕರೊಬ್ಬರು, ಏನಾದರೂ ಮಾಡಿ ನನ್ನ ಹೆಂಡತಿಯ ಕೆಲಸ ಉಳಿಸಿ ಸಾರ್ ಎಂದು ರೋದಿಸುತ್ತಾರೆ. ಒಂದು ವರ್ಷದ ಹಿಂದೆ ಶಿರಾದಲ್ಲಿ ಓರ್ವ ಶಿಕ್ಷಕ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಉದ್ಯೋಗ ಅದರಲ್ಲೂ ಸರ್ಕಾರಿ ಉದ್ಯೋಗ ಸಿಗುವುದೇ ಜೀವನದ ಒಂದು ಅದೃಷ್ಟ ಎಂಬ ಪರಿಸ್ಥಿತಿ ಪ್ರಸ್ತುತ "ಉದ್ಯೋಗ ರಹಿತ ಬೆಳವಣಿಗೆ" ಎಂಬ ಜಾಗತೀಕರಣದ ಯುಗದಲ್ಲಿ ಇರುವಾಗ, ಮೇಲಿನ ಸರ್ಕಾರಿ ಉದ್ಯೋಗಸ್ತರ ಪಾಡು ಹೀಗೇಕೆ? ಎಂದು ಯಾರಾದರೂ ಪ್ರಶ್ನಿಸಿಕೊಂಡಲ್ಲಿ ಸಿಗುವ ಉತ್ತರ ಅವರು ಗ್ರಾಮೀಣ ಕೃಪಾಂಕ ನೌಕರರು ಹಾಗಾಗಿ ಅವರಿಗೆ ಈ ಪಾಡು"! ಎಂಬ ಉತ್ತರ ತಟ್ಟನೆ ಹೊಳೆಯುತ್ತದೆ.

ರಾಜ್ಯದ ಜನತೆಯು ಮುಂದೆ, ಮರೆತೆವೆಂದರೂ- ಮರೆಯದಿರಿ ಎಂಬಂತೆ, 1998 ರಿಂದಲೂ ಪ್ರತಿ ವರ್ಷ ಗ್ರಾಮೀಣ ಕೃಪಾಂಕ ಮತ್ತು ಅದರ ವಿಷಯ ಭೂತದಂತೆ ಕಾಡುತ್ತಿದೆ. 2003' ರ ಮೇ.6 ರಂದು ರಾಷ್ಟ್ರದ ಸುಪ್ರಿಂ ಕೋರ್ಟ್ ಕೃಪಾಂಕ ಆಧಾರಿತ ನೌಕರರ ಪ್ರಶ್ನೆಗಳ ಕುರಿತು, 1998-99 ರಲ್ಲಿ ರಾಜ್ಯದಲ್ಲಿ ನೇಮಕವಾಗಿದ್ದ 13,270 ನೌಕರರ ಆಯ್ಕೆ ಕಾನೂನು ಬಾಹಿರವಾದದ್ದು, ಅವರನ್ನು ನಾಲ್ಕು ವಾರದೊಳಗೆ ಕೆಲಸದಿಂದ ಬಿಡುಗಡೆ ಮಾಡಬೇಕೆಂದು ತೀರ್ಪು ನೀಡಿದೆ. ರಾಜ್ಯ ಸರ್ಕಾರ ಮತ್ತೆ ನಾಲ್ಕು ವಾರಗಳ ಸಮಯ ಅವಕಾಶ ಕೋರಿರುವ ಕಾರಣ 2003' ರ ಜುಲೈ 6ರೊಳಗೆ, 13,270 ನೌಕರರನ್ನು ಸೇವೆಯಿಂದ ಬಿಡುಗಡೆ ಮಾಡಬೇಕು ಎಂದು ಸುಪ್ರಿಂ ಕೋರ್ಟ್ ಹೇಳಿದೆ.

ಈ ಕುರಿತು ರಾಜ್ಯ ಸರ್ಕಾರವು ತನ್ನ ಮುಂದೆ ಶಾಸನ ರೂಪಿಸಬೇಕೆ ಅಥವಾ ಸುಗ್ರೀವಾಜ್ಞೆ ಹೊರಡಿಸಬೇಕೆ, ಸಂವಿಧಾನ ತಿದ್ದುಪಡಿಗೆ ಒತ್ತಾಯಿಸಬೇಕೆ, ಅಥವಾ ಸುಪ್ರಿಂ ಕೋರ್ಟ್ ತೀರ್ಪಿನಂತೆ ಅವರನ್ನು ನೌಕರಿಯಿಂದ ಬಿಡುಗಡೆ ಮಾಡಿ ನಂತರ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳಬೇಕೆ ಎಂಬ ನಾಲ್ಕು ಆಯ್ಕೆಗಳಿವೆ ಎಂದು ಹೇಳುತ್ತಿದೆ. ಈ ಆಯ್ಕೆಗಳ ನಡುವೆ ಅವರನ್ನು ನೌಕರಿಯಿಂದ ಬಿಡುಗಡೆ ಮಾಡಿ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳುವ ಆಯ್ಕೆ ಬಗ್ಗೆ ಹೆಚ್ಚು ಆಸಕ್ತಿಯಿಂದ ಇರುವುದಾಗಿ ಕಾಣುತ್ತದೆ. ಹಾಗಾಗಿ ರಾಜ್ಯದ ಬಹುತೇಕ ರಾಜಕೀಯ ಪಕ್ಷಗಳು, ಕಾನೂನು ತಜ್ಞರ ಅಭಿಮತದಂತೆ ಸಂವಿಧಾನ ತಿದ್ದುಪಡಿಗೆ ಕೇಂದ್ರ ಸರ್ಕಾರವನ್ನು ಒತ್ತಾಯಿಸುವ ಯಾವುದೇ ಕ್ರಮವನ್ನಾಗಲೀ ತಯಾರಿನ್ನಾಗಲಿ ರಾಜ್ಯ ಸರ್ಕಾರ ಇದುವರೆಗೆ ಮಾಡಿಲ್ಲ. ಮಾತ್ರವಲ್ಲ ಅಧಿಕೃತ ಹೇಳಿಕೆಯನ್ನು ಸಹಾ ನೀಡಿಲ್ಲ.

ಈ ನಡುವೆ ಇಡೀ ಕೃಪಾಂಕ ನೌಕರರನ್ನು ರಕ್ಷಿಸುತ್ತೇವೆ ಎಂದು ಹೇಳಿ ಎಲ್ಲಾ 13,270 ನೌಕರರು ಸಹಾ ವೈಯಕ್ತಿಕ ಅರ್ಜಿಯನ್ನು ಸುಪ್ರಿಂ ಕೋರ್ಟ್‌ಗೆ ಸಲ್ಲಿಸಬೇಕು. ಮಾನವೀಯ ಅನುಕಂಪದ ಆಧಾರದಲ್ಲಿ ಸುಪ್ರಿಂ ಕೋರ್ಟ್‌ಗೆ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಬೇಕು ಎಂದು





ನಗರ ಶಿಕ್ಷಣ ಗ್ರಾಮೀಣ ಶಿಕ್ಷಣಕ್ಕೂ ಇರುವ ವ್ಯತ್ಯಾಸ

ಸಂವಿಧಾನ ತಿದ್ದುಪಡಿಯೊಂದೇ ಮಾರ್ಗ......

ದುಂಡು ಮೇಜಿನ ಸಭೆಯ ಒಮ್ಮತ ಅಭಿಮತ

ಸರ್ವೋಚ್ಚ ನ್ಯಾಯಾಲಯದ ತೀರ್ಪಿನಿದಾಗಿ ಅತಂತ್ರ ಸ್ಥಿತಿ ತಲುಪಿರುವ 13,500 ನೌಕರರ ಬದುಕನ್ನು ರಕ್ಷಿಸಲು ಮತ್ತು ಭವಿಷ್ಯದಲ್ಲಿ ಗ್ರಾಮೀಣ ಕೃಪಾಂಕವನ್ನು ಖಾತರಿಪಡಿಸಲು 'ಸಂವಿಧಾನಕ್ಕೆ ಸೂಕ್ತ ತಿದ್ದುಪಡಿ ಮಾಡುವುದು ಮಾತ್ರವೇ ಮುಂದಿರುವ ದಾರಿ. ಈ ದಿಸೆಯಲ್ಲಿ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕೆಂದು ಮೇ-27 ರಂದು ಬೆಂಗಳೂರಿನಲ್ಲಿ ನಡೆದ "ಗ್ರಾಮೀಣ ಕೃಪಾಂಕ ಆಧಾರಿತ ನೇಮಕವಾಗಿರುವ 13,500 ನೌಕರರ ಬದುಕಿನ ಪ್ರಶ್ನೆ" ಕುರಿತ ದುಂಡು ಮೇಜಿನ ಸಭೆ ಸರ್ವಸಮ್ಮತ ನಿರ್ಣಯ ಕೈಗೊಂಡಿದೆ.

ಡಿ.ವೈ.ಎಫ್.ಐ ಮತ್ತು ಎಸ್.ಎಫ್.ಐ ರಾಜ್ಯ ಸಮಿತಿಗಳು ಸಂಘಟಿಸಿದ್ದ ಈ ಸಭೆಯಲ್ಲಿ ರಾಜ್ಯದ ಎಲ್ಲಾ ರಾಜಕೀಯ ಪಕ್ಷಗಳ ಧುರೀಣರು, ಕಾನೂನು, ಶಿಕ್ಷಣ ತಜ್ಞರು, ವಿವಿಧ ಸಂಘಟನೆಗಳ ಮುಖಂಡರು ಭಾಗವಹಿಸಿ ಸುಮಾರು ಮೂರು ತಾಸುಗಳ ಕಾಲ ಸುದೀರ್ಘ ಚರ್ಚೆ ನಡೆಸಿದರು.

ಸರ್ವೋಚ್ಚ ನ್ಯಾಯಾಲಯ ಕೃಪಾಂಕದ ಆಧಾರದಲ್ಲಿ ನೇಮಕವಾಗಿರುವ 13,500 ನೌಕರರನ್ನು 8 ವಾರಗಳ ಒಳಗೆ ಸೇವೆಯಿಂದ ಬಿಡುಗಡೆಗೊಳಿಸಬೇಕೆಂದು ಆದೇಶಿಸಿದೆ. ಅದನ್ನು ಪುನರ್ ಪರಿಶೀಲಿಸಲು ಇರುವ ಅವಕಾಶಗಳನ್ನು ವಿವರವಾಗಿ ಚರ್ಚಿಸಿದ ಸಭೆಯು ಇದರಿಂದಾಗಿ ನೌಕರರ ಭವಿಷ್ಯದ ಮೇಲೆ ಯಾವುದೇ ಪ್ರಯೋಜನ ವಾಗುವುದಿಲ್ಲವೆಂದು ಅಭಿಪ್ರಾಯಪಟ್ಟಿತು. ಅಲ್ಲದೆ 1975 ರಿಂದಲೂ ಸರ್ವೋಚ್ಚ ನ್ಯಾಯಾಲಯವು ಕೃಪಾಂಕ ನೀಡುವಂತಹ ಮಾದರಿಯ ಸೌಲಭ್ಯಗಳನ್ನು, 1975 ರ ಪ್ರದೀಪ ಥಂಡನ್ ಮೊಕದ್ದಮೆಯಲ್ಲಿ, 1982 ರಲ್ಲಿ ರಾಜಕುಮಾರ್ ಮೊಕದ್ದಮೆಯಲ್ಲಿ, 1988 ರಲ್ಲಿ ಸುನಿಲ್ ಜೈಟ್ಲಿ ಮೊಕದ್ದಮೆಯಲ್ಲಿ 1995 ರಲ್ಲಿ ಎನ್. ಸುನಂದಾರೆಡ್ಡಿ ಮೊಕದ್ದಮೆಯಲ್ಲಿ ಅಸಿಂಧುಗೊಳಿಸಿರುವುದನ್ನು ನಾವು ಕಾಣಬಹುದಾಗಿದೆ. ಈಗ ಪುನಃ 1999 ರಲ್ಲಿ ಧಾರವಾಡದ ಬಸವರಾಜ್ ನಾಗೂರು ಪ್ರಕರಣದಲ್ಲಿ ಕರ್ನಾಟಕದಲ್ಲಿ ಗ್ರಾಮೀಣ ಕೃಪಾಂಕ ನೀಡುವಿಕೆಯನ್ನು 'ಸಂವಿಧಾನಬಾಹಿರ' ವೆಂದು ಘೋಷಿಸಿದೆ. ಇದಲ್ಲದೆ 53 ವರ್ಷಗಳ ನ್ಯಾಯಾಂಗದ ಅನುಭವವನ್ನು ಗಮನಿಸಿದಾಗ ಸಂವಿಧಾನದ ಮೂಲಭೂತ ತತ್ವಗಳಲ್ಲಿ ಒಂದಾದ' 'ಸಾಮಾಜಿಕ ನ್ಯಾಯದ' ಬಗ್ಗೆ ಹೊರಬಂದಿರುವ ತೀರ್ಪುಗಳು ಹಾಗೂ ಸರ್ವೋಚ್ಚ ನ್ಯಾಯಾಲಯದ ವ್ಯಾಖ್ಯಾನ, ಸಾಮಾನ್ಯ ಜನರಲ್ಲಿ ನ್ಯಾಯಾಂಗದ ಬಗ್ಗೆ ಸಂಪೂರ್ಣ ನಂಬಿಕೆಯುನ್ನಿಡಲು ಸಾಧ್ಯವಿಲ್ಲವೆಂಬ ಸತ್ಯ ಗೋಚರವಾಗುತ್ತದೆ. ಅದಕ್ಕೆ ಉದಾಹರಣೆಯಾಗಿ-

1951 ರಲ್ಲಿ ತಮಿಳುನಾಡು ಸರ್ಕಾರ 'ದಲಿತರಿಗೆ ಮತ್ತು ಹಿಂದುಳಿದವರಿಗೆ ಉನ್ನತ ಶಿಕ್ಷಣದಲ್ಲಿ ಪ್ರವೇಶ ಮೀಸಲಾತಿ ನೀಡಿದ್ದನ್ನು, ಮತ್ತು ಪಂಜಾಬ್‌ನಲ್ಲಿ ಮೊದಲನೆ ಬಾರಿಗೆ 'ಭೂಮಿತಿ' ಶಾಸನ ಜಾರಿ ಮಾಡಿದಾಗ ಮತ್ತು ಕೇಂದ್ರ ಸರ್ಕಾರ ಬ್ಯಾಂಕ್‌ಗಳ ರಾಷ್ಟ್ರೀಕರಣ ಮಾಡಿದ ಸಂದರ್ಭದಲ್ಲಿ, ದೇಶದ ಸರ್ವೋಚ್ಚ ನ್ಯಾಯಾಲಯವು ಈ ಪ್ರಮುಖ ಮೂರು ಪ್ರಕರಣಗಳನ್ನು 'ಅಸಿಂಧು' ಎಂದು ಘೋಷಿಸಿತು. ಈ ಪ್ರಕರಣಗಳಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತರುವುದರ ಮೂಲಕ 'ಸಾಮಾಜಿಕ ನ್ಯಾಯ' ವನ್ನು ಎತ್ತಿ ಹಿಡಿಯಲಾಯಿತು.


ಈ ಹಿನ್ನೆಲೆಯಲ್ಲಿ ಈ ದೇಶದ ನಗರ ಹಾಗೂ ಗ್ರಾಮಾಂತರ ಜನರ ನಡುವೆ ಇರುವಂತಹ ಅಂತರವನ್ನು ಗಮನಿಸಿ ಉತ್ತರಪ್ರದೇಶ, ಮಹಾರಾಷ್ಟ್ರ, ಹರಿಯಾಣ, ರಾಜಸ್ಥಾನ, ಆಂಧ್ರಪ್ರದೇಶ ಮತ್ತು ಕರ್ನಾಟಕ ರಾಜ್ಯಗಳು ಈ ಅಸಮಾನತೆಯನ್ನು ತೊಲಗಿಸಲು ಕೃಪಾಂಕವನ್ನು ನೀಡಿದ್ದನ್ನು ಈಗ ಸರ್ವೋಚ್ಚ ನ್ಯಾಯಾಲಯವು 'ಅಸಿಂಧು'ವೆಂದು ಘೋಷಿಸಿರುವ ಹಿನ್ನೆಲೆಯಲ್ಲಿ ಸಂವಿಧಾನ ತಿದ್ದುಪಡಿ ಅಥವಾ ಪರಿಚ್ಛೇಧ 31(ಬಿ) ಅಡಿಯಲ್ಲಿ ಒಂದು ಶಾಸನವನ್ನು ರೂಪಿಸುವ ಮುಖಾಂತರ 13,500 ನೌಕರರ ಬದುಕನ್ನು ರಕ್ಷಿಸುವ ಮತ್ತು ಗ್ರಾಮಾಂತರ ಕೃಪಾಂಕವನ್ನು ಮುಂದುವರೆಸುವ ಕೆಲಸವನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ತುರ್ತಾಗಿ ನಡೆಸಬೇಕೆಂದು "ದುಂಡು ಮೇಜಿನ ಸಭೆ" ಆಗ್ರಹಪಡಿಸಿತು.

ಸಭೆಯಲ್ಲಿ ಭಾಗವಹಿಸಿದ್ದ ಕರ್ನಾಟಕ ಸರ್ಕಾರದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಡಿ.ಬಿ.ಚಂದ್ರೇಗೌಡರಿಗೆ ಅತಂತ್ರಗೊಂಡಿರುವ 13,500 ನೌಕರರ ಸೇವಾ ಭದ್ರತೆಯನ್ನು ಕಾಪಾಡಲು ಅಗತ್ಯವಿರುವ ಕಾನೂನು ರೂಪಿಸಲು ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದ ಸಭೆಯು ಒಟ್ಟಾರೆ ಕೃಪಾಂಕವನ್ನು ಮುಂದುವರೆಸಲು 'ಸಂವಿಧಾನ ತಿದ್ದುಪಡಿಗೆ' ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕಬೇಕೆಂದು ಒತ್ತಾಯಿಸಿದರು.

ಸಭೆಯಲ್ಲಿ ಕರ್ನಾಟಕ ಸರ್ಕಾರದ ಪರವಾಗಿ ಡಿ.ಬಿ.ಚಂದ್ರೇಗೌಡ, ಜನತಾದಳ(ಯು) ಶಾಸಕಾಂಗ ಪಕ್ಷದ ನಾಯಕ, ಪಿ.ಜಿ.ಆರ್.ಸಿಂಧ್ಯಾ, ಎ.ಬಿ.ಜೆಡಿ ರಾಜ್ಯಾಧ್ಯಕ್ಷ, ಬೈರೇಗೌಡ, ಬಿಜೆಪಿಯ ರಾಮಚಂದ್ರಗೌಡ, ಜೆ.ಡಿ.(ಎಸ್) ಮಹಾ ಪ್ರಧಾನ ಕಾರ್ಯದರ್ಶಿ,ಸಿ. ನಾರಾಯಣ ಸ್ವಾಮಿ ಸಿ., ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್, ಸಿಪಿಐ ನ ಎಂ.ಸಿ.ನರಸಿಂಹನ್, ಶಿಕ್ಷಣ ತಜ್ಞರಾದ ಡಾ.ಚಂದ್ರಶೇಖರ್ ಪಾಟೀಲ, ಡಾ. ಜಿ.ರಾಮಕೃಷ್ಣ, ಶಾಸಕರಾದ ಡಾ.ಎಲ್. ಹನುಮಂತಯ್ಯ, ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಅಧ್ಯಕ್ಷ ಯು.ಡಿ.ನರಸಿಂಹಯ್ಯ, ರಾಜ್ಯ ರೈತ ಸಂಘ(ಪುಟ್ಟಣ) ಸಂಘಟನಾ ಕಾರ್ಯದರ್ಶಿ ಮಹಾದೇವನ್, ಮಾತನಾಡಿದರು. ಪತ್ರಕರ್ತ ಸನತ್‌ಕುಮಾರ್ ಬೆಳಗಲಿ, ಸೆಂಟ್ ಜೋಸೆಫ್ ಸಂಜೆ ಕಾಲೇಜಿನ ಪ್ರಾಂಶುಪಾಲ ಅಂಬ್ರೋಸ್ ಪಿಂಟೊ, ಎಸ್.ಎಫ್.ಐ ರಾಜ್ಯ ಕಾರ್ಯದರ್ಶಿ ಆರ್.ರಾಮಕೃಷ್ಣ, ಅಧ್ಯಕ್ಷೆ ಕೆ.ಎಸ್.ಲಕ್ಷ್ಮಿ ಮೊದಲಾದವರು ಉಪಸ್ಥಿತರಿದ್ದರು.

ಆರಂಭದಲ್ಲಿ ಡಿ.ವೈ.ಎಫ್.ಐ ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್ ಸ್ವಾಗತಿಸಿದರು. ಹೆಸರಾಂತ ವಕೀಲರಾದ ಹೆಚ್.ಎನ್.ನಾಗಮೋಹನ್‌ದಾಸ್ ವಿಷಯ ಪ್ರಸ್ತಾವನೆ ಮಾಡಿದರು. ಡಿ.ವೈ.ಎಫ್.ಐ ರಾಜ್ಯ ಅಧ್ಯಕ್ಷ ಕೆ.ಎನ್.ಉಮೇಶ್ ಅಧ್ಯಕ್ಷತೆ ವಹಿಸಿದ್ದರು.

- ಕೆ.ಮಹಾಂತೇಶ್



ದುಂಡುಮೇಜಿನ ಸಭೆಯಲ್ಲಿ ಸರ್ವಪಕ್ಷಗಳ ಪ್ರತಿನಿಧಿಗಳು ಮತ್ತು ಶಿಕ್ಷಣ ತಜ್ಞರು, ವಿವಿಧ ಸಂಘಟನೆಗಳ ಪ್ರತಿನಿಧಿಗಳು

...ೇನು?

ನೌಕರರ ಸಂಘ ಒತ್ತಾಯಿಸಿದೆ.
ದ ವ್ಯಾಪಕ ಬೆಂಬಲ ಸಿಗದಿದ್ದರೂ
ರರು ಸಲ್ಲಿಸಿರುವ ಅರ್ಜಿಯನ್ನು
ಗಳಾದ ಸಂತೋಷ್ ಹೆಗಡೆ
ಪ್ ಪಾಟೀಲ್‌ರ ರಜಾ ಕಾಲದ
ರಜೆಯ ನಂತರ, ಜುಲೈ 5 ರ
ಾಗುವ ಪೀಠದ ಮುಂದೆ ಅರ್ಜಿ
ಸಿದೆ. ಆದರೆ 2003' ರ ಮೇ.6
ರ್ಟ್ ತೀರ್ಪಿಗೆ ತಡೆ ಆಜ್ಞೆಯನ್ನು
ಕೋರಿದ್ದರೂ ಸಹಾ ತಡೆ
ಡಿಲ್ಲ. ಪರಿಣಾಮವಾಗಿ ನೌಕರಿ
ಆಘಾತಕ್ಕೊಳಗಾಗಿದ್ದ ನೌಕರರಿಗೆ
ಸರೆ ದೊರೆತಿದ್ದರೂ,
ರಕದಿರುವ ಕಾರಣ,
ಗೆ ನೌಕರಿಯಿಂದ
ಡೆಗೊಳಿಸಿದರೆ, ಭವಿಷ್ಯವೇನು?
ನೌಕರರನ್ನು ಹಾಗೂ ಇತರರನ್ನು
ಪ್ರಿಂ ಕೋರ್ಟ್ ತೀರ್ಪಿನ
ಪರಿಹಾರ ಕಂಡುಕೊಳ್ಳುವುದಾಗಿ
ತ್ತಿದೆ. ಆದರೆ ವಯೋಮಿತಿ
ರರನ್ನು ಪುನರ್ ನೇಮಕ
ಸಾಧ್ಯವಾಗದು. ಅವರಿಗೇನು
ದನ್ನು ಸರ್ಕಾರ ಸ್ಪಷ್ಟಪಡಿಸುತ್ತಿಲ್ಲ.
ರಣ ಇಡೀ ವಿಷಯ ಗೋಜಲು
ಕೃಪಾಂಕ ನೌಕರರನ್ನು ಸೇವೆಯಿಂದ
ತದೆ ಅನ್ಯಮಾರ್ಗವಿಲ್ಲ ಎಂಬ
ಸಲು ಸರ್ಕಾರ ನಿರತವಾಗಿದೆ.
ಕರರಲ್ಲಿ, ಸುಮಾರು 9000 ಶಿಕ್ಷಕ/
ಜನ ತಾಲ್ಲೂಕು ನ್ಯಾಯಾದೀಶರು,
ೀಸ್ ಇನ್ಸ್‌ಪೆಕ್ಟರ್ಸ್, ಪೇದೆಗಳು,
ಂತಾದವರಿದ್ದಾರೆ. ಸರ್ಕಾರದ
ನೀತಿಗಳಾದ ಉದಾರೀಕರಣ,
, ಖಾಸಗೀಕರಣದ ಭಾಗವಾಗಿ
ಲ್ಲೂ ಗುತ್ತಿಗೆ ವ್ಯವಸ್ಥೆಯನ್ನು
ಕೇಂದ್ರ- ರಾಜ್ಯ ಸರ್ಕಾರಗಳು
ುವ ಈ ಜಾಗತೀಕರಣದ
ಸುಪ್ರಿಂ
ರ್ಟ್ ರಾಜ್ಯ
ದು ರೀತಿ
ದ್ದು ಹಾಲು
ಹೇಳಿದ್ದು
essing in
ಂತಾಗಿದೆ.
ಸರ್ಕಾರಿ
ದುವರೆಗೆ
ಆಧಾರದ
ನ್ನು ಮುಂದೆ
9000
ಗೆ ಶಿಕ್ಷಕರನ್ನಾಗಿಸುವ ತನ್ನ
ಪ್ರೇರಿತ ಮಹಾದಾಸೆಯನ್ನು
ಾಗುತ್ತದೆ. ಹಾಗಾಗಿ ಈ ಹಿಂದಿನ
ರ್ಗಗಳಲ್ಲಿ ಸುಪ್ರಿಂ ಕೋರ್ಟ್
ಘಿಸಿಯಾದರೂ ಜನತೆಯ ಹಿತ
ಾತುಗಳನ್ನು, ಕನಿಷ್ಠ ಬಾಯಿ
ಾಡಲು ಸರ್ಕಾರ ಸಿದ್ದವಿಲ್ಲ!
ಪ್ರಿಂ ಕೋರ್ಟ್ ತೀರ್ಪು
ಧೇಯಕರಂತೆ ಅದನ್ನು ಜಾರಿ
ರೆ ಗುತ್ತಿಗೆ ನೇಮಕ
ಾಗಿ ಹೇಳುತ್ತಿದೆ.

ಿದ ಭಾರತದ ಬೆಳವಣಿಗೆಯ
ಪಡೆದ ಬಂಡವಾಳಶಾಹಿ-

ಭೂಮಾಲಿಕ ವರ್ಗಗಳ ನೇತೃತ್ವದ ಆಡಳಿತವು, ದೇಶದ ಉದ್ದಗಲಕ್ಕೂ ಶೇ.80 ರಷ್ಟು ಜನ ವಾಸಿಸುವ ಗ್ರಾಮಾಂತರ ಪ್ರದೇಶದ ಅಭಿವೃದ್ಧಿಯನ್ನು ರಾಷ್ಟ್ರದ ನಗರಗಳ ಅಭಿವೃದ್ಧಿಗಿಂತ ಅನೇಕ ಪಟ್ಟು ಹಿಂದುಳಿಸಿವೆ. ಪರಿಣಾಮವಾಗಿ ಶಾಲೆಗಳ ಕೊರತೆ, ಶಾಲೆಗಳಿದ್ದರೂ, ಶಿಕ್ಷಕರ ಕೊರತೆ, ಪಾಠ, ಆಟೋಟ, ಪೀಠೋಪಕರಣದ ಕೊರತೆ, ಕಲಿಕೆಯ ಪರಿಸರದ ಕೊರತೆ ಹೀಗೆ ನೂರಾರು ಕೊರತೆಗಳಿಂದಾಗಿ ನಗರ ಪ್ರದೇಶಗಳಲ್ಲಿ ಶಿಕ್ಷಣ ಪಡೆದವರೊಂದಿಗೆ ಪೈಪೋಟಿ ನಡಸಲಾಗದೆ ಸರ್ಕಾರಿ ನೌಕರಿ ಮತ್ತಿತರೆ ವಲಯಗಳಲ್ಲಿ ಸೂಕ್ತ ಪ್ರಾತಿನಿಧ್ಯ ಸಿಗದೆ ವಂಚಿತರಾಗಿದ್ದಾರೆ.

ಇಂತಹ ಅಸಮಾನ ಬೆಳವಣಿಗೆಯ ಹಿನ್ನೆಲೆಯಲ್ಲಿ ಗ್ರಾಮಾಂತರ ಜನತೆಗೆ ಸಾಮಾಜಿಕ ನ್ಯಾಯ ಒದಗಿಸುವ ಉದ್ದೇಶದೊಂದಿಗೆ. 1993 ರಲ್ಲಿ ಅಂದಿನ ಬಂಗಾರಪ್ಪ ನೇತೃತ್ವದ ರಾಜ್ಯ ಸರ್ಕಾರವು ಶಿಕ್ಷಣ- ಉದ್ಯೋಗದಲ್ಲಿ ಗ್ರಾಮಾಂತರ ಪ್ರದೇಶದ ಅಭ್ಯರ್ಥಿಗಳಿಗೆ ಶೇ.5 ರಷ್ಟು ಕೃಪಾಂಕ ಒದಗಿಸುವ ನಿಟ್ಟಿನಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳಿಗೆ ತಿದ್ದುಪಡಿಯನ್ನು ತಂದಿತು. ಪರಿಣಾಮವಾಗಿ 1994 ರಿಂದ ಗ್ರಾಮೀಣ ಪ್ರದೇಶಗಳಲ್ಲಿ ಕನಿಷ್ಠ 10 ವರ್ಷ ವಿದ್ಯಾಭ್ಯಾಸ ಮಾಡಿದವರಿಗೆ ಶಿಕ್ಷಣ-ಉದ್ಯೋಗಾವಕಾಶಗಳಲ್ಲಿ ಶೇ.5 ರಷ್ಟು ಕೃಪಾಂಕ ನೀಡಿತು. ಆನಂತರ 1996 ಹಾಗೂ 1997 ರಲ್ಲಿ ಅಂದಿನ ಜೆ.ಹೆಚ್.ಪಟೇಲ್ ನೇತೃತ್ವದ ಸರ್ಕಾರ ಈ ಕೃಪಾಂಕವನ್ನು ಶೇ.10ಕ್ಕೆ ಏರಿಸಿತು ಹಾಗೂ ಎಲ್ಲಾ ವಿಭಾಗದ ಸರ್ಕಾರಿ ನೌಕರರಿಗೂ ಇದನ್ನು ವಿಸ್ತರಿಸಿತು ಮಾತ್ರವಲ್ಲದೆ "ಗ್ರಾಮಾಂತರ ಅಭ್ಯರ್ಥಿ" ಯ ಅರ್ಥ ವ್ಯಾಪ್ತಿಯನ್ನು ವಿಸ್ತರಿಸಿತು.

ಕೆ.ಎನ್.ಉಮೇಶ್

ನ್ಯಾಯಾಲಯ ಎತ್ತಿರುವ ಪ್ರಶ್ನೆ?

1998 ರಲ್ಲಿ ಕೆ.ಪಿ.ಎಸ್.ಸಿ ಪರೀಕ್ಷೆ ತೆಗೆದುಕೊಂಡಿದ್ದ ಧಾರವಾಡದ ಬಸವರಾಜ್ ನಾಗೂರ್ ಎಂಬವರೊಬ್ಬರು, ಗ್ರಾಮಾಂತರ ಕೃಪಾಂಕ ಸಂವಿಧಾನದ "ಮೂಲಭೂತ ಹಕ್ಕುಗಳನ್ನು" ಉಲ್ಲಂಘಿಸುತ್ತದೆ ಎಂದು ರಾಜ್ಯ ಉಚ್ಚ ನ್ಯಾಯಾಲಯಕ್ಕೆ ರಿಟ್ ಅರ್ಜಿ ಸಲ್ಲಿಸಿದರು.


1998'ರ ನವೆಂಬರ್ 11 ರಂದು ಈ ರಿಟ್ ಅರ್ಜಿಯ ಮೇಲೆ ತೀರ್ಪು ನೀಡಿದ ರಾಜ್ಯ ಉಚ್ಚನ್ಯಾಯಾಲಯದ ನ್ಯಾಯಮೂರ್ತಿಗಳಾದ ಭರೂಕಾರವರು, "ಗ್ರಾಮೀಣ ಕೃಪಾಂಕ" ನೀಡುವ ನಿಯಮಾವಳಿಗಳು ಸಂವಿಧಾನದ ಪರಿಚೇದ 14,15 ಮತ್ತು 16 ಅನ್ನು ಉಲ್ಲಂಘಿಸುತ್ತವೆ. ಸಂವಿಧಾನ ಜನತೆಗೆ ಕೊಡಮಾಡಿರುವ ಮೂಲಭೂತ ಹಕ್ಕುಗಳಾದ ಸಮಾನತೆಯ ಹಕ್ಕು, ವೃತ್ತಿಯಲ್ಲಿ ಸಮಾನತೆಯ ಹಕ್ಕು, ಕಾನೂನಿನ ಮುಂದೆ ಸರ್ವ ನಾಗರೀಕರು ಸಮಾನರು ಎಂಬ ಅಂಶಗಳನ್ನು ಉಲ್ಲಂಘಿಸುತ್ತವೆ ಎಂದು ತೀರ್ಪನ್ನು ನೀಡಿದರು. ಸರ್ಕಾರಗಳು ಜನತೆಯಲ್ಲಿ ಧರ್ಮ, ಜನಾಂಗ, ಜಾತಿ, ಲಿಂಗ, ಜನ್ಮಸ್ಥಳ, ಅಥವಾ ವಾಸಸ್ಥಳ ಆಧಾರದಲ್ಲಿ ಬೇದ ಎಣಿಸಬಾರದು ಎಂಬ ಸಂವಿಧಾನದ ಮೂಲ ಅಂಶಗಳನ್ನು ಕೃಪಾಂಕ ಉಲ್ಲಂಘಿಸುತ್ತದೆ ಎಂದು ತೀರ್ಪು ನೀಡಿದರು.

ಆನಂತರ ರಾಜ್ಯ ಸರ್ಕಾರದ ಮೇಲ್ಮನವಿಯ ಮೇರೆಗೆ ರಾಜ್ಯ ಉಚ್ಚನ್ಯಾಯಾಲಯದ ವಿಭಾಗೀಯ ನ್ಯಾಯಪೀಠವು ಸಹಾ ಭರೂಕಾರವರ ತೀರ್ಪನ್ನು ಎತ್ತಿ ಹಿಡಿಯಿತು. ಆನಂತರ ರಾಷ್ಟ್ರದ ಸುಪ್ರಿಂ ಕೋರ್ಟ್ ಸಹಾ ರಾಜ್ಯ ಉಚ್ಚನ್ಯಾಯಾಲಯದ ತೀರ್ಪನ್ನು ಎತ್ತಿ ಹಿಡಿಯಿತು.

1975 ರಲ್ಲಿ ಅಂದಿನ ಉತ್ತರ ಪ್ರದೇಶ ಸರ್ಕಾರ ನೀಡಿದ್ದ ಇದೇ ರೀತಿಯ ಗ್ರಾಮಾಂತರ ಕೃಪಾಂಕ, 1982 ರಲ್ಲಿ ಮಹಾರಾಷ್ಟ್ರ, 1984 ರಲ್ಲಿ ಹರಿಯಾಣ ಸರ್ಕಾರ ಹಾಗೂ 1995 ರಲ್ಲಿ ಆಂಧ್ರ ಪ್ರದೇಶ ಸರ್ಕಾರಗಳು ನೀಡಿದ್ದ ಇಂತಹುದೇ ಸಾಮಾಜಿಕ ನ್ಯಾಯದ ಸೌಲಭ್ಯಗಳನ್ನು ಸುಪ್ರಿಂ ಕೋರ್ಟ್ ಈ ಹಿಂದೆಯೇ ಸಂವಿಧಾನಬಾಹಿರ ಎಂದು ತೀರ್ಪು ನೀಡಿತ್ತು. ಈ ತೀರ್ಪುಗಳನ್ನು ಆಧರಿಸಿ ರಾಷ್ಟ್ರದ ಗ್ರಾಮೀಣ ಕೃಪಾಂಕ ನೀಡುವ ನಿಯಮಾವಳಿಗಳನ್ನು

ಪುಟ 8 ಕ್ಕೆ

> ಶಾಸಕಾಂಗ, ಕಾರ್ಯಾಂಗ, ಹಾದಿ ತಪ್ಪಿದಾಗ ದಾರಿಗೆ ತರುವ ಕೆಲಸ ನ್ಯಾಯಾಂಗದ್ದು; ಹತ್ತಾರು ವರ್ಷಗಳ ಅನುಭವವೆಂದರೆ ಬಹುಜನ ಸಮುದಾಯದ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಲಾರದಂಥ ಕೌರ್ಯವನ್ನು ನ್ಯಾಯಾಂಗ ಪಡೆದುಕೊಂಡಿದೆ.
>
> **ಡಾ. ಚಂದ್ರಶೇಖರ್ ಪಾಟೀಲ**



ಹಳ್ಳಿ ಮತ್ತು ಪಟ್ಟಣಗಳ ನಡುವಿನ ವೈರುಧ್ಯ ಮತ್ತು ಗ್ರಾಮೀಣ ಕೃಪಾಂಕ

ಜಿ.ಎನ್.ನಾಗರಾಜ್

ಇದು ಮಾರ್ಕ್ಸ್‌ವಾದದ ಮೂಲಭೂತ ತಿಳುವಳಿಕೆ (ಪರಿಕಲ್ಪನೆ)ಗಳಲ್ಲೊಂದಾಗಿದೆ. ಮಾನವಸಮಾಜದ ಬೆಳವಣಿಗೆಯ ಇತಿಹಾಸದಲ್ಲಿ ಆಳುವ ವರ್ಗದ ಹಾಗೂ ಪ್ರಭುತ್ವಗಳ ಉಗಮ, ಅಂದರೆ ಮೊತ್ತ ಮೊದಲ ಶೋಷಣೆಯ ವ್ಯವಸ್ಥೆಯ ಜೊತೆಜೊತೆಗೆ ನಗರಗಳು ಬೆಳೆದುಬಂದವು. ಕುಶಲಕರ್ಮಿಗಳ ಹಾಗೂ ಬೌದ್ಧಿಕ ಶ್ರಮದ ಕೇಂದ್ರಗಳಾದವು. ಅಂದು ಆರಂಭವಾದ ಈ ವೈರುಧ್ಯ ಇಂದು ಬಂಡವಾಳಶಾಹಿ ವ್ಯವಸ್ಥೆಯಲ್ಲಿ, ಅದರಲ್ಲಿಯೂ ಅಮೇರಿಕ, ಬ್ರಿಟನ್ ಮೊದಲಾದ ಸಾಮ್ರಾಜ್ಯಶಾಹಿಗಳ ಹತೋಟಿಯಲ್ಲಿ ಇಡೀ ಪ್ರಪಂಚ ನಲುಗುತ್ತಿರುವ ವ್ಯವಸ್ಥೆಯಲ್ಲಿ ಇನ್ನಷ್ಟು, ಮತ್ತಷ್ಟು ತೀವ್ರಗೊಂಡಿದೆ. ನಗರಗಳಲ್ಲಿ ಉತ್ಪಾದಕ ಶಕ್ತಿಗಳ ಬೆಳವಣಿಗೆ ತೀವ್ರಗತಿಯಲ್ಲಿ ಬೆಳೆಯುತ್ತಾ, ಕೇಂದ್ರೀಕೃತವಾಗುತ್ತಾ ನಗರ ಹಾಗೂ ಗ್ರಾಮೀಣ ಜೀವನದ ನಡುವಣ ಅಂತರ ಹೆಚ್ಚಾಗುತ್ತಿದೆ. ಅದು ಶಿಕ್ಷಣದ ಮೇಲೆ ಅನೇಕ ರೀತಿಯ, ಊಹಿಸಿಕೊಳ್ಳಲಾಗದ ರೂಪದಲ್ಲಿ ಪರಿಣಾಮ ಬೀರುತ್ತದೆ. ಅದರಲ್ಲಿ ಶಾಲೆಯ ಒಳಗಿನ ಹಾಗೂ ಅದಕ್ಕಿಂತಲೂ ಮುಖ್ಯವಾದ ಹೊರಗಿನ ವಾತಾವರಣವನ್ನು ಶಿಕ್ಷಣಪರ ಹಾಗೂ ಶಿಕ್ಷಣಮುಖಿಯಾಗಿಸುವುದರಲ್ಲಿ ಸುಮಾರು 30 ರಿಂದ 300 ರವರೆಗಿನ ವಿದ್ಯಾರ್ಥಿಗಳನ್ನುಳ್ಳ ಹಳ್ಳಿಗಳ ಪ್ರಾಥಮಿಕ ಶಾಲೆಗಳು ಕೇವಲ ಒಂದು ತರಗತಿಯಲ್ಲಿಯೇ ವಿವಿಧ ಸೆಕ್ಷನ್‌ಗಳನ್ನು ನಡೆದು ಹಲವು ಬಾರಿ 200-300 ವಿದ್ಯಾರ್ಥಿಗಳನ್ನು ಪಡೆದಿರುವ ನಗರದ ಶಾಲೆಗಳು ವಿದ್ಯಾರ್ಥಿಯ ಬೌದ್ಧಿಕ ಸಾಂಸ್ಕೃತಿಕ ಹಾಗೂ ಕ್ರೀಡಾ ಬೆಳವಣಿಗೆಗೆ ನಿರ್ಮಿಸುವ ವಾತಾವರಣವನ್ನು, ಪುಸ್ತಕಭಂಡಾರ, ಶಿಕ್ಷಕರ ಗುಣಮಟ್ಟ ವಿವಿಧ ವಿಷಯುಗಳಿಗೆ ವಿಶೇಷ ತರಬೇತಿ ಪಡೆದ ಶಿಕ್ಷಕರು, ನಾಟಕ, ಸಂಗೀತ ... ಪಠ್ಯೇತರ ವಿಷಯುಗಳಿಗೆ ವಿಶೇಷ ಶಿಕ್ಷಕರು ಇತ್ಯಾದಿ ಸೌಲಭ್ಯಗಳನ್ನು ನೀಡಲಾಗದು. ಶಾಲೆಯ ಹೊರಗೆ ಮನೆಯಲ್ಲಿ ತಂದೆ ತಾಯಂದಿರಿಂದ ಮಕ್ಕಳ ಶಿಕ್ಷಣಕ್ಕೆ ವಿಶೇಷ ಗಮನ, ಮನೆಯಲ್ಲಿ ಕಲಿಸುವಿಕೆ, ಪೂರಕ ಪುಸ್ತಕಗಳು ಸೌಲಭ್ಯಗಳು; ಬೇರೆ ಬೇರೆ ಪರಿಣತಿ ಪಡೆದ ವಿವಿಧ ಉದ್ಯೋಗಗಳಲ್ಲಿರುವ ಸಂಬಂಧಿಗಳು ಮಿತ್ರರ ಕುಟುಂಬಗಳ ಒಡನಾಟ, ಅದರಿಂದ ಬೀರುವ ವೈವಿಧ್ಯಮಯ ಬೌದ್ಧಿಕ, ಸಾಂಸ್ಕೃತಿಕ ಪ್ರಭಾವ; ಅವುಗಳ ಜೊತೆಗೆ ವ್ಯಾಪಾರೀಕರಣಗೊಂಡ ಶಿಕ್ಷಣದ ಭಾಗವಾಗಿ ಟ್ಯೂಷನ್, ಟ್ಯುಟೋರಿಯಲ್‌ಗಳು ಇತ್ಯಾದಿಗಳ ಪಾತ್ರವೇನು ಕಡಿಮೆಯೇ? ಹಾಗೆಯೇ ನಗರಗಳಲ್ಲಿ ಲಭ್ಯವಿರುವ ಗ್ರಂಥಾಲಯಗಳು, ಉಚ್ಚಮಟ್ಟದ ಶೈಕ್ಷಣಿಕ ಸಂಸ್ಥೆಗಳು ಅವುಗಳ ಚಟುವಟಿಕೆಗಳು, ವಿವಿಧ ವಿಚಾರಗೋಷ್ಠಿಗಳು, ಸಾಂಸ್ಕೃತಿಕ ಚಟುವಟಿಕೆಗಳು, ಮಕ್ಕಳ ಜ್ಞಾನದ ಹಸಿವನ್ನು ಉಚ್ಚ ಮಟ್ಟಕ್ಕೇರಿಸುತ್ತವೆ, ವೈವಿಧ್ಯಮಯಗೊಳಿಸುತ್ತದೆ. ಇಂತಹ ಸೌಲಭ್ಯಗಳು ಹಳ್ಳಿಗಳಲ್ಲಿ ಎಂದಾದರೂ ಲಭ್ಯವಾಗುವುದು ಸಾಧ್ಯವೇ? ಅದಕ್ಕೆ ಮಾರ್ಕ್ಸ್ ಮತ್ತು ಲೆನಿನ್ ಮೊದಲಾದ ಮಾರ್ಕ್ಸ್‌ವಾದಿ ತತ್ವವರಿತರು ಸಮಾಜವಾದಿ ವ್ಯವಸ್ಥೆಯ ಸ್ಥಾಪನೆಯ ನಂತರವೂ ಹಲವು ದಶಕಗಳ ತೀವ್ರ ಪ್ರಯತ್ನದಿಂದ ಮಾತ್ರ ಈ ಅಂತರವನ್ನು ಕಡಿಮೆ ಮಾಡುವುದು ಸಾಧ್ಯವಾಗುತ್ತದೆ. ಅದರ ಪೂರ್ಣ ನಿವಾರಣೆ ಸಮಾಜವಾದದ ಮೇಲಿನ ಹಂತವಾದ ಸಮತಾವಾದಿ ಸಮಾಜದ ಘಟ್ಟದಲ್ಲಿ ಮಾತ್ರ ಸಾಧ್ಯ ಎನ್ನುತ್ತಾರೆ. ಅಲ್ಲಿಯವರೆಗೂ ನಗರ ಮತ್ತು ಹಳ್ಳಿಗಳ ವೈರುಧ್ಯದ ಪರಿಣಾಮವನ್ನು ಪರಿಹರಿಸಲು ಹಲವಾರು ಕ್ರಮಗಳು ಅಗತ್ಯ. ಅದರಲ್ಲಿ ಗ್ರಾಮಾಂತರ ಕೃಪಾಂಕವೂ ಒಂದು. ಇದು ಕೃಪೆಯಿಂದ ನೀಡುವ ಅಂಕವೂ ಅಲ್ಲ. ಪರಿಸ್ಥಿತಿಯಲ್ಲಿ ಅಡಕವಾಗಿರುವ ಅಸಮಾನತೆಗೆ ಅಲ್ಪ ಪ್ರಮಾಣದ ಪರಿಹಾರ.

ಈ ಅಲ್ಪ ಪ್ರಮಾಣದ ಪರಿಹಾರವನ್ನು ಪಡೆದ ತಕ್ಷಣ ಗ್ರಾಮಾಂತರದ ಉದ್ಯೋಗಾರ್ಥಿಗಳೆಲ್ಲರಿಗೆ ಉದ್ಯೋಗ ಸಿಗುತ್ತದೆಂದೇನೂ ಅಲ್ಲ. ಅದಕ್ಕಾಗಿ ಗ್ರಾಮೀಣ ಹಾಗೂ ನಗರಗಳ ನಿರುದ್ಯೋಗಿಗಳು ಒಟ್ಟಾಗಿ ಸೇರಿ ಚಳುವಳಿ ನಡೆಸಬೇಕಾಗುತ್ತದೆ. ಇದು ಒಂದೆಡೆಯಾದರೆ ಗ್ರಾಮ ಮತ್ತು ನಗರಗಳ ನಡುವಣ ಅಸಮಾನತೆಯನ್ನು ತಡೆಯಬೇಕೆಂದರೆ ಅಸಮಾನತೆಯ ಮೂಲವಾದ ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೊಗೆಯಬೇಕಾಗುತ್ತದೆ. ಸಮಾಜವಾದಿ ಸಮಾಜದ ನಿರ್ಮಾಣಕ್ಕಾಗಿ ದುಡಿಯಬೇಕಾಗುತ್ತದೆ.

......ಶಾಸನ, ಸಂವಿಧಾನ ತಿದ್ದುಪಡಿ ಒಂದೇ ಮಾರ್ಗ

ಪುಟ 7 ರಿಂದ

ಸಂವಿಧಾನ ಬಾಹಿರ ಎಂದು ನ್ಯಾಯಾಲಯಗಳು ತೀರ್ಪು ನೀಡಿವೆ.

ಇದರ ಜೊತೆಯಲ್ಲಿಯೇ ಗ್ರಾಮೀಣ ಜನತೆ ಹಿಂದುಳಿದಿದ್ದಾರೆ ಎಂಬುದಕ್ಕೆ ಹಾಗೂ ಗ್ರಾಮೀಣ ಪ್ರದೇಶಗಳ ಹಿಂದುಳಿದಿರುವಿಕೆಗೆ ಯಾವುದೇ ಸಾಕ್ಷ್ಯ ಆಧಾರಗಳಿಲ್ಲ ಹಾಗೂ ಸರ್ಕಾರಗಳು ಒದಗಿಸಿಲ್ಲ ಎಂದು ಗಂಭೀರವಾಗಿ ತೀರ್ಪಿನಲ್ಲಿ ನ್ಯಾಯಾಲಯಗಳು ತಿಳಿಸಿವೆ.

ಸುಪ್ರಿಂ ಕೋರ್ಟ್ ತೀರ್ಪಿನ ನಂತರ ಆ ತೀರ್ಪು ಕೇವಲ ಅರ್ಜಿದಾರರಿಗೆ ಮಾತ್ರ ಜಾರಿಯಾಗುತ್ತದೆ ಎಂದು ಅದನ್ನು ಪರಿಗಣಿಸಿ 13,270 ನೌಕರರನ್ನು ನೌಕರಿಯಿಂದ ತೆರವುಗೊಳಿಸದಿರುವ ಬಗ್ಗೆ ಸಲ್ಲಿಸಲಾದ ನ್ಯಾಯಾಂಗ ನಿಂದನೆ ಅರ್ಜಿಯನ್ನು ಸುಪ್ರಿಂ ಕೋರ್ಟ್ ವಜಾ ಮಾಡಿತು. ಆನಂತರ ಸುಪ್ರಿಂ ಕೋರ್ಟ್ ತೀರ್ಪನ್ನು ಮರುಪರಿಶೀಲನೆ ಮಾಡಲು ಕೋರಿ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಿದ ಸುಪ್ರಿಂ ಕೋರ್ಟ್ ಪೀಠವು 2003 ಮೇ.6 ರಂದು ತೀರ್ಪು ನೀಡುತ್ತಾ, ಕೋರ್ಟಿನ ತೀರ್ಪು 13,270 ನೌಕರರಿಗೂ ಅನ್ವಯಿಸುತ್ತದೆ. ಅವರೆಲ್ಲರನ್ನು ಸೇವೆಯಿಂದ ತೆರವು ಗೊಳಿಸಬೇಕು ಎಂದಿದೆ.

ಪರಿಹಾರ ಏನು?

ಕೃಪಾಂಕ ನೀಡಲು ರಾಜ್ಯ ಸರ್ಕಾರವು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳಿಗೆ ತಿದ್ದುಪಡಿ ತಂದದ್ದು, 1978' ರ ಕರ್ನಾಟಕ ರಾಜ್ಯ ನಾಗರಿಕ ಸೇವಾ ಅಧಿನಿಯಮ ದಡಿಯಲ್ಲಿನ ರಾಜ್ಯ ಸರ್ಕಾರದ ಅಧಿಕಾರದಡಿ. ಈ ಅಧಿನಿಯಮವನ್ನು ಸರ್ಕಾರ ಅಂಗೀಕರಿಸಿರುವುದು ಸಂವಿಧಾನದ 7ನೇ ಶೆಡ್ಯೂಲ್‌ನ ಡಿ. ಪರಿಣಾಮವಾಗಿ ಈ ಅಧಿನಿಯಮ ಹಾಗೂ ಅದರಡಿ ರೂಪಿಸಲಾಗುವ ನಿಯಮಾವಳಿಗಳನ್ನು ಸಂವಿಧಾನದ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸುತ್ತವೆಯೇ ಎಂದು ಪ್ರಶ್ನಿಸಲ್ಪಟ್ಟಲ್ಲಿ ನ್ಯಾಯಾಲಯಗಳು ಪರಿಶೀಲಿಸಬಹುದು ಹಾಗೂ ಸಂವಿಧಾನಬಾಹಿರ ಎಂದು ಘೋಷಿಸಬಹುದು.

ಸಂವಿಧಾನದಲ್ಲಿ ಕೊಡಮಾಡಿರುವ ಪರಿಚ್ಛೇದ 31(ಬಿ) ಅಡಿ 9ನೇ ಶೆಡ್ಯೂಲ್‌ಗೆ ಸೇರ್ಪಡೆಯಾಗುವಂತೆ ಶಾಸನ ರೂಪಿಸಿ ಕೃಪಾಂಕ ವ್ಯವಸ್ಥೆಯನ್ನು ಹಾಗೂ ಈ ನೌಕರರನ್ನು ರಕ್ಷಿಸಬಹುದಾಗಿದೆ. ಶಾಸನ ರೂಪಿಸಲು ಸಮಯಾವಕಾಶ ಬೇಕಾದಲ್ಲಿ ಸುಗ್ರೀವಾಜ್ಞೆ ಹೊರಡಿಸಿ, ಆನಂತರ ಅದನ್ನು ಶಾಸನ ಮಾಡಬಹುದು. ಇದು ಸಹಾ ಕಾರ್ಯಸಾಧುವಾಗದಿದ್ದಲ್ಲಿ ಗ್ರಾಮೀಣ ಮೀಸಲಾತಿ ಅಥವಾ ಕೃಪಾಂಕದ ಪ್ರಶ್ನೆ ಕೇವಲ ಕರ್ನಾಟಕದ ಪ್ರಶ್ನೆಯಾಗಿರದೆ, ಇದು ಇಡೀ ರಾಷ್ಟ್ರದ ಪ್ರಶ್ನೆಯಾಗಿದೆ. ಕಳೆದ 27 ವರ್ಷಗಳಿಂದ ರಾಷ್ಟ್ರದ ವಿವಿಧ ರಾಜ್ಯಗಳ ಮುಂದಿನ ಪ್ರಶ್ನೆಯಾಗಿದೆ. ಹಾಗಾಗಿ ಇದಕ್ಕೆ ಪೂರಕವಾಗಿ ಅಗತ್ಯವಿರುವ ಸಂವಿಧಾನ ತಿದ್ದುಪಡಿಯೊಂದೇ ಅಂತಿಮ ಪರಿಹಾರವಾಗಿದೆ.

ಈ ನಿಟ್ಟಿನಲ್ಲಿ ಸಂವಿಧಾನದ ಪರಿಚ್ಛೇದ 31 (ಬಿ) ಅಡಿ ಶಾಸನ ರೂಪಿಸದಿದ್ದಲ್ಲಿ ಅಥವಾ ಸಂವಿಧಾನ ತಿದ್ದುಪಡಿ ತರದಿದ್ದಲ್ಲಿ ನ್ಯಾಯಮೂರ್ತಿ ಜಿ.ರಾಮಕೃಷ್ಣ ಆಯೋಗದ ಶಿಫಾರಸ್ಸನ್ನು ಆಧರಿಸಿ, ಗ್ರಾಮಾಂತರ ಅಭ್ಯರ್ಥಿಗಳಿಗೆ ಪ್ರಸ್ತುತ ರಾಜ್ಯ ಸರ್ಕಾರ ನೀಡಿರುವ ಶೇ.25 ರಷ್ಟು ಒಳ ಮೀಸಲಾತಿ ಅಥವಾ ಬರಗೂರು ರಾಮಚಂದ್ರಪ್ಪ ವರದಿ ಆಧಾರಿತವಾಗಿ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ನೀಡಲಾಗಿರುವ ಶೇ.5 ರಷ್ಟು ಒಳ ಮೀಸಲಾತಿಗಳು ಸಹಾ ಪ್ರಶ್ನಿಸಲ್ಪಟ್ಟಲ್ಲಿ ಕಾನೂನು ಪರೀಕ್ಷೆಯಲ್ಲಿ ನಿಲ್ಲಲಾರವು ಮಾತ್ರವಲ್ಲದೆ ಸಂವಿಧಾನಬಾಹಿರ ಎಂದು ಘೋಷಿಸಲ್ಪಡುವವು.

ಆದ ಕಾರಣವೇ 98 ರಲ್ಲಿ ನ್ಯಾಯಮೂರ್ತಿ ಭರೂಕಾರವರು 'ಗ್ರಾಮೀಣ ಕೃಪಾಂಕ' ಸಂವಿಧಾನ ಬಾಹಿರ ಎಂದು ತೀರ್ಪು ನೀಡಿದಾಗಿನಿಂದಲೇ ಎಸ್‌ಎಫ್‌ಐ- ಡಿವೈಎಫ್‌ಐ ಗ್ರಾಮೀಣ ಕೃಪಾಂಕ ರಕ್ಷಣೆಗೆ "ಸಂವಿಧಾನ ತಿದ್ದುಪಡಿ" ತರಬೇಕೆಂದು ಒತ್ತಾಯಿ ಸುತ್ತಾ ಬಂದಿವೆ, ಹೋರಾಟದಲ್ಲಿ ನಿರತವಾಗಿ ಸೆರೆವಾಸ, ಪೋಲೀಸ್ ಮೊಕದ್ದಮೆಗಳನ್ನು ಎದುರಿಸುತ್ತಿವೆ.

> ಸಮಸ್ಯೆ ಬಂದಿದ್ದು ನಮ್ಮ ತಪ್ಪಿನಿಂದಾಗಿ ಅಲ್ಲ. ಶೇಖಡವಾರು ಎಷ್ಟಿರಬೇಕೆಂದು ನಿಖರತೆ ಕೆ.ಸಿ.ಎಸ್. ಆ್ಯಕ್ಟ್‌ನಲ್ಲಿರಲಿಲ್ಲ. ಗ್ರಾಮೀಣ ಎಂದರೆ ಏನು ಎಂದು ಸರಿಯಾದ ಸಮರ್ಥನೆ ಇರಲಿಲ್ಲ. ಕ್ಲಾಸ್ ಸಿ ಮತ್ತು ಬಿ.ಯನ್ನು ಸರಿಯಾಗಿ ವಿಸ್ತರಿಸಲಿಲ್ಲ. ಎಷ್ಟು ಅಂಕ, ಆಧಾರವೇನು? ವೈಜ್ಞಾನಿಕ ಮಾನದಂಡ ಅಳವಡಿಸಲಿಲ್ಲ. ನಿಖರತೆಯಿಲ್ಲದೆ ಪದೇ ಪದೇ ಸಂಖ್ಯೆ ವಿಸ್ತರಣೆ ಮಾಡಿದ್ದು ತಪ್ಪಾಯಿತು. 2000 ಅಂಕಗಳಿಗೆ ಪರೀಕ್ಷೆ ನಡೆದರೆ, ಗ್ರಾಮೀಣ ಅಭ್ಯರ್ಥಿ 200 ಅಂಕಗಳನ್ನು ಜೇಬಿನಲ್ಲಿಟ್ಟುಕೊಂಡೇ ಪರೀಕ್ಷೆಗೆ ಹಾಜರಾಗುತ್ತಾನೆ. ಇದು ಪ್ರಶ್ನಾರ್ಹವಾಗಿದೆ.
>
> **- ಡಿ.ಬಿ.ಚಂದ್ರೇಗೌಡ**
> **ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು**



ಕಾನೂನು ಸಚಿವರ ಡಿ.ಬಿ.ಚಂದ್ರೇಗೌಡ

ಸಂವಿಧಾನದಡಿಯ ಸಮಾನತೆಯ ಪರಿಕಲ್ಪನೆ:

ಅಸಮಾನತೆಯನ್ನೇ ನೆಲೆಯಾಗಿರಿಸಿ ರೂಪಗೊಂಡ ಭಾರತದಂತಹ ಸಮಾಜದಲ್ಲಿ 1950' ರ ಸಂವಿಧಾನ ಒಳಗೊಂಡ ಸಮಾನತೆಯ ಪರಿಕಲ್ಪನೆ ಅತ್ಯಂತ ಮಹತ್ತರವಾದದ್ದು. ಈ ಹಿನ್ನೆಲೆಯಲ್ಲಿ ಸಂವಿಧಾನದ ಪರಿಚ್ಛೇದ 14, 15 ಹಾಗೂ 16 ರನ್ನು ನೋಡಬೇಕಿದೆ.

ಪರಿಚ್ಛೇದ 14 ಒದಗಿಸುವ ಮೂಲಭೂತ ಹಕ್ಕೇನೆಂದರೆ ಪ್ರಭುತ್ವವು ಯಾವುದೇ ವ್ಯಕ್ತಿಗೆ ಭಾರತದ ಪ್ರದೇಶದೊಳಗೆ ಕಾನೂನಿನ ಮುಂದಿನ ಸಮಾನತೆಯನ್ನು ಅಥವಾ ಕಾನೂನುಗಳ ಸಮಾನ ರಕ್ಷಣೆಯನ್ನು ನಿರಾಕರಿಸುವಂತಿಲ್ಲ ಎಂಬುದಾಗಿದೆ.

ಪರಿಚ್ಛೇದ 15 ಹೇಳುವುದೇನೆಂದರೆ, ಮಹಿಳೆಯರು ಹಾಗೂ ಮಕ್ಕಳಿಗೆ ಅಥವಾ ನಾಗರೀಕರಲ್ಲಿನ ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ವಿಭಾಗಗಳ ಅಥವಾ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ಧಿಗಾಗಿ ಕೈಗೊಳ್ಳುವ ವಿಶೇಷ ರಿಯಾಯಿತಿಗಳನ್ನು ಹೊರತುಪಡಿಸಿ ಕೇವಲ ಧರ್ಮ, ಜನಾಂಗ, ಜಾತಿ, ಲಿಂಗ, ಜನ್ಮಸ್ಥಳ ಅಥವಾ ಇದಾವುದೇ ಆಧಾರದಲ್ಲಿ ನಾಗರೀಕರಲ್ಲಿ ತಾರತಮ್ಯವನ್ನು ರಾಷ್ಟ್ರ (ರಾಜ್ಯ) ಮಾಡಬಾರದೆಂಬುದು.

ಪರಿಚ್ಛೇದ 16 ಒದಗಿಸುವ ಮೂಲಭೂತ ಹಕ್ಕೇನೆಂದರೆ ಹಿಂದುಳಿದ ವರ್ಗದವರಿಗಿರುವ ಮೀಸಲಾತಿಯನ್ನೊರತುಪಡಿಸಿ ಉದ್ಯೋಗ ಅಥವಾ ಪ್ರಭುತ್ವದಡಿಯ ಯಾವುದೇ ಕಛೇರಿಗೆ ನೇಮಕಾತಿ ಮಾಡುವ ವಿಷಯಕ್ಕೆ ಸಂಬಂಧಪಟ್ಟಂತೆ ಎಲ್ಲಾ ನಾಗರೀಕರಿಗೂ ಸಮಾನ ಅವಕಾಶಗಳಿರಬೇಕು, ಮತ್ತು ಧರ್ಮ, ಜನಾಂಗ, ಜಾತಿ, ಲಿಂಗ, ಹುಟ್ಟು, ಜನ್ಮಸ್ಥಳ, ವಾಸಸ್ಥಳ ಅಥವಾ ಇದಾವುದೇ ಆಧಾರದಲ್ಲಿ ತಾರತಮ್ಯವಿರಬಾರದೆಂಬುದು.

ಸಂವಿಧಾನದ ಈ ಮೇಲಿನ ಮೂರು ಪರಿಚ್ಛೇದಗಳಲ್ಲಿ ಭಾರತದ ನಾಗರೀಕರಿಗೆ ಕೊಡಮಾಡಿರುವ ಹಕ್ಕುಗಳು ಸಮಾನತೆಯ ಮೂಲಭೂತ ಹಕ್ಕುಗಳು. ಯಾವುದೇ ನಾಗರೀಕರ ಈ ಮೂಲಭೂತ ಹಕ್ಕುಗಳನ್ನು ಪರಿಚ್ಛೇದಗಳಲ್ಲಿ ವಿವರಿಸಲ್ಪಟ್ಟಿರುವಂತೆ ಹೊರತುಪಡಿಸಿ ಸರ್ಕಾರವಾಗಲಿ ಅಥವಾ ಇತರೆ ಯಾವುದೇ ನಾಗರಿಕರಾಗಲಿ ಇನ್ನೊಬ್ಬರಿಂದ ಕಸಿಯುವಂತಿಲ್ಲ. ಹೀಗಾಗಿ 14 ರಿಂದ 16 ರವರೆಗಿನ ಪರಿಚ್ಛೇದಗಳು ನಿಸ್ಸಂದೇಹವಾಗಿ ಸ್ಪಷ್ಟಪಡಿಸುವ ಅಂಶವೆಂದರೆ ಜನ್ಮಸ್ಥಳ ಅಥವಾ ವಾಸಸ್ಥಳದ ಆಧಾರದಲ್ಲಿ ಯಾವುದೇ ನಾಗರೀಕರಲ್ಲಿ ಭೇದ ಮಾಡುವಂತಿಲ್ಲ ಎಂಬುದಾಗಿದೆ.

ಗ್ರಾಮಾಂತರ ಕೃಪಾಂಕವು ಗ್ರಾಮಾಂತರ ಅಭ್ಯರ್ಥಿಗಳಿಗೆ ಶೇ.10 ರಷ್ಟು ಕೃಪಾಂಕವನ್ನು ನೀಡುವುದರಿಂದ, ಅದು ನಗರದ ಹಾಗೂ ಗ್ರಾಮಾಂತರದ ಅಭ್ಯರ್ಥಿಗಳ ಮಧ್ಯೆ ತಾರತಮ್ಯವನ್ನುಂಟುಮಾಡುತ್ತದೆ, ಆದ ಕಾರಣ ಅದು ಪರಿಚ್ಛೇದ 14 ರಿಂದ 16'ರ ಉಲ್ಲಂಘನೆಯಾಗಿದೆ ಎಂದು ನ್ಯಾಯಾಲಯಗಳು ತೀರ್ಪಿತ್ತಿವೆ.

ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳು:

ಸಂವಿಧಾನದ ಸಮಾನತೆಯ ಪರಿಕಲ್ಪನೆಯೊಳಗೆ ಇರುವ ರಿಯಾಯಿತಿಯಾದ 'ಹಿಂದುಳಿದ ವರ್ಗದ ವ್ಯಾಪ್ತಿಗೆ ಒಟ್ಟಾರೆಯಾಗಿ ಇಡೀ ಗ್ರಾಮಾಂತರ ಜನತೆ ಬರುತ್ತಾರೆಯೆ ಎಂಬ ಪ್ರಶ್ನೆಗೆ ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯವು ಇಡೀ ಗ್ರಾಮಾಂತರ ಜನತೆಯನ್ನೆಲ್ಲಾ ಸಾಮಾಜಿಕವಾಗಿ ಶೈಕ್ಷಣಿಕವಾಗಿ ಹಿಂದುಳಿದಿವೆ ಎಂದು ಪರಿಗಣಿಸಲು ಸಾಧ್ಯವಿಲ್ಲವೆಂದು, ಹಾಗಾಗಿ 'ಸಾಮಾಜಿಕ ನ್ಯಾಯದ' ಅಂಶ ಇಲ್ಲಿ ಬರುವುದಿಲ್ಲ ಎಂದು ಸ್ಪಷ್ಟಪಡಿಸಿವೆ. ಅಂತೇ ಗ್ರಾಮೀಣ ಪ್ರದೇಶ ನಗರ ಪ್ರದೇಶಗಳಿಗಿಂತ ಶೈಕ್ಷಣಿಕವಾಗಿ ಮೂಲ ಸೌಕರ್ಯಗಳ ಮಾಪನದಲ್ಲಿ ಹಿಂದುಳಿದಿವೆ ಎಂದು ತೋರಲು ಯಾವುದೇ ಅಂಕಿ-ಅಂಶಗಳಾಗಲಿ, ಸಾಕ್ಷ್ಯಾಧಾರಗಳಾಗಲಿ ಇಲ್ಲ ಎಂಬುದನ್ನು ಸಹ ಸರ್ವೋಚ್ಚ ನ್ಯಾಯಾಲಯವು ತಿಳಿಸಿದೆ.

ಸರ್ವೋಚ್ಚ ನ್ಯಾಯಾಲಯವು ಈ ಕುರಿತು ತನ್ನ ತೀರ್ಪನ್ನು ಮೊದಲ ಬಾರಿಗೆ 1975 ರಲ್ಲಿ ಉತ್ತರ ಪ್ರದೇಶ ರಾಜ್ಯ ಮತ್ತು ಪ್ರದೀಪ್ ಟಂಡನ್ ಮೊಕದ್ದಮೆಯಲ್ಲಿ ನೀಡುತ್ತಾ ಇಡೀ ಗ್ರಾಮಾಂತರ ಪ್ರದೇಶದ ಜನರನ್ನು ಹಿಂದುಳಿದ ವರ್ಗವೆಂದು ಪರಿಗಣಿಸಲು ಆಗದು, ಜನಸಂಖ್ಯೆಯುಷ್ಟೆ ವರ್ಗವಾಗಲಾರದು, ಗ್ರಾಮಾಂತರ ಅಂಶವೂ ಸಹಾ ಅದನ್ನು ವರ್ಗವನ್ನಾಗಿ ಮಾರ್ಪಡಿಸದು ಎಂದಿದೆ. ಉತ್ತರ ಪ್ರದೇಶದ ಶೇ.90 ರಷ್ಟು ಜನ ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಅವರೆಲ್ಲರೂ ತಮ್ಮೊಳಗೆಯೇ ಒಂದೇ ರೀತಿಯ ವರ್ಗವಲ್ಲ, ಅದರಲ್ಲಿ ಕೆಲವರು ಶೈಕ್ಷಣಿಕವಾಗಿ ಹಾಗೂ ಕೆಲವರು ಸಾಮಾಜಿಕವಾಗಿ ಹಿಂದುಳಿದಿರಬಹುದು. ಗ್ರಾಮಾಂತರ ಪ್ರದೇಶವನ್ನೆಲ್ಲಾ ಶೈಕ್ಷಣಿಕವಾಗಿ- ಸಾಮಾಜಿಕವಾಗಿ ಹಿಂದುಳಿದಿದೆ ಎಂದು ಹೇಳುವುದು, ಅದರ ಆಧಾರದಲ್ಲಿ ಗ್ರಾಮಾಂತರ ಪ್ರದೇಶದ, ಗುಡ್ಡಗಾಡು ಪ್ರದೇಶದ ಹಾಗೂ ಉತ್ತರಖಂಡ ಪ್ರದೇಶದ ಜನರ ಪರವಾಗಿ ಮೀಸಲಾತಿ ನೀಡುವುದು, ರಾಜ್ಯದ ಬಹುಸಂಖ್ಯಾತ



ವಿಭಾಗಕ್ಕೆ ಮೀಸಲಾತಿ ನೀಡಿದಂತಾ... ಹೇಳಿದೆ.

ಅಂತೆಯೇ 1982 ರಲ್ಲಿ ಮ... ಮತ್ತು ರಾಜ್‌ಕುಮಾರ್ ಮೊ... ಗ್ರಾಮಾಂತರ ಕೃಪಾಂಕ ನೀಡು... ನಿಯಮಗಳು ನ್ಯಾಯಾಂಗ ... ಸರ್ವೋಚ್ಚ ನ್ಯಾಯಾಲಯದ ... ನ್ಯಾಯಮೂರ್ತಿಗಳಾದ ಫಜಲ್... ಗ್ರಾಮಾಂತರ ಕೃಪಾಂಕ ನೀಡುವಿಕೆ ... ಅನರ್ಹತೆಯನ್ನಾಗಿ ಹಾಗೂ ... ಅರ್ಹತೆಯನ್ನಾಗಿ ಮಾರ್ಪಡಿಸ... ಪರಿಚ್ಛೇದ 14 ನ್ನು ಉಲ್ಲ... ಗ್ರಾಮಾಂತರ- ನಗರ ವ... ಅನುಮತಿಸಲಾಗದ ವರ್ಗೀಕರಣ... ನೀಡಿದ್ದಾರೆ.

1984 ರಲ್ಲಿ ಸುನೀಲ್ ಜೈಟ್ಲೆ ... ರಾಜ್ಯ ಮೊಕದ್ದಮೆಯಲ್ಲಿ ವೃತ್ತಿಪರ... ಪ್ರವೇಶಾವಕಾಶ ಬಯಸುವ... ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದ್ದ... ತೀರ್ಪನ್ನು ನೀಡುತ್ತಾ ಸರ್ವೋಚ್ಚ ... "ಸಮಾನ ಸರ್ಕಾರಿ ನಿಗದಿ... ಅನುದಾನ, ಅರ್ಹತೆ ಹೊಂದಿದ ... ಹಾಗೂ ಗ್ರಾಮಾಂತರ ಪ್ರದೇ... ನಿರ್ದೇಶಿಸುವಾಗ" ಈ ವರ್ಗೀ... ಎಂದಿದೆ. ಹರಿಯಾಣದ ಗ್ರಾಮ... ಪರಿಸ್ಥಿತಿ ಅನೇಕ ನಗರ ಪ್ರದ... ಸ್ಲಂಗಳಲ್ಲಿನ ಪರಿಸ್ಥಿತಿಗಿಂತ ... ಗ್ರಾಮಾಂತರ ಪ್ರದೇಶದ ... ಕಟ್ಟಡವಿಲ್ಲದೆ, ಸೌಲಭ್ಯರಹಿತವಾ... 1 ರಿಂದ 8ನೇ ತರಗತಿಯವರೆ... ಪ್ರದೇಶದಲ್ಲಿ ಓದಿದ ವಿದ್ಯಾರ್ಥಿ... ನೀಡುವುದು ಸಂವಿಧಾನ ಬಾಹಿರ...

1995 ರಲ್ಲಿ ವಿ.ಎನ್. ಸುನ... ಆಂಧ್ರಪ್ರದೇಶ ಸರ್ಕಾರ ಮ... ನೇಮಕಾತಿಗಳಲ್ಲಿ ತೆಲುಗ... ವಿದ್ಯಾರ್ಥಿಗಳಿಗೆ ಅವರು ... ಅಂಕಗಳಿಗೆ ಸರಾಸರಿ ಶೇ.5 ರಷ... ಕ್ರಮವನ್ನು ಸರ್ವೋಚ್ಚ ನ್ಯಾ... ಅಸಿಂಧುಗೊಳಿಸಿತು. ತೀರ್ಪ... ನ್ಯಾಯಾಲಯವು "ಸರ್ಕಾರದ ... ಮುಕ್ತ ಮಾರ್ಕಟ್ಟಿನಲ್ಲಿ ಲಭ್ಯವಾ... ಅಭ್ಯರ್ಥಿಗಳನ್ನು ದೂರವಿರಿಸಿ ... ದಕ್ಷತೆಯನ್ನು ದುರ್ಬಲಗೊಳಿ... ವ್ಯಾಖ್ಯಾನಿಸಿದೆ. ಈ ಮೇಲಿ... ಆಧಾರದಲ್ಲಿಯೇ ಸರ್ವೋಚ್ಚ ... 1999 ರಲ್ಲಿ ಕೃಪಾಂಕ' ರದ್ದು... ಉಚ್ಚನ್ಯಾಯಾಲಯದ ವಿಭಾಗೀ... ತೀರ್ಪನ್ನು ಎತ್ತಿಹಿಡಿದು, ... ಮೇಲ್ಮನವಿಯನ್ನು ತಿರಸ್ಕರಿಸಿದೆ...

ದೇಶದ ಕೆಲವು ನದಿಗಳಲ್ಲಿ ಬಹಳ ನೀರಿದ್ದು ಕೆಲವುಗಳಲ್ಲಿ ಕೊರತೆ ಇದ್ದರೆ ನದಿಗಳ ಜೋಡಣೆಯ ಮೂಲಕ ಎಲ್ಲ ಪ್ರದೇಶಗಳಲ್ಲೂ ನೀರಿನ ಅವಶ್ಯಕತೆಗಳನ್ನು ಪೂರೈಸಬಹುದಾದರೆ ಅದು ಒಳ್ಳೆಯ ಯೋಜನೆಯೇ ಸರಿ. ಆದರೆ ಇದರ ಸಾದಕ ಬಾದಕಗಳನ್ನು ವಿಶ್ಲೇಷಿಸಿದಾಗಲೇ ನಿಜ ಪರಿಸ್ಥಿತಿ ಅರ್ಥವಾಗುವುದು. ಸಮಸ್ಯೆ ಪರಿಹಾರವಾಗುವುದಾದರೆ ಸಂತೋಷ. ಹಾಗಾಗದೆ ಕರ್ನಾಟಕ ಮತ್ತು ತಮಿಳುನಾಡುಗಳ ನಡುವಿನ ಮನಃಸ್ತಾಪಕ್ಕೆ ಇತರ ಎಲ್ಲ ರಾಜ್ಯಗಳನ್ನೂ ಸೇರಿಸುವಂತಾಗುವುದಾದರೆ?

ನದಿಗಳ ಜೋಡಣೆಯ ರಾಜಕೀಯ

ಉತ್ತರದ ಗಂಗಾನದಿಯನ್ನು ಕ್ಷಿಣದ ಕಾವೇರಿಯೊಂದಿಗೆ ೋಡಿಸುವ ಪ್ರಸ್ತಾವನೆ ಡಾ.ಕೆ.ಎಲ್. ವ್ ಅವರ ಬರಹಗಳಲ್ಲಿ ಹಿಂದೆಯೇ ಂದಿದೆ.

ತಮಿಳುನಾಡು ಮತ್ತು ಕರ್ನಾಟಕಗಳು ಕಾವೇರಿ ೀರು ಹಂಚಿಕೆಯ ಜಗಳದ ಹಿನ್ನೆಲೆಯಲ್ಲಿ ಸುಪ್ರೀಂ ೋರ್ಟು ಈ ನದಿ ಜೋಡಣೆಯ ಸಾಧ್ಯತೆಯನ್ನು ರಿಶೀಲಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ೀಡಿದ ಹಿನ್ನೆಲೆಯಲ್ಲಿ ಇದಕ್ಕೆ ಮತ್ತೆ ಚಾಲನೆ ಂದಿದೆ. ತಮಿಳುನಾಡಿನಲ್ಲಿ ಇದಕ್ಕೆ ಹೆಚ್ಚಿನ ಂಬಲವೂ ದೊರೆತಿದೆ. ಸಿನಿಮಾ ನಟ ಜನಿಕಾಂತ್ ಇಂತಹ ಯೋಜನೆಗೆ ಂದು ಕೋಟಿ ರೂಪಾಯಿಗಳ ದೇಣಿಗೆ ೀಡಿದ್ದಾರೆ.

ಕೇಂದ್ರದ ಎನ್.ಡಿ.ಎ. ಸರ್ಕಾರವೂ ಾಜಿ ವಿದ್ಯುತ್ ಮಂತ್ರಿ ಸುರೇಶ ಪ್ರಭು ವರ ನೇತೃತ್ವದಲ್ಲಿ ಟಾಸ್ಕ್ ಫೋರ್ಸ್ ಂದನ್ನು ನೇಮಿಸಿದೆ. ಇಂತಹ ೋಜನೆಯೊಂದನ್ನು ಕೈಗೆತ್ತಿಕೊಂಡರೆ ದರ ವೆಚ್ಚ ಸುಮಾರು 5,60,000 ೋಟಿ ರೂಪಾಯಿಗಳ ಆಸು ಪಾಸಿರುತ್ತ ಂದು ಈಗ ಲೆಕ್ಕ ಹಾಕಲಾಗುತ್ತಿದೆ.

ದೇಶದ ಕೆಲವು ನದಿಗಳಲ್ಲಿ ಬಹಳ ಿರಿದ್ದು ಕೆಲವುಗಳಲ್ಲಿ ಕೊರತೆ ಇದ್ದರೆ ಿಗಳ ಜೋಡಣೆಯ ಮೂಲಕ ಎಲ್ಲ ದೇಶಗಳಲ್ಲೂ ನೀರಿನ ಅವಶ್ಯಕತೆ ಗನ್ನು ಪೂರೈಸಬಹುದಾದರೆ ಅದು ಳ್ಳೆಯ ಯೋಜನೆಯೇ ಸರಿ. ಆದರೆ ದರ ಸಾದಕ ಬಾದಕಗಳನ್ನು ಶ್ಲೇಷಿಸಿದಾಗಲೇ ನಿಜ ಪರಿಸ್ಥಿತಿ ರ್ಥವಾಗುವುದು. ಸಮಸ್ಯೆ ಿಹಾರವಾಗುವುದಾದರೆ ಸಂತೋಷ. ಾಗಾಗದೆ ಕರ್ನಾಟಕ ಮತ್ತು ತಮಿಳು ಡುಗಳ ನಡುವಿನ ಮನಃಸ್ತಾಪಕ್ಕೆ ಇತರ ಲ್ಲ ರಾಜ್ಯಗಳನ್ನೂ ಸೇರಿಸು ಂತಾಗುವುದಾದರೆ?

ಮಸ್ಯೆಗಳೇನು?

ಚಿಂತೆಯುಂಟು ಮಾಡುವ ಗತಿಯೇನೆಂದರೆ ಇಂತಹ ವಿಶ್ಲೇಷಣೆ ಾಡದೆ ಆತುರದಿಂದ ಕೇಂದ್ರದ ್.ಡಿ.ಎ. ಸರ್ಕಾರ ಈ ದಿಸೆಯಲ್ಲಿ ರ್ಾರಗಳನ್ನು ತೆಗೆದುಕೊಳ್ಳುತ್ತಿ ವುದು. ವಿಷಯವನ್ನು ರಾಜಕೀಯ ಭಕ್ಕಾಗಿ ಬಳಸಲಿಕೊಳ್ಳಹೊರಟಿರುವ ತರ ರೀತಿ ದೊಡ್ಡ ಪ್ರಮಾಣದ ಷಯ, ಅಂಕಿ ಸಂಖ್ಯೆಗಳ ಸಂಗ್ರಹಣೆ ತ್ತು ಅದರ ವಿಶ್ಲೇಷಣೆ, ನಂತರ ರ್ಕಾರದ ದಾರಿಯನ್ನು ಈ ಸರ್ಕಾರ ುಸರಿಸಿದ್ದರೆ ಚಿಂತೆಗೆಡ ರುತ್ತಿರಲಿಲ್ಲ.

ಈ ವಿಷಯಕ್ಕೆ ಸಂಬಂಧಪಟ್ಟಂತೆ ವೇ ಕೆಲವು ಮಗ್ಗಲುಗಳನ್ನು ್ಲೇಷಿಸಿದರೆ ಈ ಯೋಜನೆ ಭದ್ದಲ್ಲವೆಂಬುದು ಗೊತ್ತಾಗುತ್ತದೆ.

ಇಂತಹ ನದಿ ಜೋಡಣೆಯ ಜನೆ ಬರೀ ಭಾರತವನ್ನು ಮಾತ್ರ ಗೊಂಡಿರುವುದಿಲ್ಲ. ಭಾರತ, ನೇಪಾಳ, ಬಾಂಗ್ಲಾದೇಶ ಮತ್ತು ಭೂತಾನಗಳನ್ನು ಅದು ಒಳಗೊಂಡಿರಬೇಕಾಗುತ್ತದೆ. ನದಿ ನೀರಿನ ಹಂಚಿಕೆ, ಖರ್ಚು, ಲಾಭ, ಪರಿಸರದ ಮೇಲಿನ ಪರಿಣಾಮ ಇತ್ಯಾದಿಗಳನ್ನೂ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.

ನದಿಗಳ ಜೋಡಣೆ ಮಾಡುವಾಗ ನದಿ ಪಾತ್ರದಲ್ಲಿರುವ ರಾಜ್ಯದ ಒಪ್ಪಿಗೆಯನ್ನು ಪಡೆಯದೇ ಬೇರೆ ರಾಜ್ಯಗಳಿಗೆ ನೀರು ಹರಿಸುವುದು ಸಾಧ್ಯವಾಗುವುದಿಲ್ಲ. ನದಿ ಪಾತ್ರದಲ್ಲಿರುವ ರಾಜ್ಯಗಳಿಗೆ ಆಗ ಉಳಿದ ರಾಜ್ಯಗಳು ಪರಿಹಾರ ನೀಡುವುದನ್ನು ಪರಿಶೀಲಿಸಬೇಕಾಗುತ್ತದೆ. ಇಂತಹ ವ್ಯವಸ್ಥೆಯಿಲ್ಲದೆ ಹೋದರೆ ತಕರಾರುಗಳನ್ನು ಪರಿಹರಿಸುವುದು ಸಾಧ್ಯವೇ ಆಗುವುದಿಲ್ಲ.

ಎರಡನೇ ತೊಡಕು ಇದು. ನೀರು ರಾಜ್ಯಗಳ ವಿಷಯ ಕೇಂದ್ರ ಸರ್ಕಾರದ್ದಲ್ಲ. ಆದ್ದರಿಂದ ಹೀಗೆ ನದಿ ಜೋಡಣೆ ಮಾಡಿದರೆ ನೀರಿನ ಹತೋಟಿ ಯಾರ ಬಳಿ ಇರುತ್ತದೆ. ಕೇಂದ್ರದ ಕೈಯಲ್ಲೊ ಅಥವಾ ರಾಜ್ಯದ ಕೈಯಲ್ಲೋ? ಈ ಅಧಿಕಾರವನ್ನು ಕೇಂದ್ರಕ್ಕೆ ವರ್ಗಾಯಿಸಿದರೆ ಎಲ್ಲ ರಾಜ್ಯಗಳು ತಮ್ಮ ನೀರಿನ ಮೇಲಿನ ಅಧಿಕಾರವನ್ನು ಕಳೆದುಕೊಳ್ಳುತ್ತವೆ. ನೀರಿನ ಆಡಳಿತ ಬಹಳ ತೊಡಕಾಗಿಬಿಡುತ್ತದೆ.

ಹಾಗೆ ನೋಡಿದರೆ ಎಲ್ಲ ನದಿಗಳಲ್ಲೂ ಯಥೇಚ್ಛ ನೀರೇನಿಲ್ಲ. ನದಿ ಪಾತ್ರದ ರಾಜ್ಯಗಳು ನೀರನ್ನು ಬೇರೆ ರಾಜ್ಯಗಳ ಜೊತೆಗೆ ಹಂಚಿಕೊಳ್ಳಲು ತಯಾರಿರುವುದಿಲ್ಲ ಎಂಬುದನ್ನು ಆಗಲೇ ಬಿಹಾರದ ಆರ್.ಜೆ.ಡಿ. ಅಧ್ಯಕ್ಷ ಲಾಲೂಪ್ರಸಾದರು ಒಡೆದು ಹೇಳಿದ್ದಾರೆ. ಇದು ಬರಲಿರುವ ಅಡೆತಡೆಗಳ ಒಂದು ಉದಾಹರಣೆ ಮಾತ್ರ. ಉತ್ತರದಲ್ಲಿ ಬ್ರಹ್ಮಪುತ್ರಾ ಮತ್ತು ದಕ್ಷಿಣದಲ್ಲಿ ಪಶ್ಚಿಮ ಘಟ್ಟಗಳಿಂದ ಅರಬ್ಬಿ ಸಮುದ್ರಕ್ಕೆ ಹರಿಯುವ ನದಿಗಳಲ್ಲಿ ಮಿಗುತೆ ನೀರಿದೆಯೆಂಬುದನ್ನು ಒಪ್ಪಿಕೊಳ್ಳೋಣ. ಆದರೆ ಇದನ್ನು ವಿತರಿಸುವುದು ಹೇಗೆ?

ತಗಲುವ ವೆಚ್ಚ

ನದಿ ಜೋಡಣೆಯ ತಂತ್ರಜ್ಞಾನ ಇರಬಹುದು. ಇಳಿಜಾರಿರುವ ಕಡೆಗೆ ನೀರನ್ನು ಹರಿಸುವುದು, ಗುಡ್ಡಗಳಿರುವಲ್ಲಿ ಸುರಂಗ ತೋಡುವುದು ಮತ್ತು ಇತರ ಅಡೆತಡೆಗಳಿರುವಲ್ಲಿ ನೀರನ್ನು ಎತ್ತುವುದು, ಅವಶ್ಯಕತೆಯಿರುವಲ್ಲಿ ನೀರನ್ನು ಶೇಖರಿಸಿ ಇರಿಸಿಕೊಳ್ಳುವುದರ ಮೂಲಕ ನದಿ ಜೋಡಣೆ ಮಾಡಬಹುದು. ಇದು ಬಹಳ ವೆಚ್ಚದ ಯೋಜನೆಯಾಗುತ್ತದೆ. ಇದರಿಂದ ಬರಬಹುದಾದ ಲಾಭ / ಅನುಕೂಲಗಳು ಈ ವೆಚ್ಚಕ್ಕಿಂತ ಹೆಚ್ಚಿರುತ್ತದೋ ಎಂಬುದೂ ಸಂದೇಹದ ವಿಷಯ.

ಬ್ರಹ್ಮಪುತ್ರ ನದಿಯ ಜೋಡಣೆಗೆ ಹೊರಟರೆ ಎರಡೇ ದಾರಿಗಳಿರುವುದು. ಒಂದು ಬಾಂಗ್ಲಾದೇಶದ ಮೂಲಕ, ಇನ್ನೊಂದು ಕೋಳಿ ಕುತ್ತಿಗೆಯಂತಿರುವ ಪ. ಬಂಗಾಳದ ಸಿರಿಗುರಿಯ ಮೂಲಕ. ಬಾಂಗ್ಲಾದೇಶ ಇಂತಹುದಕ್ಕೆ ಅವಕಾಶ ನೀಡುವುದನ್ನು ಈಗಾಗಲೇ ತಳ್ಳಿಹಾಕಿದೆ. ಸಿಲಿಗುರಿಯ ಮೂಲಕವೆಂದರೆ ನೀರನ್ನು ಬಹಳ ಎತ್ತರಕ್ಕೆ ಎತ್ತಬೇಕಾಗುತ್ತದೆ. ಹೀಗೆ ಎರಡೂ ದಾರಿಗಳು ತೊಡಕಿನದಾಗಿವೆ.

ಉಪಖಂಡದ ನದಿಗಳನ್ನು ಜೋಡಿಸ ಹೊರಟರೆ ಮಹಾನದಿ ಮತ್ತು ಗೋದಾವರಿ ನದಿಗಳನ್ನು ಕಾವೇರಿ ಮತ್ತು ವಗ್ಗೈ ನದಿಗಳಿಗೆ ಜೋಡಿಸುವ ಪ್ರಸ್ತಾಪ ಬರುತ್ತದೆ. ಮಹಾನದಿ ಮತ್ತು ಗೋದಾವರಿ ಒರಿಸ್ಸಾ ಮತ್ತು ಆಂಧ್ರ ಪ್ರದೇಶಗಳಲ್ಲಿ ಹರಿಯುತ್ತವೆ. ಈ ಎರಡೂ ರಾಜ್ಯಗಳು ಈ ನದಿಗಳಲ್ಲಿ ಮಿಗುತೆ ನೀರಿದೆ ಎಂಬುದನ್ನೇ ಒಪ್ಪುವುದಿಲ್ಲ. ಹಾಗಿರುವಾಗ ಜೋಡಣೆಗೆ ಒಪ್ಪುವ ಪ್ರಶ್ನೆಯೆಲ್ಲಿಯದು?

ಹೀಗೆ ನದಿ ಜೋಡಣೆಯ ಯೋಜನೆಗೆ ಹಲವು ಪ್ರಬಲ ಅಡೆತಡೆಗಳಿವೆ. ತಮಿಳುನಾಡು ಮತ್ತು ಕರ್ನಾಟಕಗಳ ನಡುವೆ ಸಮಸ್ಯೆ ಬಂದಾಗ ಅದನ್ನು ಪರಿಹರಿಸುವಲ್ಲಿ ಯಾವುದೇ ಚಾಕಚಕ್ಯತೆ, ಸಂಕಲ್ಪ ತೋರದ ಕೇಂದ್ರ ಸರ್ಕಾರ ಇಂತಹ ಅಡೆ ತಡೆಗಳನ್ನು ನಿವಾರಿಸಬಲ್ಲದೆ? ಅಂತಹ ಸಂಕಲ್ಪವನ್ನು ತೋರುವ ಸರ್ಕಾರ ಬಂದರೂ ಅದರಿಂದ ಲಾಭವಾಗುತ್ತದೆ ಎಂಬುದಾದರೂ ಸ್ಪಷ್ಟ ವಿವರಬೇಕಲ್ಲವೇ?

ಈ ಯೋಜನೆಗೆ ಎನ್‌ಡಿಎ ಸರ್ಕಾರ ಇಂತಹ ಪ್ರಚಾರವನ್ನು ಯಾಕೆ ನೀಡುತ್ತಿದೆ? ಬರಗಾಲವನ್ನು ಎದುರಿಸುವ ನಾಟಕದ ಅವಶ್ಯಕತೆ ಅವರಿಗಿರ ಬಹುದು. ಅದಕ್ಕಿಂತ ಹೆಚ್ಚಾಗಿ ಪವಿತ್ರ ಸರಸ್ವತಿಯನ್ನು ಪುನಃಶ್ಚೇತನಗೊಳಿಸಿ ಗಂಗೆಯನ್ನು ದಕ್ಷಿಣಕ್ಕೆ ತರಬೇಕೆಂಬುದು ಅವರ ಮೂಲ ಉದ್ದೇಶ. ಅಲ್ಲದೆ 5,60,000 ಕೋಟಿ ರೂಪಾಯಿಗಳ ಯೋಜನೆ ದೊಡ್ಡ ಮೊತ್ತದ ವ್ಯವಹಾರವನ್ನೇ ಕುದುರಿಸುತ್ತದೆ. ಆದ್ದರಿಂದ ಅನಿವಾಸಿ ಭಾರತೀಯರು ಅಮೇರಿಕದ ರಾಯಭಾರಿಗಳೆಲ್ಲ ಈ ಯೋಜನೆಗೆ ಬೆಂಬಲ ತೋರುತ್ತಿವೆ. ಕಂಟ್ರಾಕ್ಟರುಗಳು, ಸಲಹಾ ತಂತ್ರಜ್ಞರು ಗಳೆಲ್ಲ ಈ ಯೋಜನೆಯ ಫಲಾನುಭವಿ ಗಳಾಗುತ್ತಾರೆ ಅಷ್ಟೆ ಹೊರತು ದೇಶದ ಜನತೆಯಲ್ಲ.

ಈ ಯೋಜನೆಯ ಇನ್ನೊಂದು ಬಹು ಮುಖ್ಯ ಮಗ್ಗುಲಿದೆ. ಈಗಾಗಲೇ ಹಲವು ಯೋಜಿತ, ಖಚಿತವಾಗಿ ಲಾಭತರುವ ನೀರಾವರಿ ಯೋಜನೆಗಳಿವೆ. ಈ ಯೋಜನೆಗಳಿಗೆ ಹತ್ತನೆ ಪಂಚವಾರ್ಷಿಕ ಯೋಜನೆಯಲ್ಲಿ 70,000 ಕೋಟಿ ರೂಪಾಯಿಗಳು ಮತ್ತೆ ಹನ್ನೊಂದನೇ ಪಂಚವಾರ್ಷಿಕ ಯೋಜನೆಯಲ್ಲಿ 1,10,000 ಕೋಟಿ ರೂಪಾಯಿಗಳನ್ನು ಒದಗಿಸಬೇಕಾಗಿದ್ದ ಸರ್ಕಾರ ಅದನ್ನು ಮಾಡಲಾಗಿಲ್ಲ. ಇನ್ನು 5,60,000 ಕೋಟಿ ರೂಪಾಯಿಗಳನ್ನು ಅದು ಸಂಗ್ರಹಿಸಿ ಒದಗಿಸೀತೆ ಎಂಬುದೂ ಪ್ರಶ್ನೆ.

ಇಂತಹ ದೊಡ್ಡ ಯೋಜನೆಗೆ ಹಲವು ಮಗ್ಗಲು ಗಳಿರುತ್ತವೆ. ಎಲ್ಲ ವಿಷಯಗಳನ್ನು ಸಮಗ್ರವಾಗಿ ಸಂಗ್ರಹಿಸಿ ಆಳ ವಿಶ್ಲೇಷಣೆ ನಡೆಸಬೇಕಾಗುತ್ತದೆ. ಲಾಭ ನಷ್ಟಗಳ ಅಂದಾಜು ಮಾಡಬೇಕಾಗುತ್ತದೆ. ಹಾಗೆ ಮಾಡಿದ ನಂತರ ಯೋಜನೆ ನಿಶ್ಚಿತವಾಗಿ ಲಾಭ ತರುವುದಾದಲ್ಲಿ ಅದರ ಜಾರಿಗೆ ಕೈ ಹಾಕಬೇಕು. ಇದಾವುದನ್ನೂ ಮಾಡದೆ ರಾಜಕೀಯ ಲಾಭಕ್ಕಾಗಿ ಇಂತಹ ಯೋಜನೆಯ ಬಗ್ಗೆ ಆತುರ ತೋರಿದರೆ ಈ ವಿಷಯದಲ್ಲಿ ಹೆಚ್ಚು ಜಾಗೃತರಾಗಬೇಕಾಗುತ್ತದೆ ಅಲ್ಲವೆ?.


(ಪೀಪಲ್ಸ್ ಡೆಮೋಕ್ರಸಿಯಲ್ಲಿ ಪ್ರಕಟವಾದ ಪ್ರಬೀರ್ ಪುರಕಾಯಸ್ಥ ಲೇಖನದ ಸಂಗ್ರಹಾನುವಾದ)



ದುರ್ಗಮ ಮಾರ್ಗದಲ್ಲಿ ದುಸ್ಸಾಹಸವಾಗಬಹುದಾದ ನದಿ ಜೋಡಣೆ

ಭಾರತದ ಮುಖ್ಯ ನೀರಾವರಿ ಯೋಜನೆಗಳು

ರಾಜ್ಯ	ಯೋಜನೆ	ನೀರಾವರಿ ಪ್ರದೇಶ (ದಶಲಕ್ಷ ಹೆಕ್ಟೇರುಗಳಲ್ಲಿ)
ಆಂಧ್ರಪ್ರದೇಶ	ಗೋದಾವರಿ	0.36
	ಕೃಷ್ಣ	0.60
	ನಾಗಾರ್ಜುನ ಸಾಗರ(ಕೃಷ್ಣ)	0.81
	ಪೋಚಂಪದ(ಗೋದಾವರಿ)	0.23
ಬಿಹಾರ	ಗೋಂಡಕ್	1.31
	ಕೋಸಿ	1.06
	ಸೋನೆನಾಲೆ	0.24
ಗುಜರಾತ್	ರಾಕ್ರಪಾರ(ತಪತಿ)	0.23
	ಮಹಿಬಲದಂಡೆ	0.19
	ನರ್ಮದಾ	0.40
	ಉಕಾಯಿ(ತಪತಿ)	1.60
ಮಧ್ಯಪ್ರದೇಶ	ಗಾಂಧಿಸಾಗರ(ಚಂಬಲ್)	0.45
	ತಾವಾ	0.32
ಮಹಾರಾಷ್ಟ್ರ	ಭೀಮಾ	0.12
	ಜಯಕವಾಡಿ(ಗೋದಾವರಿ)	0.14
ಕೇರಳ	ಕಲ್ಲದ	0.11
ಕರ್ನಾಟಕ	ಘಟಪ್ರಭಾ	0.20
	ಮಲಪ್ರಭಾ	0.12
	ತುಂಗಭದ್ರಾ	0.41
ಒರಿಸ್ಸಾ	ಹಿರಾಕುಡ್(ಮಹಾನದಿ)	0.24
	ಮಹಾನದಿಪಾತ್ರ	0.65
ಪಂಜಾಬ್	ಬಿಯಸ್	3.24
	ಭಾಕ್ರನಂಗಲ್	1.25
	ಪಶ್ಚಿಮ ಯಮುನಾ	0.52
	ಸಿರಜಹಿಂದ್ ನಾಲೆ	0.95
	ಬಾಯ್‌ದೊ ಅಬ್	0.40
	ಮೇಲ್ದಂಡೆ ನಾಲೆ	
ರಾಜಸ್ಥಾನ	ಗಂಗಾ	0.22
	ರಾಜಸ್ಥಾನ ನಾಲೆ	1.06
ಉತ್ತರ ಪ್ರದೇಶ	ಗಂಗಾ ಮೇಲ್ದಂಡೆ	0.80
	ಗಂಗಾ ಯೋಜನೆ ಕೆಳದಂಡೆ	0.60
	ಶಾರಿದಾ ನಾಲೆ	0.18
	ಮೆತಾಲಿಯಾ	0.17
	ರಾಮಗಂಗಾ	0.69
ಪಶ್ಚಿಮಬಂಗಾಳ	ಕಂಸಾವತಿ ಜಲಾಶಯ	0.38
	ಮಯಾರಾಕ್ಷಿ	0.25
	ದಾಮೋದರ ಕಣಿವೆ	0.42
	ದುರ್ಗಾಪುರ ಬ್ಯಾರೇಜು	0.42



ಕುರುಡು ಕಾಂಚಾಣ

ಕೆ.ಎಸ್.ಮಣಿ

ಲಾಭದ ಬೆನ್ನಟ್ಟಿ ಹೋದರೆ.....

ಹಿಂದೆಲ್ಲ ಕೆಎಸ್‌ಆರ್‌ಟಿಸಿ ಬಸ್ ಪ್ರಯಾಣ ದರ ಏರಿಸಬೇಕಾದರೆ ಬಹಳ ತಯಾರಿ ಮಾಡುತ್ತಿತ್ತು. ಡೀಸೆಲ್ ಬೆಲೆ ಹೆಚ್ಚಾದಾಗಲೆಲ್ಲ ಬೆಲೆ ಏರಿಸುತ್ತಿರಲಿಲ್ಲ. ನಷ್ಟವಾದರೆ ಸರ್ಕಾರ ಭರಿಸುತ್ತಿತ್ತು. ರಾಜ್ಯದ ಜನಸಾಮಾನ್ಯರು ನೆಮ್ಮದಿಯಿಂದ ಬಸ್ಸುಗಳಲ್ಲಿ ಓಡಾಡಬಹುದಾಗಿತ್ತು.

ಉದಾರೀಕರಣ ಪ್ರಾರಂಭವಾದ ಮೇಲೆ ಪರಿಸ್ಥಿತಿ ಹಾಗೆ ಉಳಿದಿಲ್ಲ. ಹಿಂದೆ ನಷ್ಟ ಮಾಡುತ್ತಿದ್ದ ಕೆಎಸ್‌ಆರ್‌ಟಿಸಿ ಈಗ ಲಾಭ ಮಾಡುತ್ತಿದೆ. ಆದರೆ ಈ ಲಾಭಕ್ಕೆ ಜನಸಾಮಾನ್ಯರು ಬೆಲೆ ತೆರುತ್ತಿದ್ದಾರೆ. ಡಿಸೆಲ್ ಬೆಲೆ ಹೆಚ್ಚಾದಗೊಮ್ಮೆ ಬೆಲೆ ಏರಿಸತೊಡಗಿರುವ ಕೆಎಸ್‌ಆರ್‌ಟಿಸಿ ಡೀಸೆಲ್ ಬೆಲೆ ಇಳಿದಾಗ ಟಿಕೆಟ್ ದರಗಳನ್ನು ಇಳಿಸುವುದಿಲ್ಲ. ಲಾಭ ಯಾವ ರೀತಿಯಲ್ಲಿ ಬಂದರೂ ಸರಿಯೇ ಜನ ಉಸಿರೆತ್ತಿ ಪ್ರತಿಭಟಿಸಿದರೆ ಪುಡಿಗಾಸಿನಷ್ಟು ದರವನ್ನು ಇಳಿಸುತ್ತದೆ ಅಷ್ಟೆ. ಕಣ್ಣೊರೆಸುವ ತಂತ್ರ.

ಇಷ್ಟೇ ಅಲ್ಲ, ಅದರದ್ದು ಇನ್ನೊಂದು ತಂತ್ರ. ಹಂಗಾಮಿನಲ್ಲಿ ಬೆಲೆ ಏರಿಸಿ ಹಂಗಾಮಿಲ್ಲದಾಗ ಬೆಲೆ ಇಳಿಸುವುದು. ಇದಕ್ಕೆ ಹಲವು ವಿವರಣೆಗಳನ್ನು ಅದು ಕೊಡುತ್ತದೆ. ಒಟ್ಟಾರೆ ಜನರ ಜೇಬಿಗೆ ಕತ್ತರಿ ಉರಿವ ಮನೆ ಗಳ ಹಿರಿದಷ್ಟೇ ಲಾಭ ಎಂಬಂತೆ.

ಜನ ಹೆಚ್ಚು ಓಡಾಡುವಾಗ ಬಸ್‌ಗಳು ತುಂಬಿತುಳುಕುತ್ತವೆ. ಕೆಎಸ್‌ಆರ್‌ಟಿಸಿಗೆ ಹೆಚ್ಚಿನ ಆದಾಯ ಬರುತ್ತದೆ. ಖರ್ಚೂ ಹೆಚ್ಚಾಗುವುದಿಲ್ಲ ಆಗ ಟಿಕೆಟ್ ದರಗಳನ್ನು ಇಳಿಸಬಹುದು. ಆದರೆ ಅದನ್ನು ಕೆ.ಎಸ್.ಆರ್.ಟಿ.ಸಿ ಮಾಡುವುದಿಲ್ಲ.

ಹೀಗೆ ಸೇವಾಮುಖಿಯಾಗಿದ್ದ ಕೆ.ಎಸ್.ಆರ್.ಟಿ.ಸಿ. ಲಾಭ ಮುಖಿಯಾಗಿರುವುದು, ಜನರ ಸುಲಿಗೆಗೆ ತೊಡಗಿರುವುದು ಉದಾರೀಕರಣ ವೆನ್ನುವುದು ಜನರಿಗೆ ಏನು ಮಾಡಬಹುದು ಎಂಬುದಕ್ಕೆ ಒಳ್ಳೆಯ ಉದಾಹರಣೆ.

ಕೃಷಿ ವ್ಯಾಪಾರದ ಬದಲಾವಣೆಯನ್ನು ಚೆನ್ನಾಗಿ ನಿರ್ವಹಿಸಿ

ಇದನ್ನು ರಾಷ್ಟ್ರೀಯ ಆರ್ಥಿಕ ಸಂಶೋಧನಾ ಮಂಡಳಿಯ ಪ್ರಮುಖ ಅರ್ಥಶಾಸ್ತ್ರಜ್ಞ ಅನಿಲ್ ಶರ್ಮಾ ಹೇಳಿದ್ದಾರೆ. ಇಲ್ಲದಿದ್ದರೆ?

ಇಲ್ಲದಿದ್ದರೆ ಹಳ್ಳಿಗಳಿಂದ ಜನ ನಗರಗಳಿಗೆ ತಂಡತಂಡವಾಗಿ ವಲಸೆ ಬರುತ್ತಾರೆ. ನಗರಗಳಲ್ಲಿ ಎಲ್ಲ ತರಹದ ಅಭಾವ ಮತ್ತು ಸಮಸ್ಯೆಗಳು ಉಂಟಾಗುತ್ತದೆ ಎಂದು ಅವರು ಹೇಳಿದ್ದಾರೆ.


ವಿಶ್ವ ವ್ಯಾಪಾರ ಸಂಘಟನೆಯಡಿ ಆದ ಒಪ್ಪಂದಗಳ ಪರಿಣಾಮವಾಗಿ ದೇಶದಾದ್ಯಂತ ಕೃಷಿ ಲಾಗೋ ಬೆಲೆ ಏರುತ್ತಲೇ ಇರುವಾಗ ಕೃಷಿ ಉತ್ಪನ್ನಗಳಿಗೆ ಬೆಲೆಯೇ ಇಲ್ಲವಾಗುತ್ತಿದೆ. ಹೀಗಿರುವಾಗ ಗ್ರಾಮೀಣ ಪ್ರದೇಶದ ಕೃಷಿ ಕೂಲಿಕಾರರು, ಅತೀ ಸಣ್ಣ ಮತ್ತು ಸಣ್ಣ ರೈತರು ಕಂಗಾಲಾಗಿದ್ದಾರೆ. ಗಾಯದ ಮೇಲೆ ಉಪ್ಪೆರಚಿದಂತೆ ಮಳೆಮಾಯವಾಗಿ ಬರಗಾಲ ಬಂದಿದೆ.

ಎಲ್ಲ ಕಡೆ ರೈತರು ತಂಡತಂಡವಾಗಿ ನಗರಗಳ ಕಡೆಗೆ ವಲಸೆ ಹೋಗುತ್ತಿದ್ದಾರೆ. ನಗರಗಳಲ್ಲಿ ಸೌಲಭ್ಯಗಳ ಕೊರತೆ ತೀವ್ರವಾಗಿ ಕಾಣುತ್ತಿದೆ. ಕೇಂದ್ರದ ಎನ್.ಡಿ.ಎ ಸರ್ಕಾರಕ್ಕಂತೂ ಈ ಕಡೆಗೆ ನಿಗಾ ಇರುವಂತೆ ಕಾಣುವುದಿಲ್ಲ.

ನಿರುದ್ಯೋಗದ ಸುಗ್ಗಿ

ಬೆಳೆ ಬಂದಾಗ "ಸುಗ್ಗಿ" ಮಾಡುತ್ತಾರೆ ರೈತರು. ಇದೇನು ನಿರುದ್ಯೋಗದ ಸುಗ್ಗಿ ಎಂದಿರಾ? ಉದಾರೀಕರಣವೆಂಬುದು ನಿರುದ್ಯೋಗದ ಬೆಳೆಯನ್ನೇ ಕೊಡುತ್ತಿದೆ. ಆದ್ದರಿಂದಲೇ ನಿರುದ್ಯೋಗದ ಸುಗ್ಗಿ ಎಂದಿರುವುದು. ದೇಶದ ಜನಸಂಖ್ಯೆ ಬೆಳೆಯುತ್ತಿದೆ. ಅದಕ್ಕೆ ಸರಿಸಮವಾಗಿ ಉದ್ಯೋಗಗಳು ಹೆಚ್ಚಬೇಕು. ಆಗ ನಿರುದ್ಯೋಗ ಕಡಿಮೆಯಾಗುತ್ತದೆ. ಈಗ ಆಗುತ್ತಿರುವುದು ಅದಕ್ಕೆ ತದ್ವಿರುದ್ಧ. ದೇಶದ ಜನಸಂಖ್ಯೆ ಬೆಳೆಯುತ್ತಿರುವುದರಿಂದ ಉದ್ಯೋಗ ಬೇಕಾಗಿರುವ ಯುವಜನರ ಸಂಖ್ಯೆ ಹೆಚ್ಚಾಗುತ್ತಿದೆ. ಇದರ ಜೊತೆಗೆ ಉದ್ಯೋಗ ಕಳೆದುಕೊಂಡಿರುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ. ಎರಡೂ ನಿರುದ್ಯೋಗದ ಸುಗ್ಗಿಗೆ ಕಾಣಿಕೆ ನೀಡುತ್ತಿವೆ.

ಕಾರ್ಮಿಕ ವಲಯವನ್ನು ಸಂಘಟಿತ ವಲಯ ಮತ್ತು ಅಸಂಘಟಿತ ವಲಯ ಎಂದು ವಿಭಾಗಿಸಿ ನೋಡಲಾಗುತ್ತದೆ. ಸಂಘಗಳನ್ನು ಕಟ್ಟಿಕೊಂಡು ಇರುವ ಕಾರ್ಮಿಕರು ತಮ್ಮ ಹಕ್ಕುಗಳಿಗಾಗಿ ಹೋರಾಡಬಲ್ಲರು. ಇವರ ಸಂಖ್ಯೆಯ ಸ್ಪಷ್ಟ ಚಿತ್ರಣ ಕೂಡ ಇದೆ. ಇವರು ಸಂಘಟಿತ ವಲಯದವರು. ಇನ್ನುಳಿದವರು ಅಂದರೆ ದಿನಗೂಲಿ ಮಾಡುವವರು ಯಾವುದೇ ಲೆಕ್ಕದಲ್ಲಿ ಸೇರದವರು ಅಸಂಘಟಿತ ವಲಯದವರು. ಸಂಘಟಿತ ವಲಯದ ಬಗ್ಗೆ ಲೆಕ್ಕಗಳು ಸಿಗುವುದರಿಂದ ಸ್ಪಷ್ಟ ಚಿತ್ರಣ ಸಿಗುತ್ತದೆ. ಅಸಂಘಟಿತ ವಲಯದ ಬಗ್ಗೆ ಅಂತಹ ಚಿತ್ರಣ ಸಿಗುವುದಿಲ್ಲ. ಅಂದಾಜುಗಳನ್ನು ಮತ್ತು ಊಹೆಗಳನ್ನು ಮಾಡಬೇಕಷ್ಟೆ. ಸರ್ಕಾರಿ ವಲಯದ ಕಾರ್ಮಿಕರು ಸಂಘಟಿತ ವಲಯಕ್ಕೆ ಸೇರಿದರೆ ಖಾಸಗೀ ವಲಯದ ಬಹುತೇಕ ಜನ ಅಸಂಘಟಿತ ವಲಯಕ್ಕೆ ಸೇರುತ್ತಾರೆ.



ಈಗ 2001- 2002 ನೇ ಸಾಲಿನ ಉದ್ಯೋಗ ಪರಿಸ್ಥಿತಿ ಒಂದು ಅಧ್ಯಯನದ ಮೂಲಕ ಹೊರಬಿದ್ದಿದೆ. ಇದರ ಪ್ರಕಾರ ಸಂಘಟಿತ ವಲಯದಲ್ಲಿ 4,20,000 (ನಾಲ್ಕು ಲಕ್ಷ ಇಪ್ಪತ್ತು ಸಾವಿರ) ಉದ್ಯೋಗಗಳು ನಾಪತ್ತೆಯಾಗಿವೆಯಂತೆ. ಅಂದರೆ ಶೇ.1-5 ರಷ್ಟು ಉದ್ಯೋಗಗಳು ಕಡಿಮೆಯಾಗಿವೆ.

ಈ ಅಧ್ಯಯನದ ಪ್ರಕಾರ ದೇಶದಲ್ಲಿ 2,87,000 ಸ್ಥಾಪನೆಗಳು (ಸಂಸ್ಥೆಗಳು) ಇವೆ. ಇವುಗಳಲ್ಲಿ ಸರ್ಕಾರಿ ವಲಯದಲ್ಲಿ 1,72,000 ಸಂಸ್ಥೆಗಳಿದ್ದರೆ ಖಾಸಗೀ ವಲಯದಲ್ಲಿ 1,15,000 ಸಂಸ್ಥೆಗಳಿವೆ.

ಸಂಘಟಿತ ವಲಯದಲ್ಲಿನ ಜನರ ಸಂಖ್ಯೆ 2000 ದ ಮಾರ್ಚ್ ಕೊನೆಗೆ 27.9 ದಶಲಕ್ಷವಿದ್ದುದು ಮಾರ್ಚ್ 2001ರಲ್ಲಿ 27.75 ದಶಲಕ್ಷಕ್ಕೆ ಇಳಿದು ಮಾರ್ಚ್ 2002 ರ ವೇಳೆಗೆ 27.33 ದಶಲಕ್ಷಕ್ಕೆ ಇಳಿದಿದೆ.

ಅಂದರೆ ಈ ಉದ್ಯೋಗ ಇಳಿಕೆ ಎರ[illegible] ವರ್ಷಗಳ ಕಾಲ ಸತತವಾಗಿ ಆಗಿದೆ.

ಉದ್ಯೋಗಗಳ ಇಳಿಕೆ ಬ್ಯಾಂಕುಗ[illegible] ಮಾತ್ರವೇ ಒಂದು ಲಕ್ಷದಷ್ಟಾಗಿದೆ. ಇದು ಸ್ವ[illegible] ನಿವೃತ್ತಿ ಯೋಜನೆಯಿಂದ ಗಣಗಾರಿಕೆ ಮತ್ತು [illegible] ಕೊರೆಯುವ ವಲಯ ಅತಿ ಹೆಚ್ಚು ಅಂದರೆ ಶೇ[illegible] ರಷ್ಟು ಉದ್ಯೋಗಗಳ ಇಳಿಕೆಯಾಗಿದ್ದರೆ ಎರ[illegible] ಅತಿ ಹೆಚ್ಚು ಉದ್ಯೋಗಗಳ ಇಳಿಕೆಯಾಗಿ[illegible] ಕ್ಷೇತ್ರವೆಂದರೆ ಉತ್ಪಾದನಾ ವಲಯ.

ಸಂಘಟಿತ 'ವಲಯದಲ್ಲಿ ಕಾರ್ಮಿ[illegible] ಒಗ್ಗಟ್ಟಾಗಿ ಹೋರಾಡ[illegible] ಸಾಮರ್ಥ್ಯವುಳ್ಳವರಾಗಿರುತ್ತಾರೆ. ಈ ವಲಯ[illegible] ಇಷ್ಟೊಂದು ಉದ್ಯೋಗಗಳ ಕಡಿತವಾದರೆ ದೇ[illegible] ಕಾರ್ಮಿಕರಲ್ಲಿ ಶೇ.90 ಕ್ಕೂ ಹೆಚ್ಚು ಜನರ[illegible] ಅಸಂಘಟಿತ ವಲಯದಲ್ಲಿ ಏನಾಗಿರಬ[illegible] ಊಹಿಸಿಕೊಳ್ಳಿ.

ಉದಾರೀಕರಣ

ಉದಾರೀಕರಣ
ವೆಂದರೆ
ಶ್ರೀಮಂತರಿಗೆ
ಉದಾರ
ನೀತಿ ಬಡವರಿಗೆ
ಉದರದ
ಮೇಲೆ
ಹೊಡೆವ ನೀತಿ

\- ವಿಡಂಬಾರಿ

ನಮ್ಮ ನಿಮ್ಮ ಸಂವಾದ

ಸರ್ಕಾರಿ ಶಾಲೆಯೋ... ಆರ್.ಎಸ್.ಎಸ್. ಕೇಂದ್ರವೋ

ಇತ್ತೀಚೆಗೆ ಶಿಕ್ಷಣದ ಕೇಸರೀಕರಣ ಹಾಗೂ ಕೇಂಪೀಕರಣದ ಬಗೆಗಿನ ಚರ್ಚೆಗಳು ಹೆಚ್ಚಾಗುತ್ತಿದೆ. ಪಠ್ಯ ಪುಸ್ತಕಗಳಲ್ಲಿ ಕೇಸರೀಕರಣದ ಅಂಶಗಳನ್ನು ಗುರ್ತಿಸಿ ಸೂಕ್ತ ಕ್ರಮ ಕೈಗೊಳ್ಳಲು ರಾಜ್ಯ ಸರ್ಕಾರವು ಖ್ಯಾತ ಇತಿಹಾಸ ಪ್ರಾಧ್ಯಾಪಕರಾದ ಡಾ|| ಎಸ್. ಚಂದ್ರಶೇಖರ್ ರವರ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿರುವುದು ಸ್ವಾಗತಾರ್ಹ. ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗೆ ಪೂರಕವಾಗುವಂತೆ ಸರ್ಕಾರ, ಮರಳಿ ಬಾ ಶಾಲೆಗೆ, ನಲಿಕಲಿ, ಕೂಲಿಯಿಂದ ಶಾಲೆಗೆ ಎಂಬ ವಿನೂತನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಇತ್ತೀಚಿನ ದಿನಗಳಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 'ಗೋಡೆಗಳು ಮಾತನಾಡುತಾವೆ' ಎಂಬ ನೂತನ ಚಿತ್ರ - ಮಾಹಿತಿ ಕಾರ್ಯಕ್ರಮವು ಮಕ್ಕಳ ವಿದ್ಯಾಭ್ಯಾಸಕ್ಕೆ ಪೂರಕವಾಗಿದೆ. ಈ ಹಿನ್ನೆಲೆಯಲ್ಲಿ ಶಾಲೆಗಳ ಗೋಡೆಗಳ (ಒಳಗೆ-ಹೊರಗೆ) ಮೇಲೆ ಭಾರತಮಾತೆ(ತ್ರಿವರ್ಣ ಧ್ವಜ ಹಿಡಿದಿರುವ), ಕನ್ನಡಮಾತೆ, ರಾಷ್ಟ್ರೀಯ ಪ್ರಾಣಿ ಪಕ್ಷಿಗಳ ಚಿತ್ರಗಳೇ ಅಲ್ಲದೆ ಮಾನವನ ದೇಹ ವಿಜ್ಞಾನಕ್ಕೆ ಸಂಬಂಧಿಸಿದ ವರ್ಣಮಯ ಚಿತ್ರಗಳನ್ನು ಆಕರ್ಷಕವಾಗಿ ಬರೆಸಿದ್ದಾರೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ, ಕೋಲಾರ ಜಿಲ್ಲೆ ಚಿಕ್ಕಬಳ್ಳಾಪುರ ತಾಲೂಕಿನ ಪಟ್ರೇನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಗೋಡೆಯ ಮೇಲೆ ಭಾರತಮಾತೆಯ ಚಿತ್ರದ ಬದಲಿಗೆ ಈ ಹಿಂದೆ ಗುಜರಾತಿನಲ್ಲಿ ಸುಮಾರು 2000 ಮಂದಿ ಮುಗ್ಧರ ಸಾವಿಗೆ ಕಾರಣವಾದ ಕೋಮುವಾದಿ ಸಂಘಟನೆಗಳಾದ ವಿಶ್ವ ಹಿಂದೂ ಪರಿಷತ್ (ವಿ.ಹೆಚ್.ಪಿ.) ಆರ್.ಎಸ್.ಎಸ್. ಭಜರಂಗದಳಗಳನ್ನು ಸಂಕೇತಿಸುವ ॐ ಚಿಹ್ನೆಯಿರುವ ಕೇಸರಿ ಬಾವುಟವನ್ನು ಹಿಡಿದಿರುವ ದೇವತೆಯ ಚಿತ್ರವನ್ನು ದೊಡ್ಡದಾಗಿ ಬರೆಸಿರುವುದು ಆತಂಕದ ಸಂಗತಿ.

ದಯೆ, ಮನುಷ್ಯತ್ವಗಳನ್ನು ಮರೆತು ಈ ಸಂಘಟನೆಗಳು ಮತದಮಲಿನಲ್ಲಿ ಇಡೀ ದೇಶವೆ ಸುಟ್ಟು ಬೂದಿಯಾಗುವಂತೆ ಮಾಡುತ್ತಿರುವ ಈ ದಿನಗಳಲ್ಲಿ ಕೋಮುವಾದಿ ಸಂಘಟನೆಗಳು ಜಾತ್ಯಾತೀತ, ಧಾರ್ಮಾತೀತ ನೆಲಗಟ್ಟಿನ ಸರ್ಕಾರಿ ಶಾಲೆಗಳಲ್ಲಿ ತಮ್ಮ ಚಟುವಟಿಕೆಯ ಕೇಂದ್ರಗಳನ್ನಾಗಿ ಮಾಡಿಕೊಳ್ಳುತ್ತಿರುವುದು ಎಷ್ಟು ಸರಿ? ಪಟ್ರೇನಹಳ್ಳಿ ಶಾಲೆಯಲ್ಲಿ ಈ ದೇವತೆ ಚಿತ್ರ ಕೇಸರೀಕರಣಕ್ಕೆ ಸಾಕ್ಷಿಯಲ್ಲವೆ? ಇದು ಶಾಲೆಯೋ ಅಥವಾ ಆರ್‌ಎಸ್‌ಎಸ್ ಕೇಂದ್ರವೋ ಎಂಬುದನ್ನು ಸಾರ್ವಜನಿಕ ಶಿಕ್ಷಣ ಇಲಾಖೆ ನಿರ್ಧರಿಸಲಿ[illegible] ಎಳೆಯ ಮನಸ್ಸುಗಳನ್ನು ದೇಶಭಕ್ತಿಗೆ ಪೂರಕವಾ[illegible] ಸಿದ್ಧಪಡಿಸಬೇಕೆ ಹೊರತು ಅಸಹ್ಯ ಕೋಮು[illegible] ವಾದಿ ಶಕ್ತಿಗಳ ಹಿತಕ್ಕಲ್ಲ. ಕೇವ[illegible] ಪಠ್ಯಪುಸ್ತಕಗಳಲ್ಲಿ ಅಲ್ಲದೆ ಶಿಕ್ಷಣದ ಇತ[illegible] ಭಾಗಗಳಲ್ಲೂ ಕೇಸರೀಕರಣ ಎಗ್ಗಿಲ್ಲ[illegible] ನುಗ್ಗುತ್ತಿರುವುದನ್ನು ತಡೆಯಬೇಕಿದ[illegible] ಕೋಮುವಾದ ಕೇಸರಿಕರಣವನ್ನು ಬಲವಾ[illegible] ವಿರೋಧಿಸುತ್ತೇವೆ ಎನ್ನುವ ಕಾಂಗ್ರೆ[illegible] ಆಡಳಿತವಿರುವ ರಾಜ್ಯದಲ್ಲಿ ಹೀಗಾದರ[illegible] ಕೋಮುವಾದಿ ಪಕ್ಷಗಳ ಆಡಳಿತದಲ್ಲಿರು[illegible] ರಾಜ್ಯಗಳ ಶಿಕ್ಷಣದ ಗತಿಯೇನು? ಸದ[illegible] ಸಮಸ್ಯೆಯ ಬಗ್ಗೆ ಸಂಬಂಧ ಪಟ್ಟವ[illegible] ಗಂಭೀರವಾಗಿ ಸಮಸ್ಯೆಯನ್ನು ಪರಿಗಣಿಸಿ ಸು[illegible] ಕ್ರಮ ಕೈಗೊಳ್ಳುವರೆಂದು ಆಶಿಸೋಣವೇ?


ಏನಾದರೂ ಆಗು ಮೊದಲು ಮಾನವನಾ[illegible]

\- ಸಿದ್ದಯ್ಯ ಪುರಾ[illegible]

ದಯವೇ ಧರ್ಮದ ಮೂಲವಯ್ಯಾ

\- ಬಸವ[illegible]

ಚಂದ್ರಶೇಖರ್ ಎನ[illegible]
ಚಿಕ್ಕಬಳ್ಳಾಪ[illegible]



ವಿಶ್ವಸಂಸ್ಥೆಯ ನಿರ್ಣಯ 1483 ಇರಾಕ್ ಮೇಲೆ ಅಮೇರಿಕ ಬ್ರಿಟನ್ ದುಷ್ಟಕೂಟದ ಆಕ್ರಮಣವನ್ನು ಮನ್ನಿಸಿದೆ ಮಾತ್ರವಲ್ಲ. ಅವರ ನಗ್ನ ನವ-ಸಾಮ್ರಾಜ್ಯಶಾಹಿಗೆ ಕಾನೂನು ಬದ್ಧತೆಯ ಕಿರು ಲಂಗೋಟಿ ಒದಗಿಸಿದೆ.

ಇರಾಕ್ ಮೇಲೆ ವಿಶ್ವಸಂಸ್ಥೆ ನಿರ್ಣಯ

ದರೋಡೆಗಾರನಿಗೆ ಆಸ್ತಿಯ ಪಟ್ಟ!

ಈ ಸನ್ನಿವೇಶ ಊಹಿಸಿಕೊಳ್ಳಿ! ಇಬ್ಬರು ...ಕ್ಷಿತ ಭಯಾನಕ ದಕಾಯಿತರು ಶ್ರೀಮಂತನ ...ಒಂದನ್ನು ವಶಪಡಿಸಿಕೊಳ್ಳುತ್ತೇನೆ ಎಂದು ...ಜನಿಕವಾಗಿ ಘೋಷಿಸುತ್ತಾರೆ. ಪೊಲೀಸರು ... ಕಾನೂನು ಬದ್ಧವಾಗಿ ನಿಷಿದ್ಧ ಎಂದು ...ತ್ತಾರೆ. ಆದರೂ ದಕಾಯಿತರು ದಾಳಿ ...ಯೇ ತೀರುತ್ತಾರೆ. ಮನೆಯಲ್ಲಿ ಕೊಲೆ, ... ನಡೆಯುತ್ತದೆ. ಆಮೇಲೆ ದಕಾಯಿತರು ...ಸರನ್ನು ಬೆದರಿಸಿ ಲಿಖಿತವಾಗಿ ತಮ್ಮ ಹೆಸರಿಗೆ ...ೆ - ಆಸ್ತಿ ಬರೆಸಿಕೊಳ್ಳುತ್ತಾರೆ. ಪೊಲೀಸರು ...ವಾಗಿ ಕೊಟ್ಟ ಪಟ್ಟಾ ಪ್ರಕಾರ, ಅವರು ಆ ... ಆಸ್ತಿಯನ್ನು ಎಷ್ಟು ಸಮಯ ಬೇಕಾದರೂ ...ವಿಸಬಹುದು. ಅದನ್ನು ಮಾರಬಹುದು. ...ಗಲ್ಲಿ ಅವರ ವಾರಸುದಾರನ್ನಾಗಲಿ ಯಾರು ...ನಲ್ಲೂ ಪ್ರಶ್ನಿಸುವಂತಿಲ್ಲ".

...ು ಇತ್ತೀಚೆಗೆ ವಿಶ್ವಸಂಸ್ಥೆ ಇರಾಕ್ ಬಗ್ಗೆ ... ಸಮಿತಿಯಲ್ಲಿ ಮಂಜೂರು ಮಾಡಿದ ...ುದ ಸಾರಾಂಶ ಎನ್ನುತ್ತಾರೆ ಪ್ರಸಿದ್ಧ ...್ ದೈನಿಕವೊಂದರ ಲೇಖಕರು. ಎಂತಹ ...ನಕಾರಿ ಸ್ಥಿತಿ ವಿಶ್ವಸಂಸ್ಥೆಗೆ. ಎಂದೂ ವಿಶ್ವ ...ನಿಷ್ಟ ನಮ್ಮ ದೇಶದ ಪತ್ರಿಕೆಗಳಲ್ಲಿ ಯಾರೂ ... ಬರೆದಿರಲಿಲ್ಲ. ಇಂತಹ ಅವಮಾನಕಾರಿ ...ುವನ್ನು ವಿಶ್ವಸಂಸ್ಥೆ ... ಪಾಸು ...ರಲಿಲ್ಲ.


...ೋಧ ನಿರ್ಣಯ ...ಮೆರಿಕ ಬ್ರಿಟನ್, ... ಸ್ಪೈನ್ ...ೋಜಿಸಿದ ಈ ...ಯ 1483ನ್ನು ...ಸ್ಥೆ ಭದ್ರತಾ ಸಮಿತಿ ... ಮತಗಳಿಂದ ...ರಿಸಿತು. ಸಿರಿಯಾ ... ಮತದಾನದಲ್ಲಿ ...ಾಗಿತ್ತು. ಫ್ರಾನ್ಸ್, ರಶ್ಯಾ, ಚೀನಾ - ...ೂ ವಿಟೋ ಚಲಾಯಿಸಲಿಲ್ಲ. ಮಾತ್ರವಲ್ಲ ...ಿ ಮತ ಚಲಾಯಿಸಿದವು. ಎರಡು ...್ ಕಾಲ ಈ ನಿರ್ಣಯದ ಮೇಲೆ ತೆರೆಯ ...ಾರಿ 'ಗದ್ದಲ' ನಡೆದಿತ್ತು. ಫ್ರಾನ್ಸ್, ರಶ್ಯಾ, ...ಗಳು ನಾಲ್ಕು ಬಾರಿ ನಿರ್ಣಯವನ್ನು 90 ...ಗಳಿಗೆ ಗುರಿ ಮಾಡಿದರು. ನಾಲ್ಕನೇ ಬಾರಿ ...ರ್ಣಯಕ್ಕೆ ಒಪ್ಪಿಗೆ ಕೊಟ್ಟರು.

...ಯ 1483 (ಮುಖ್ಯ ಅಂಶಗಳಿಗೆ ಬಾಕ್ಸ್ ...) ಇರಾಕ್ ಯುದ್ಧಾನಂತರವಾದರೂ ...ೆ ಮೂಲಕ ಅಂತರ್ರಾಷ್ಟ್ರೀಯ ಸಮುದಾಯ ...ಕ ಬ್ರಿಟನ್ ನವ ಸಾಮ್ರಾಜ್ಯಶಾಹಿ ...ರುಸ್ಸು ನಿಯಂತ್ರಣಕ್ಕೆ ತರಬಹುದು ಎಂಬ ...ುಸಿಯಾಗಿದೆ. ಮುಖ್ಯವಾಗಿ ಫ್ರಾನ್ಸ್ ತನ್ನ ...ಂಡಿತ ಯುದ್ಧ ವಿರೋಧಿ ನಿಲುವನ್ನು ...ೆ. ಯುದ್ಧವನ್ನು ವಿಶ್ವಸಂಸ್ಥೆ ಕಾನೂನು ...ಸುವುದನ್ನು ತಾನು ಬಿಡುವುದಿಲ್ಲ. ಅಗತ್ಯ ...ಟೋ ಚಲಾಯಿಸುತ್ತೇವೆ ಎಂಬ ಹೇಳಿಕೆ ...ಿದೆ. ಜರ್ಮನಿ ಸಹ ಬಾಯಿಮಾತಿನಲ್ಲಿ ...ುದ್ಧ ಅಮೇರಿಕ ಬ್ರಿಟನ್‌ಗಳ ಮೇಲೆ ...ೇರುವಲ್ಲಿ ವಿಫಲವಾಗಿದೆ. ಅಮೇರಿಕ ಬ್ರಿಟನ್‌ಗಳು ಅಮಿತ ಬೆದರಿಕೆಗಳ ತಂತ್ರಗಳನ್ನು ಬಳಸಿ ಸಾಧಿಸಿದ್ದಾರೆ. ಸ್ಪೈನ್, ಇಟಲಿ ಮತ್ತು ಪೋಲೆಂಡ್ ಹಂಗೇರಿಗಳಂತಹ ಪೂರ್ವ ಯುರೋಪಿನ ದೇಶಗಳು ಅಮೇರಿಕ ಬ್ರಿಟನ್‌ಗಳ ಕುಮ್ಮಕ್ಕಿನ ಮೇಲೆ ಯುರೋಪಿಯನ್ ಒಕ್ಕೂಟ ಒಡೆಯುವ ಬೆದರಿಕೆ ಹಾಕಿದ್ದವು.

ಇರಾಕ್‌ಗೆ ವಿಶ್ವಸಂಸ್ಥೆ ಪ್ರತಿನಿಧಿಯಾಗಿ ಅಮೇರಿಕನ್ ಸರ್ಕಾರ ನಿರ್ಧರಿಸಿರುಂತೆ ಬ್ರೆಜಿಲಿಯನ್ ರಾಜತಾಂತ್ರಿಕ ನೊಬ್ಬನನ್ನು ನೇಮಿಸಲಾಗಿದೆ. ಇರಾಕಿನ ಸಾರ್ವಭೌಮತ್ವ ತನ್ನ ಭವಿಷ್ಯವನ್ನು ತಾನೇ ನಿರ್ಧರಿಸುವ ಹಕ್ಕು ವಿಶ್ವಸಂಸ್ಥೆ ಆ ಪ್ರಕ್ರಿಯೆಯಲ್ಲಿ ಎಲ್ಲಾ ಸಹಾಯ ನೀಡಲು ಮುಂತಾದ ಎಲ್ಲಾ ಮಾತುಗಳನ್ನು ನಿರ್ಣಯ ಹೇಳಿದರೂ ಅದು ಬರೀ ಬೊಗಳೆ. ಪ್ರಾಯೋಗಿಕವಾಗಿ ಅನ್ವಯವಾಗಿ ಎಲ್ಲಾ ನಿರ್ಣಯದ ಅಂಶಗಳು ಇರಾಕಿನ ಸಾರ್ವಭೌಮತ್ವ ವನ್ನು ಧಿಕ್ಕರಿಸಿವೆ. ಅಮೇರಿಕ-ಬ್ರಿಟನ್ ಅತಿಕ್ರಮಣ ಮತ್ತು ನಗ್ನ ನವ ಸಾಮ್ರಾಜ್ಯಶಾಹಿಗೆ ಕಾನೂನುಬದ್ಧತೆಯ ಕಿರು ಲಂಗೋಟಿ ಒದಗಿಸಿದೆ.

ಈ ಬೆಳವಣಿಗೆಯೊಂದಿಗೆ ನವ-ಸಾಮ್ರಾಜ್ಯ ಶಾಹಿಗೆ ಪ್ರತಿರೋಧ ಇರಾಕಿನ ಮತ್ತು ಅರಬ್ ಜನತೆ, ಜಗತ್ತಿನ ಜನತೆಯ ಸೌಹಾರ್ದ ಬೆಂಬಲದಿಂದ ಮಾತ್ರ ಸಾಧ್ಯ ಎಂದು ಸ್ಪಷ್ಟವಾಗಿದೆ. ಯುರೋಪಿಯನ್ ಒಕ್ಕೂಟ ಅಥವಾ ಫ್ರಾನ್ಸ್ ಜರ್ಮನಿಗಳು ಮೂರನೇ ಜಗತ್ತಿನ ದೇಶಗಳ ಸುಲಿಗೆ ಮಾಡುವುದರಲ್ಲಿ ಪ್ರತಿರೋಧ ಒಡ್ಡುವುದಿಲ್ಲ ಮಾತ್ರವಲ್ಲ. ಲೂಟಿಯಲ್ಲಿ ಪಾಲಿಗೆ ಹಲ್ಲುಗಿಂಜುತ್ತಾರೆ ಎಂಬುದು ಸ್ಪಷ್ಟವಾಗಿದೆ.

ಅಮೇರಿಕನ್ ಪಡೆಗಳ ವಿರುದ್ಧ ಮೊದಲ ಭಾರಿ ಪ್ರತಿಭಟನೆ.



ಅಮೇರಿಕ ಬ್ರಿಟನ್ ಪಡೆಗಳು ಇರಾಕಿನ ಅತಿಕ್ರಮಣ ಮಾಡಿದಾಗಿನಿಂದ ಸಣ್ಣ-ಪುಟ್ಟ ಪ್ರತಿಭಟನೆಗಳು ಪಡೆಗಳ ಮೇಲೆ ದಾಳಿ, ಅಮೇರಿಕನ್ ಪಡೆಗಳ ಗೋಲಿಬಾರಿನ ಬಗ್ಗೆ ಆಕ್ರೋಶ ಅಲ್ಲಲ್ಲಿ ಸಿಡಿದೇಳುತ್ತಿತ್ತು. ಪ್ರತಿದಿನ ಇರಾಕ್ ದೇಶದಾದ್ಯಂತ ಇಂತಹ ಘಟನೆಗಳು ವರದಿಯಾಗಿದ್ದವು. ಮೇ 19 ರಂದು ಬಾಗ್ದಾದ್‌ನಲ್ಲಿ ನಡೆದ ಪ್ರತಿಭಟನಾ ಪ್ರದರ್ಶನ ಅತ್ಯಂತ ದೊಡ್ಡದೂ ಅತ್ಯಂತ ಸಂಘಟಿತವೂ ಆಗಿ ಗಮನ ಸೆಳೆದಿದೆ.

ಹತ್ತು ಸಾವಿರಕ್ಕೂ ಹೆಚ್ಚು ಶಿಯಾ ಮುಸ್ಲಿಮರು ಸುನ್ನಿ ಬಣದ ಮಸೀದಿ ಬಳಿ ಸೇರಿ(ಉತ್ತರ ಬಾಗ್ದಾದನಲ್ಲಿರುವ ಅಜಮಾಯಾ) ಟೈಗ್ರಿಸ್ ನದಿ ಸೇತುವೆ ದಾಟಿ ಕದಮಿಯಾದಲ್ಲಿರುವ ಅತ್ಯಂತ ಪವಿತ್ರ ಶಿಯಾ ಮಸೀದಿಯತ್ತ ಮೆರವಣಿಗೆಯಲ್ಲಿ ಹೋದರು. ಶಿಯಾ - ಸುನ್ನಿ ಮುಸ್ಲಿಮರು ಐಕ್ಯತೆಯನ್ನು ತೋರಿಸುವುದು ಧಾರ್ಮಿಕ ಬಲಗಳ ಆಧಾರದ ಮೇಲೆ ಇರಾಕ್ ಒಡೆಯುವ ಪ್ರಯತ್ನಕ್ಕೆ ಪ್ರತಿಭಟನೆ ಸಹ ಇದಾಗಿತ್ತು. ಇದು ಅತ್ಯಂತ ಶಾಂತಿಯುತ ಪ್ರದರ್ಶನವೂ ಆಗಿತ್ತು. ಅಮೇರಿಕಾ ಪಡೆಗಳು ಹಲವು ಕಟ್ಟಡಗಳ ಮೇಲಿಂದ ಸಶಸ್ತ್ರ ಪಹರೆ ಜತೆ ನೋಡುತ್ತಿದ್ದರು. ಪ್ರದರ್ಶನಕಾರರಲ್ಲಿ ಸ್ವಯಂ ಸೇವಕರು ಎಕೆ-47 ಜತೆಗೆ ಸಶಸ್ತ್ರ ಪ್ರತಿರೋಧಕ್ಕೆ ಸಜ್ಜಾಗಿದ್ದರು.

ಪ್ರದರ್ಶನಕಾರರು 'ವಿದೇಶಿ ಆಡಳಿತ ಬೇಡ ಬೇಡ' 'ಅಮೇರಿಕನ್ನರು ಬೇಡ ಬೇಡ' 'ನಾವು ನಮ್ಮ ದೇಶ ಮಾರುವುದಿಲ್ಲ' ಶಿಯಾ ಇಲ್ಲ, ಸುನ್ನಿ ಇಲ್ಲ - ಬರಿಯ ಇಸ್ಲಾಮಿಕ್ ಐಕ್ಯತೆ 'ನಮಗೆ ಕಳ್ಳ ಇರಾಕಿಗಳು ಬೇಡ, ಪ್ರಾಮಾಣಿಕ ಇರಾಕಿಗಳು ಬೇಕು' ಕೊನೆಯ ಘೋಷಣೆ ಇರಾಕಿ ನ್ಯಾಶನಲ್ ಕಾಂಗ್ರೆಸ್ ಮುಖ್ಯಸ್ಥ ಅಹ್ಮದ್ ಚಲಾಬಿಯ ವಿರುದ್ಧ. ಶಿಯಾ ಧಾರ್ಮಿಕ ಅಧಿಕಾರಿಗಳು ತಾತ್ಕಾಲಿಕ ಸರ್ಕಾರ ರಚಿಸಬೇಕು ಎಂದು ಒತ್ತಾಯಿಸುವ ಬ್ಯಾನರುಗಳು ಮೆರವಣಿಗೆಯಲ್ಲಿ ಕಂಡು ಬಂದವು.

ಇರಾಕಿ ಆಕ್ರೋಶ ಎಲ್ಲಾ ಕಡೆ ಅಕ್ರಮಣ, ಹಿಂಸಾತ್ಮಕ ಪ್ರತಿಭಟನೆ ರೂಪ ತಾಳುತ್ತಿದೆ. ಶಿಯಾಗಳು ಅಮೇರಿಕನ್ನರನ್ನು ಬೆಂಬಲಿಸಬಹುದು ಎಂಬ ಅಮೇರಿಕನ್ ನಿರೀಕ್ಷೆ ಹುಸಿಯಾಗಿದೆ. ಬದಲಾಗಿ ಅಮೇರಿಕಕ್ಕೆ ಇರಾಕ್‌ನಾದ್ಯಂತ ಪ್ರತಿರೋಧ ಒಡ್ಡಬಲ್ಲ ಶೀಯ ಧಾರ್ಮಿಕ ನಾಯಕರೇ ಇದ್ದಾರೆ. ಅವರೇ ಇರಾಕಿ ಜನತೆಯ ಪ್ರತಿರೋಧದ ಕೇಂದಬಿಂದುವಾದರೂ ಆಶ್ಚರ್ಯವಿಲ್ಲ. ಇದು ಅಮೇರಿಕನ್ನರನ್ನು ಯೋಚನೆಗೀಡು ಮಾಡಿದೆ. ನೀರು, ವಿದ್ಯುತ್, ಕಾನೂನು - ವ್ಯವಸ್ಥೆ, ಉದ್ಯೋಗ ಜನರನ್ನು ಕಾಡುವ ಈ ಯಾವುದೇ ಸಮಸ್ಯೆಗಳಿಗೆ ಪರಿಹಾರ ಒದಗಿಸುವಲ್ಲಿ ವಿಫಲವಾಗಿ ವಿದೇಶಿ ಆಡಳಿತದ ವಿರುದ್ಧ ಆಕ್ರೋಶ ಭುಗಿಲೇಳಲು ಬಹಳ ಸಮಯವಾಗಲಿಕ್ಕಿಲ್ಲ.

ನಮ್ಮ ಪಡೆಗಳನ್ನು ಕಳಿಸುವುದು ಬೇಡ?

ಇರಾಕಿನಲ್ಲಿ ಪ್ರತಿದಿನ ಜನರ ಆಕ್ರೋಶ ಹಿಂಸರೂಪ ತಾಳುತ್ತಿದೆ. ಹಲವಾರು ಅಮೇರಿಕನ್ ಸೈನಿಕರು ಇಂತಹ ದಾಳಿಗಳಲ್ಲಿ ಸತ್ತಿದ್ದಾರೆ. ಇಲ್ಲವೇ ತೀವ್ರವಾಗಿ ಗಾಯಗೊಂಡಿದ್ದಾರೆ. ಅಮೇರಿಕನ್ ಸರ್ಕಾರ ಇದರಿಂದ ತೀವ್ರ ಚಿಂತಿತವಾಗಿದೆ. ಅದಕ್ಕೊಂದು ಚಾಣಾಕ್ಷ ಉಪಾಯ ಹೂಡಿದೆ. ಇರಾಕಿನ 'ಪೊಲೀಸು ಕರ್ತವ್ಯ'ಕ್ಕೆ (ಜನತೆಯ ಪ್ರತಿಭಟನೆ ಹತ್ತಿಕ್ಕಲು ಎಂದು ಓದಿಕೊಳ್ಳಿ) ಅಂತರ್ರಾಷ್ಟ್ರೀಯ ಪಡೆಗಳನ್ನು ಸಿದ್ಧಗೊಳಿಸುವುದಾಗಿ ಹೇಳಿದೆ. ಹಂಗೇರಿ, ಪೋಲೆಂಡ್ ನಂತಹ ದೇಶಗಳು ಅಮೇರಿಕಾದ ಕೃಪಾಕಟಾಕ್ಷ ಪಡೆಯಲು ಇದರಲ್ಲಿ ಉತ್ಸಾಹದಿಂದ ಪಾಲುಗೊಳ್ಳುತ್ತಿವೆ. ಅಮೇರಿಕನ್ ಸರ್ಕಾರ ಭಾರತದ ಒಂದು ಡಿವಿಜನ್‌ನಷ್ಟು ದೊಡ್ಡ ಪಡೆಯನ್ನು ಕೇಳಿದೆ. ಕೆಲವು ದಿನಗಳ ಹಿಂದೆ ಬಂದ ವಿದೇಶಾಂಗ ಖಾತೆ ಅಧಿಕಾರಿ, ಬ್ರಿಜೇಶ್ ಮಿಶ್ರಾರ ಅಮೇರಿಕನ್ ಭೇಟಿ, ಮಿಲಿಟರಿ ಅಧಿಕಾರಿಗಳ ಸಭೆಯಲ್ಲಿ ಈಗಾಗಲೇ ಹಲವು ಬಾರಿ ಈ ಬಗ್ಗೆ ಮಾತುಕತೆಯಾಗಿದೆ.

ಭಾರತ ಸರ್ಕಾರದ ದೊಡ್ಡ ವಿಭಾಗ ಇರಾಕ್‌ಗೆ ಪಡೆಗಳನ್ನು ಕಳಿಸುವುದರ ಪರವಾಗಿದೆ. ಕೆಲವರು ಮಾತ್ರ ವಿರೋಧಿಸುತ್ತಾರೆ ಎಂದು ಗೊತ್ತಾಗಿದೆ. ಅಮೇರಿಕನ್ ಅತಿಕ್ರಮಣವನ್ನು ಪಾರ್ಲಿಮೆಂಟು ಒಂದು ನಿರ್ಣಯದ ಮೂಲಕ ಖಂಡಿಸಿರುವಾಗ ಪಡೆಗಳನ್ನು ಕಳಿಸುವುದು ಹೇಗೆ ಎಂದಷ್ಟೇ ಸರ್ಕಾರ ಚಿಂತಾಕ್ರಾಂತವಾಗಿದೆ. ಇಂತಹ ಸನ್ನಿವೇಶದಲ್ಲಿ ನಮ್ಮ ಪಡೆಗಳನ್ನು ಇರಾಕಿಗೆ 'ಪೊಲೀಸು ಕರ್ತವ್ಯ'ಕ್ಕೆ ಕಳಿಸಬಾರದು. ನಮ್ಮ ಸೈನಿಕರನ್ನು ಅಮೇರಿಕಾದ ವಿರುದ್ಧದ ಇರಾಕಿ ಜನತೆಯ ರೋಷಕ್ಕೆ ಬಲಿಕೊಡುವುದು ಬೇಡ. ನಮ್ಮ ಸೈನಿಕರನ್ನು ಆಕ್ರಮಣಕಾರ, ದರೋಡೆಗಾರರ ರಕ್ಷಣೆಗೆ ಬಾಡಿಗೆ ಕೊಡುವುದು ಬೇಡ ಎಂದು ಜನತೆ ಒಕ್ಕೊರಲಿನಿಂದ ದನಿ ಎತ್ತಬೇಕು. ■

ಭದ್ರತಾ ಸಮಿತಿ ನಿರ್ಣಯ 1483 ಏನನ್ನುತ್ತದೆ?

- ಅಮೇರಿಕ ಬ್ರಿಟನ್, ಇರಾಕಿನ ಯುದ್ಧಾನಂತರ ಅತಿಕ್ರಮಣ ಅಧಿಕಾರಿಗಳು ಎಂದು ಮಾನ್ಯ ಮಾಡುತ್ತದೆ.
- ಇರಾಕಿನಲ್ಲಿ ಪ್ರಾತಿನಿಧಿಕ ಸರ್ಕಾರ ರಚಿಸುವ ಹಕ್ಕು ಈ ಅತಿಕ್ರಮಣ ಅಧಿಕಾರಿಗಳದ್ದೆ.
- ಇರಾಕಿನಲ್ಲಿ ನೇಮಿಸಲಾಗಿರುವ ವಿಶೇಷ ಪ್ರತಿನಿಧಿ ವಿಶ್ವಸಂಸ್ಥೆಯ ಕೆಲಸಗಳನ್ನು ಸಂಯೋಜಿಸುತ್ತಾರೆ. ಅಲ್ಲಿನ ಅಧಿಕಾರಿಗಳ ಜತೆ ಕೆಲಸ ಮಾಡುತ್ತಾರೆ. ವಿಶ್ವಸಂಸ್ಥೆ ಪ್ರತಿನಿಧಿ ಅಧಿಕಾರ ಅಮೇರಿಕ-ಬ್ರಿಟನ್ ಅಧಿಕಾರಕ್ಕೆ ಅಧೀನವಾಗಿರುತ್ತದೆ.
- ಕುವೈತ್ ಆಕ್ರಮಣದ ನಂತರದ ದಿಗ್ಬಂಧನವನ್ನು ತೆಗೆಯಲಾಗುತ್ತದೆ. ಇರಾಕಿ ತೈಲದ ಮೇಲೆ ವಿಶ್ವ ಸಂಸ್ಥೆಗಿದ್ದ ಅಧಿಕಾರವನ್ನು ಅಮೇರಿಕಾ-ಬ್ರಿಟನ್ ಅಧಿಕಾರಿಗಳಿಗೆ ಕೊಡಲಾಗುವುದು.
- ಐದು ವರ್ಷಗಳ ಕಾಲ ಅಮೇರಿಕ - ಬ್ರಿಟನ್ ಅಧಿಕಾರಿಗಳು ಇರಾಕಿ ತೈಲ, ಪ್ರಾಕೃತಿಕ ಗ್ಯಾಸ್‌ಗಳನ್ನು ಬಳಸಬಹುದು. ಅದರ ವಹಿವಾಟನ್ನು ಎಲ್ಲಾ ರೀತಿಯಲ್ಲಿ ಮುಂದುವರಿಸಬಹುದು. ಅವರ ಜತೆ ವಹಿವಾಟನ್ನು ಯಾವುದೇ ರೀತಿಯಲ್ಲಿ ಯಾವುದೇ ದೇಶದ ಅಂತರ್ರಾಷ್ಟ್ರೀಯ ಕಾನೂನಿನ ಪ್ರಕಾರ ಪ್ರಶ್ನಿಸುವಂತಿಲ್ಲ.

ನಮ್ಮ ಪಡೆಗಳನ್ನು ಏಕೆ ಕಳಿಸಬಾರದು?

- ಇರಾಕನ್ನು ಅಮೇರಿಕ ಕಾನೂನು ವಿರುದ್ಧ ಯುದ್ಧ ಆಕ್ರಮಣ ನಡೆಸಿ ವಶಪಡಿಸಿಕೊಂಡಿದೆ.
  - ಅದನ್ನು ನಮ್ಮ ಪಾರ್ಲಿಮೆಂಟ್ ಖಂಡಿಸಿದೆ.
- ಇತ್ತೀಚೆಗೆ ವಿಶ್ವಸಂಸ್ಥೆ ಪಾಸು ಮಾಡಿರುವ ನಿರ್ಣಯದ ಪ್ರಕಾರ ಅದಕ್ಕೆ ಇರಾಕಿನಲ್ಲಿ ಯಾವುದೇ ಪಾತ್ರವಿಲ್ಲ. ಇರಾಕಿ ಆಡಳಿತ ಅಮೇರಿಕನ್ ಕೈಯಲ್ಲಿರುತ್ತದೆ.
  - ನಮ್ಮ ಪಡೆಗಳನ್ನು ಕಳಿಸಿದರೆ ಅದು ಅಮೇರಿಕನ್ ನಿಯಮದಲ್ಲಿರುತ್ತದೆ.
- ವಿಶ್ವಸಂಸ್ಥೆ ಮೇಲ್ವಿಚಾರಣೆ ಇಲ್ಲದೆ, ನಮ್ಮ ಪಡೆಗಳನ್ನು ವಿದೇಶಗಳಿಗೆ ಕಳಿಸುವುದು ನಮ್ಮ ಘೋಷಿತ ನೀತಿಗೆ ವಿರುದ್ಧ.
  - ಇದು ನಮ್ಮ ಘೋಷಿತ ವಿದೇಶಿ ನೀತಿಗೆ ವಿರುದ್ಧ.
- ಹಂಗೇರಿ, ಥೈಲೆಂಡ್ ನಂತಹ ಹೊಸ ಅಮೇರಿಕನ್ ಬಾಲಬಡುಕ ಸರ್ಕಾರಗಳು ಬಿಟ್ಟರೆ ಬೇರೆ ಯಾವುದೇ ದೇಶ ಇಂತಹ ಪ್ರಸ್ತಾಪ ಪರಿಶೀಲಿಸುತ್ತಿಲ್ಲ.
  - ಅಮೇರಿಕಾದ ಜೂನಿಯರ್ ಪಾರ್ಟನರ್ ಎಂದು ಜಗಜ್ಜಾಹೀರುಮಾಡಿದಂತಾಗುತ್ತದೆ. ಒಂದು ಕಡೆ ದೇಶಭಕ್ತಿ, ದೇಶದ ಹೆಮ್ಮೆ ಬಗ್ಗೆ ಹೇಳುತ್ತಾ ಇನ್ನೊಂದು ಕಡೆ ಅಮೇರಿಕನ್ ಜೂನಿಯರ್ ಪಾರ್ಟನರ್ ಆಗಬಯಸಿ ವಾಜಪೇಯಿ ಸರ್ಕಾರ ಈ ದೇಶದ್ರೋಹಿ ನೀತಿಯನ್ನು ವಿರೋಧಿಸಬೇಕು. ಇರಾಕಿಗೆ ನಮ್ಮ ಪಡೆಗಳನ್ನು ಕಳಿಸುವುದು ಬೇಡ ಎಂದು ಒತ್ತಾಯಿಸಬೇಕು. ಅಮೇರಿಕನ್ ಸರ್ಕಾರದ ಜತೆಗೆ ವಾಜಪೇಯಿ ಸರ್ಕಾರ ನಡೆಸಿರುವ ಗುಪ್ತ ಮಾತುಕತೆ ನಿಲ್ಲಿಸಬೇಕು ಎಂದು ಸಿಪಿಐ(ಎಂ) ಪಾಲಿಟ್ ಬ್ಯೂರೋ ಕರೆ ನೀಡಿದೆ.

ಸಿನಿಮಾ

ನಿರೀಕ್ಷೆ ಹುಸಿಗೊಳಿಸಿದ 'ಲಂಕೇಶ್ ಪತ್ರಿಕೆ'

ಪತ್ರಿಕಾರಂಗಕ್ಕೆ ಸಂಬಂಧಿಸಿದ ಚಿತ್ರ ಇದೆಂದು ಕುತೂಹಲ ಕೆರಳಿಸಿತ್ತು. ಅದಕ್ಕೆ ಮುಖ್ಯ ಕಾರಣ ಇದರ ನಿರ್ದೇಶಕ ಇಂದ್ರಜಿತ್ ಕೂಡಾ ಒಬ್ಬ ಪತ್ರಕರ್ತ ಮತ್ತು ಪತ್ರಿಕೋದ್ಯಮಿ ಎಂಬುದು.


ವಸುಂಧರಾ ದಾಸ್ - ದರ್ಶನ್

ಪತ್ರಿಕಾರಂಗದ ಒಳಹೊರಗುಗಳ ಬಗ್ಗೆ ಬೆಳಕು ಚೆಲ್ಲಬಹುದೆಂದು ನಿರೀಕ್ಷಿಸಲಾಗಿದ್ದ ಈ ಚಿತ್ರ ಅದಕ್ಕೆ ತದ್ವಿರುದ್ಧವಾಗಿದೆ. ಈ ರಂಗದ ಬಗ್ಗೆ ಲವಲೇಶವೂ ಗಂಧಗಾಳಿಯಿಲ್ಲದ ಬೇರೆಯವರೂ ಕೂಡಾ ಇಷ್ಟು ಕೆಟ್ಟದಾಗಿ ತೆಗೆಯಲು ಸಾಧ್ಯವಿಲ್ಲ. ಆದರೆ ಇಂದ್ರಜಿತ್ ತಾನೇನೋ ಸಾಧಿಸಿದ್ದೇನೆಂದು ಬೊಗಳೆ ಹೊಡೆಯುತ್ತಿದ್ದಾರೆ. ಈ ಸಿನಿಮಾವನ್ನು 'ಸಿನಿಮಾ ಕನ್ನಡಕ' ಹಾಕಿಕೊಂಡು ನೋಡಬೇಕೆಂದು ಇಂದ್ರಜಿತ್ ಆಗ್ರಹಿಸಿದ್ದಾರೆ. ನಿಜ, ಈ ಚಿತ್ರ ನೋಡಲು ತೆರೆಯ ಮೇಲೆ ಏನೂ ಕಾಣದಂತಹ 'ಕಪ್ಪು ಕನ್ನಡಕ' ಹಾಕಿಕೊಂಡು ಪ್ರೇಕ್ಷಕರು ತಲೆನೋವಿನಿಂದ ಪಾರಾಗಬೇಕಾಗಿದೆ.

ಅಸಲಿಗೆ ಇದೊಂದು ಪಕ್ಕಾ ಕೆಟ್ಟ ಕಮರ್ಶಿಯಲ್ ಚಿತ್ರ. ಇಲ್ಲಿ ಎಲ್ಲವೂ ಇದೆ. ಹೊಡೆದಾಟ, ಕುಣಿದಾಟ, ಬಿಚ್ಚಾಟ, ಕ್ಯಾಬರೆ. ಈ ಚಿತ್ರದಲ್ಲಿ ಯಾವ ಪಾತ್ರಗಳೂ ಪ್ರಮುಖವಲ್ಲ.

ಲಂಕೇಶ್ ಪತ್ರಿಕೆಯ ಸಂಪಾದಕ ಲಂಕೇಶ್ ಮುಖ್ಯಮಂತ್ರಿಯವರ ದ್ವೇಷ ಕಟ್ಟಿಕೊಂಡು ಅವರಿಂದ ಹತ್ಯೆಗೀಡಾಗುತ್ತಾರೆ. ಇದು ಸಾಲದೆಂಬಂತೆ ಆ ಪತ್ರಿಕೆಯ ಇತರರೂ ಕೂಡಾ ಇದೇ ಕಾರಣಗಳಿಗೆ ನಡುಬೀದಿಯಲ್ಲೇ ಕೊಲೆಗೀಡಾಗುತ್ತಾರೆ. ಲಂಕೇಶರ ಪುತ್ರ ಇಂದ್ರ ಇವರನ್ನು ಎದುರಿಸಿ ನಿಂತು ಹೋರಾಟಕ್ಕಿಳಿಯುತ್ತಾನೆ (ಲೇಖನಿಯ ಮೂಲಕ ಅಲ್ಲ, ಬಂದೂಕಿನ ಮೂಲಕ!). ಕಡೆಗೆ ಮುಖ್ಯಮಂತ್ರಿಯನ್ನು ಹತ್ಯೆ ಮಾಡುತ್ತಾನೆ. ಇದು ಇಂದ್ರಜಿತ್ ಕಲ್ಪನೆಯ ಅದ್ಭುತ ಕಥೆ!

ಬೇರೆ ಯಾವುದೋ ಕಥೆ ಬೇಡ, ಅವರ ತಂದೆಯಾದ ಲಂಕೇಶರೇ ಎದುರಿಸಿದ ಅನೇಕ ಸಂಘರ್ಷಮಯ ಕ್ಷಣಗಳನ್ನೇ ಚಿತ್ರವಾಗಿಸಿದ್ದರೇ ಆದರೆ 'ಎಲ್ಲಾ ಬಿಟ್ಟು ಭಂಗಿ ನೆಟ್ಟ' ಎನ್ನುವಂತಾಗಿದೆ ಇಂದ್ರಜಿತ್‌ರ 'ಲಂಕೇಶ್‌ಪತ್ರಿಕೆ'

ಇನ್ನು ತಾಂತ್ರಿಕವಾಗಿಯೂ ವಿಶೇಷತೆಯೇನೂ ಇಲ್ಲ. ನಟನೆಯಲ್ಲೂ ಯಾರೂ ಗಮನ ಸೆಳೆಯುವುದಿಲ್ಲ. ಚಿತ್ರದ ಹೀರೋ ದರ್ಶನ್ ವರದಿಗಾರನಾಗಿ ಒಮ್ಮೆಯೂ ಲೇಖನಿ ಹಿಡಿಯುವುದಿಲ್ಲ. ನಾಯಕಿ ವಸುಂಧರಾದಾಸ್ ಮುಖತೋರಿಸಿದಾಗಲೆಲ್ಲಾ ಒಂದೊಂದು ಹಾಡು; ನಟನೆಗೆ ಅವಕಾಶವೇ ಇಲ್ಲ.

ಚಿತ್ರ ಹೇಳುವ ಸಂದೇಶ - ರಾಜಕಾರಣಿಗಳ ಬಣ್ಣ ಬಯಲು ಮಾಡಬೇಕೆಂದರೆ ಪತ್ರಿಕೆಯಲ್ಲಿ ವರದಿ ಮಾಡುತ್ತಾ ಕುಳಿತರೆ ಆಗುವುದಿಲ್ಲ. ಕೈಯಲ್ಲಿ ಆಯುಧ ಹಿಡಿಯಬೇಕು, ಅವರನ್ನು ಮುಗಿಸಬೇಕು ಅತ್ಯಂತ ಬಾಲಿಶ ಸಂದೇಶ.

ಯಾವುದೇ ಒಂದು ಪತ್ರಿಕೆ ಸಮಾಜಕ್ಕೆ ಋಣಿಯಾಗಿ, ಸಮಾಜಘಾತುಕ ಶಕ್ತಿಗಳ ವಿರುದ್ಧ ತನ್ನ ಲೇಖನಗಳ ಮೂಲಕ ದನಿಯೆತ್ತಿ, ಜನರನ್ನು ಅವರ ವಿರುದ್ಧ ಅಣಿನೆರೆಸುವಲ್ಲಿ ಪ್ರಮುಖ ಪಾತ್ರವಹಿಸುವಂತಾಗಬೇಕು. ಜನಪರವಾಗಿದ್ದು, ಸತ್ಯ ಏನೆಂಬುದನ್ನು ತಿಳಿಸಬೇಕು. ಅಂತಹ ಸಂದರ್ಭದಲ್ಲಿ ಜನರ ಚಳುವಳಿಯಲ್ಲಿ ನೇರಭಾಗಿದಾರರೂ ಆಗಬಹುದು.

ದೇವರಿಲ್ಲದ ಗುಡಿಯಲ್ಲಿ

ಗೆಳೆಯ ಪ್ರದೀಪ್ ಫ್ಲೇವಿನ್ ಲಾಟರಿ ಟಿಕೆಟ್ ತಂದಿದ್ದ. ಅವನಿಗೆಂಥದೋ ಭರವಸೆ. 'ಒಂದಲ್ಲ ಒಂದು ದಿನ ಹೊಡೆದೇ ಹೊಡೆಯುತ್ತದೆ' ಎಂದು. ನಾನು ತಮಾಷೆಗೆ 'ಒಂದು ಕೋಟಿ ಬಂದರೆ ಏನು ಮಾಡುತ್ತೀಯೋ?' ಎಂದೆ. 'ಒಂದು ಹೈಟೆಕ್ ದೇವಸ್ಥಾನ ಕಟ್ಟಿಸಬೇಕೆಂದಿದ್ದೇನೆ' ಎಂದ. ಅಂದರೆ ಆತನಲ್ಲಿ ಅಂತಹ ಉತ್ಕಟ ಭಕ್ತಿ ಇದೆ ಅಂತಲ್ಲ, ಜನರ ಭಕ್ತಿಯನ್ನು ಎನ್ ಕ್ಯಾಷ್ ಮಾಡಿಕೊಳ್ಳುವ ಹುನ್ನಾರ ಅದು. ಹಣ ಮಾಡಲು ದೇವಸ್ಥಾನಗಳಿಗಿಂತ ಬೇರೊಂದು ಮಾಧ್ಯಮವಿಲ್ಲ ಅನ್ನುವ ಇಂತಹ ಸಿದ್ಧಾಂತದ ತಳಹದಿಯ ಮೇಲೆಯೇ ಇಂದು ಇಸ್ಕಾನ್‌ನಂಥ ದೇವಾಲಯಗಳು ಭದ್ರವಾಗಿ ತಳವೂರಿರುವುದು.

ಯಾಕೆ ಹೇಳಿದೆ ಎಂದರೆ, ಇತ್ತೀಚೆಗಷ್ಟೇ ಇಸ್ಕಾನ್ ದೇವಸ್ಥಾನಕ್ಕೆ ಹೋಗಿದ್ದೆ. ಕೈಗೆಟುಕುವಷ್ಟು ದೂರದಲ್ಲಿದ್ದರೂ ಅದೇಕೋ ಅದನ್ನು ನೋಡಬೇಕೆಂಬ ತವಕ ನನ್ನಲ್ಲಿ ಹುಟ್ಟಿರಲೇಯಿಲ್ಲ. ಆಕಸ್ಮಿಕವಾಗಿ ಅತ್ತ ಹೋದಾಗ ಗೆಳೆಯರೆಲ್ಲ ಹೋಗಿಬಂದೆವು. 'ಅಲ್ಲಿ ದೇವರಿಲ್ಲ ಮಾರಾಯ. ನಾಜೂಕಿನ ಜನರಿದ್ದಾರೆ- ದುಡ್ಡು ಮಾಡುವ ತಂತ್ರವಿದೆ' ಅಂತ ಗೆಳೆಯ ರಮೇಶ ಹೇಳುತ್ತಿದ್ದ ಮಾತುಗಳು, ಇಸ್ಕಾನ್‌ನ ಅದ್ದೂರಿತನ, ಮೊಸಾಯಿಕ್ ನೆಲಹಾಸು, ಮುಟ್ಟಿದರೆ ಮಾಸಿಬಿಡುತ್ತದೆನ್ನುವಂಥ ಗೋಡೆಗಳು, ಹೈಟೆಕ್ ಆಚರಣೆಗಳನ್ನು ನೋಡಿಬಂದ ಮೇಲೆ ನನ್ನಲ್ಲಿ ಮತ್ತಷ್ಟು ಜೀವ ಪಡೆದುಕೊಂಡವು. ನಿಜಕ್ಕೂ ಇದೊಂದು ದೇವಸ್ಥಾನವಲ್ಲ. ಒಂದು ಸುವ್ಯವಸ್ಥಿತ ವಾಣಿಜ್ಯ ಸಂಕೀರ್ಣ. ದೇವರು ಇಲ್ಲಿ ನೆಪಮಾತ್ರ. ನನ್ನ ಆತ್ಮೀಯಳೊಬ್ಬಳಿದ್ದಾಳೆ. ಪರಮ ದೈವಭಕ್ತೆ. "ಅಲ್ಲಿ ಭಕ್ತಿ ಅನ್ನುವುದು ಹುಟ್ಟುವುದೇಯಿಲ್ಲ" ಅನ್ನುತ್ತಾಳವಳು. ಅಲ್ಲಿ ಬಂದುಹೋಗುವ ಅನೇಕರ ಅಭಿಪ್ರಾಯವೂ ಇದಕ್ಕೆ ಹೊರತೇನಲ್ಲ. ವ್ಯಾಪಾರದ ಎಲ್ಲಾ ತಂತ್ರಗಳನ್ನು ಅಳವಡಿಸಿಕೊಂಡಿರುವ ಇಸ್ಕಾನ್ ... ಪಂಚತಾರಾ ಹೋಟೆಲ್‌ಗೇನೂ ಕಡಿಮೆ... ರೆಸ್ಟೋರೆಂಟ್ ಇದೆ, ಬೇಕರಿ ಇದೆ, ... ಚೆಂದದ ಬಟ್ಟೆ ಸಿಗುತ್ತದೆ, ರುಚಿರುಚಿ... ತಿಂಡಿತಿನಿಸು ಸಿಗುತ್ತದೆ - ಕೊನೆಗೊಂದು ... ತೀರ್ಥವೂ ಸಿಗುತ್ತದೆ- ಆದರೆ ಇಲ್ಲಿ ದೇ... ಸಿಗುತ್ತಾನೋ ಇಲ್ಲವೋ ಗೊತ್ತಿಲ್ಲ. ... ಹೋದರೂ ಹುಂಡಿಗಳು, ಅರ್ಚನೆ- ಅಭಿ... ನೆಪದಲ್ಲಿ ಹಣ ಬೇಡುವ, ಸೇವೆಯ ಹೆಸ... ಕಾವಲು ಕಾಯುವ ಕೃಷ್ಣ ಸೇವಕರು. ... ಅದ್ದೂರಿತನ, ಪ್ರದರ್ಶನ ಮತ್ತು ಪ್ರಚಾ... ನಿಮ್ಮನ್ನು ಘಾಸಿಗೊಳಿಸುತ್ತದೆ.

ಸಾಮಾನ್ಯ ಜನರಿಗೂ ನಿಲುಕ... ಕೃಷ್ಣನೆಂಬ ಮಹಾಶಯು ಹೀಗೆ ಪಂಚ... ವ್ಯವಸ್ಥೆಯಲ್ಲಿ ಕುಳಿತು ಭಕ್ತ ಮಹಾಶಯರ ... ಮಾಡುವ ರೀತಿ ನೋಡಿದರೆ 'ಕೃಷ್ಣ ಬೆಣ್ಣೆ... ಕದಿಯುವವನಲ್ಲ, ಸುಲಿಗೆಯನ್ನೂ ಮಾಡು... ಎಂದೆನಿಸುತ್ತದೆ. ಜನರ ಭಕ್ತಿಯನ್ನೇ ಬಂಡ... ಮಾಡಿಕೊಂಡು ಅವರನ್ನು ಮ... ಮಾನಸಿಕವಾಗಿ, ಆರ್ಥಿಕವಾಗಿ ಶೋ... ಇಂತಹ ವ್ಯವಸ್ಥಿತಿ ಕ್ರಿಯೆಗಳು ನಿ... ಆತಂಕಕಾರಿ. ಎಲ್ಲಿಂದಲೋ ಬಂದು ತ... ದೈವವನ್ನು ಕಣ್ಣಲ್ಲಿ ತುಂಬಿಕೊಳ್ಳಲು ಬ... ಭಕ್ತನನ್ನು ಕ್ಷಣ ನಿಲ್ಲಿಸದ ಈ ಮಂದಿ ಅದೇ... ತೀರ್ಥಗಳ ಮುಂದೆ ನಿಂತಾಗ ಓಲೈಸು... ನೋಡಿದರೆ ಅಸಹ್ಯ ಹುಟ್ಟಿಸುತ್ತದೆ. ಯ... ಜೀವನದ ನಡುವೆ ಮಾನಸಿಕ ನೆಮ್ಮ... ಪರಿತಪಿಸುವ ಜನಸಾಮಾನ್ಯರ ಭಕ್ತಿ ಹೀಗೆ... ರೂಪದಲ್ಲಿ ಸೋರಿಹೋಗಿ ಹಣ ಮ... ಹುಂಬರ ಹೊಟ್ಟೆ ಸೇರುತ್ತಿರುವುದು ಮೋಸವಲ್ಲದೆ ಮತ್ತೇನು?

- ರವಿಕುಮಾರ್ ಅ...

'ಹೊಸತು'


ಜಿಲ್ಲೆಗೆ ಶಾಶ್ವತ ನೀರಾವರಿ ಯೋಜನೆಗಳಿಗೆ ಆಗ್ರಹಿಸಿ ಕೋಲಾರದ ಜನತೆ ವಿಧಾನಸೌಧನಕ್ಕೆ ಕಾಲ್ನಡಿಗೆ ಜಾಥಾ... ಮೇ 30 ರಂದು ಬೆಂಗಳೂರಿಗೆ ಆಗಮಿಸಿದಾಗ.....

(ವಿವರ ವರದಿ ಮುಂದಿನ...

PRB DECR 319-79/79 AIKYARANGA WEEKLY Reg. No. 17015/64 CPM(G) / KA /BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor: S.Y.GURUSHANTH